# KPSC VAANI

Karnataka's no 1 compitative website
ಕರ್ನಾಟಕದ no 1 ಸ್ಪರ್ಧಾತ್ಮಕ ಜಾಲತಾಣ

## KPSC Vaani ಯಿಂದ ಮಾರ್ಚ್ 2020 ತಿಂಗಳ ಸಂಪೂರ್ಣ ಪ್ರಚಲಿತ ಘಟನೆಗಳು ನಿಮಗಾಗಿ, ನಿಮ್ಮ ಸ್ಪರ್ಧಾತ್ಮಕ ಪರೀಕ್ಷಾ ತಯಾರಿಗಾಗಿ

**ಇದೆ ರೀತಿಯ ಪ್ರತಿದಿನದ ಪ್ರಚಲಿತ ಘಟನೆಗಳಿಗಾಗಿ ಕೂಡಲೇ ಪ್ಲೇ ಸ್ಟೋರ್ KPSC Vaani ಆಯಪ್ ಡೌನ್ಲೋಡ್ ಮಾಡಿಕೊಳ್ಳಿ ಇಲ್ಲವೇ, www.kpscvaani.com ಜಾಲತಾಣಕ್ಕೆ ಕೂಡಲೇ ಭೇಟಿ ನೀಡಿ**

**Google Play Store ನಿಂದ KPSC Vaani app ಕೂಡಾ ಡೌನ್ಲೋಡ್ ಮಾಡಿಕೊಳ್ಳಿ**





Scan QR Code to download kpscvaani App

# Current affairs of March 2020 from KPSC Vaani

## 01 03 2020 ಅಫ್ಘಾನಿಸ್ತಾನದಲ್ಲಿ ಶಾಂತಿಗಾಗಿ ತಾಲಿಬಾನ್ ಅಮೆರಿಕ ಒಪ್ಪಂದ




ದೋಹಾ/ವಾಷಿಂಗ್ಟನ್ : ಯುದ್ಧಪೀಡಿತ ಅಫ್ಘಾನಿಸ್ತಾನದಲ್ಲಿ ಶಾಶ್ವತ ಶಾಂತಿ ನೆಲೆಸುವಂತೆ ಮಾಡುವ ಸಲುವಾಗಿ ಉಭಯ ದೇಶಗಳ ಅಧಿಕಾರಿಗಳು ಹಾಗೂ ಪ್ರತಿನಿಧಿಗಳು ಶನಿವಾರ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. 18 ವರ್ಷಗಳ ನಂತರ ಅಮೆರಿಕವು ಅಫ್ಘಾನಿಸ್ತಾನದ ತಾಲಿಬಾನ್‌ದ ಜೊತೆಗೆ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳುತ್ತಿದೆ. ಈ ಒಪ್ಪಂದವು ಕತಾರ್‌ನ ದೋಹಾದಲ್ಲಿ ನಡೆಯುತ್ತಿದೆ. ಈ ಐತಿಹಾಸಿಕ ಘಟನೆಗೆ ಭಾರತವೂ ಸಾಕ್ಷಿಯಾಗಿದೆ.
* ಈ ಶಾಂತಿ ಒಪ್ಪಂದ ಮೊದಲ ಹಂತವಾಗಿ ಅಫ್ಘಾನಿಸ್ತಾನದಲ್ಲಿರುವ ಸುಮಾರು 13 ಸಾವಿರ ಸೇನಾ ಸಿಬ್ಬಂದಿಯನ್ನು ಅಮೆರಿಕಾವು 8,600ಕ್ಕೆ ಇಳಿಕೆ ಮಾಡಿದೆ.

## 01 03 2020 ಕರಾವಳಿ ಕಾವಲಿಗೆ ಸಮರ್ಪಣೆಗೊಂಡ ಹೊಸ ಹಡಗು 'ವರದ್'




ಭಾರತದ ಕರಾವಳಿ ಕಾವಲಿಗಾಗಿ ಸಿದ್ಧಪಡಿಸಲಾಗಿರುವ 'ವರದ್' ಎಂಬ ದೈತ್ಯ ಹಡಗು ತನ್ನ ಸೇವೆ ಆರಂಭಿಸಿದೆ. ಕೇಂದ್ರ ಹಡಗು ಇಲಾಖೆಯ ಸಹಾಯಕ ಸಚಿವ ಮನ್ಸುಕ್ ಎಲ್. ಮಾಂಡವಿಯ ಈ ಗಸ್ತು ಹಡಗನ್ನು ಉದ್ಘಾಟಿಸಿದರು. ಈ ಹಡಗಿನ ಒಟ್ಟು ಉದ್ದ 321 ಅಡಿ ‘ಲಾರ್ಸನ್ ಆಯಂಡ್ ಟರ್ಬೋ (L&T;) ಕಂಪೆನಿಯು ಈ ಹಡಗನ್ನು ತಯಾರಿಸಿದೆ. ಆದುನಿಕ ನೇವಿಗೇಷನ್ ತಂತ್ರಜ್ಞಾನ ಅಳವಡಿಸಲಾಗಿದೆ.
10 ಸಾವಿರ ಕಿ.ಮೀ.ವರೆಗೆ ನಿರಂತರ ನಿಲುಗಡೆ ರಹಿತ ಪ್ರಯಾಣ ಸಾಮರ್ಥ್ಯ

# Current affairs of March 2020 from KPSC Vaani

01 03 2020 ಶೂಟಿಂಗ್‌ವಿಶ್ವಕಪ್‌ನಿಂದಹಿಂದೆಸರಿದಭಾರತ



ಕೊರೊನಾ ವೈರಸ್‌ನ ಭೀತಿಯಿಂದಾಗಿ ಮುಂದಿನ ತಿಂಗಳು ಸೈಪ್ರಸ್‌ನಲ್ಲಿ ನಡೆಯಲಿರುವ ಶಾಟ್‌ಗನ್ ಶೂಟಿಂಗ್ ವಿಶ್ವಕಪ್‌ನಲ್ಲಿ ಭಾಗವಹಿಸದೆ ಇರಲು ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ (ಎನ್‌ಆರ್‌ಎಐ) ನಿರ್ಧರಿಸಿದೆ. ಈಗಾಗಲೇಕೆಲವುರಾಷ್ಟ್ರಗಳುಪ್ರಯಾಣಕ್ಕೆನಿಷೇಧಹೇರಿವೆ.

01 03 2020 ಟೌನ್‌ಹಾಲ್‌ಬಳಿಪ್ರತಿಭಟನೆಗೆಇಲ್ಲಅವಕಾಶ:ಮೇಯರ್ ಗೌತಮ್‌ಕುಮಾರ್



ಬೆಂಗಳೂರು : ರಾಜ್ಯ ರಾಜಧಾನಿ ಬೆಂಗಳೂರು ಆದರೆ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸುವವರ ರಾಜಧಾನಿ ಎಂದರೆ ಅದುವೇ ನಗರದ ಹೃದಯ ಭಾಗದಲ್ಲಿರುವ ಟೌನ್ ಹಾಲ್. ಆದರೆ ಇನ್ನುಮುಂದೆ ಇಲ್ಲಿ ಯಾವುದೇ ಪ್ರತಿಭಟನೆಗಳಿಗೆ ಅನುಮತಿ ನೀಡಲಾಗುವದಿಲ್ಲವೆಂದು ಬಿಬಿಎಂಪಿ ಮೇಯರ್ ಗೌತಮ್ ಕುಮಾರ್ ಆದೇಶ ಹೊರಡಿಸಿದ್ದಾರೆ. ಈ ಮೂಲಕ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಹೀಗಾಗಿ ಇನ್ಮುಂದೆ ಟೌನ್ ಹಾಲ್ ಬಳಿ ಯಾವುದೇ ಪ್ರತಿಭಟನೆಗಳಿಗೆ ಅವಕಾಶ ನೀಡಲಾಗುವದಿಲ್ಲ.

# Current affairs of March 2020 from KPSC Vaani

01 03 2020 ಮಲೇಷ್ಯಾ ನೂತನ ಪ್ರಧಾನಿಯಾಗಿ ಮುಹಿದ್ದೀನ್ ಯಾಸಿನ್ ಆಯ್ಕೆ



ಕೌಲಾಲಂಪುರ : ಮಲೇಷ್ಯಾ ನೂತನ ಪ್ರಧಾನಿಯಾಗಿ ಪಗೋಹ್ ಸಂಸದ ಮುಹಿದ್ದೀನ್ ಯಾಸಿನ್ ರನ್ನು ಆಯ್ಕೆ ಮಾಡಲಾಗಿದೆ ಎಂದು ವರದಿಯೊಂದರಲ್ಲಿ ತಿಳಿಸಲಾಗಿದೆ. ಇವರು ಇದೇ ಭಾನುವಾರ ಬೆಳಗ್ಗೆ 10.30ಕ್ಕೆ ಇಸ್ತಾನಾ ನೆಗರಾದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ತಿಳಿಸಲಾಗಿದೆ.

01 03 2020 ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಅವರ 124ನೇ ಜನ್ಮದಿನ



ಫೆಬ್ರುವರಿ 29 ರಂದು ಮೊರಾರ್ಜಿ ದೇಸಾಯಿ ಅವರ 124ನೇ ಜನ್ಮ ದಿನಾಚರಣೆ ಯನ್ನು ದೇಶಾದ್ಯಂತ ಆಚರಿಸಲಾಯಿತು. ವಿಶೇಷವಾಗಿ ಪ್ರತಿ ಅಧಿಕವರ್ಷದ ಫೆಬ್ರುವರಿ 29 ರಂದು ಜನ್ಮದಿನವನ್ನು ಆಚರಿಸಿಕೊಳ್ಳುವ ವಿಶೇಷ ವ್ಯಕ್ತಿಗಳಲ್ಲಿ ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಕೂಡ ಒಬ್ಬರು. ಮೊರಾರ್ಜಿ ರಾಂಚೋಡ್ಜಿ ದೇಸಾಯಿ (29 ಫೆಬ್ರುವರಿ 1896 ರಿಂದ 10 ಏಪ್ರಿಲ್ 1995) ಭಾರತದ 4ನೇ ಪ್ರಧಾನಿಯಾಗಿ 1977 ಮತ್ತು 1979ರ ನಡುವೆ ಸೇವೆ ಸಲ್ಲಿಸಿದರು ಮತ್ತು ಜನತಾ ಪಕ್ಷ ರಚಿಸಿದ ಸರ್ಕಾರವನ್ನು ಮುನ್ನಡೆಸಿದ್ದರು. ಅವರು ಬಾಂಬೆ ರಾಜ್ಯದ ಮುಖ್ಯಮಂತ್ರಿ, ಗೃಹ ಸಚಿವರು, ಹಣಕಾಸು ಮಂತ್ರಿ ಮತ್ತು ಭಾರತದ 2 ನೇ ಉಪ ಪ್ರಧಾನ ಮಂತ್ರಿಯಂತಹ ಅನೇಕ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದರು.

## 01 03 2020 ಕೊರೋನವೈರಸ್ ಭೀತಿಯಿಂದ ಆಸಿಯಾನ್ ಶೃಂಗ ಸಮ್ಮೇಳನ ಮುಂದೂಡಿಕೆ




ವಾಶಿಂಗ್ಟನ್ : ಕೊರೋನವೈರಸ್ ಭೀತಿಯಿಂದ ಮುಂದಿನ ತಿಂಗಳು ಲಾಸ್ ವೇಗಸ್‌ನಲ್ಲಿ ನಡೆಯಬೇಕಾಗಿದ್ದ ಆಗ್ನೇಯ ಏಶ್ಯ ದೇಶಗಳ ಸಂಘಟನೆಯ ಆಸಿಯಾನ್‌ನ ಶೃಂಗಸಭೆಯನ್ನು ಅಮೆರಿಕ ಮುಂದೂಡಿದೆ. ಅಸೋಸಿಯೇಶನ್ ಆಫ್ ಸೌತ್ ಈಸ್ಟ್ ಏಶ್ಯನ್ ನೇಶನ್ಸ್ (ಆಸಿಯಾನ್)ನ ನಾಯಕರ ಶೃಂಗ ಸಮ್ಮೇಳನವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾರ್ಚ್ 14ರಂದು ಲಾಸ್ ವೇಗಸ್‌ನಲ್ಲಿ ಏರ್ಪಡಿಸಿದ್ದರು.

## 02 03 2020 ಭಾರತದ ತೆಕ್ಕೆಗೆ 40 ಮಿಲಿಯನ್ ಡಾಲರ್ ಮೌಲ್ಯದ ರಕ್ಷಣಾ ಒಪ್ಪಂದ



ಅರ್ಮೇನಿಯಾ ರಾಷ್ಟ್ರಕ್ಕೆ "ವೆಪನ್ ಲೊಕೇಟಿಂಗ್ ರಡಾರ್" (ಶಸ್ತ್ರಾಸ್ತ್ರ ಪತ್ತೆ ರೆಡಾರ್) ಗಳನ್ನು ತಯಾರಿಸಲು ಸುಮಾರು 40 ಮಿಲಿಯನ್ ಅಮೆರಿಕನ್ ಡಾಲರ್ ಮೊತ್ತದ ರಕ್ಷಣಾ ಒಪ್ಪಂದವನ್ನು ಭಾರತವು ಪಡೆಯಿತು. ರಷ್ಯಾ, ಪೋಲ್ಯಾಂಡ್ ನ್ನು ದೇಶಗಳನ್ನು ಹಿಂದಿಕ್ಕಿ 40 ಮಿಲಿಯನ್ ಡಾಲರ್ ಒಪ್ಪಂದ ಪಡೆದ ಭಾರತದ ಈ ಯಶಸ್ಸನ್ನು ಮೇಕ್ ಇನ್ ಇಂಡಿಯಾ ಫಲವೆಂದೇ ಭಾವಿಸಲಾಗಿದೆ. ದೇಶಿಯವಾಗಿ ತಯಾರಿಸಿ DRDO ಹಾಗೂ BEL ಸಂಸ್ಥೆಗಳು ತಯಾರಿಸಿರುವ ವೆಪನ್ ಲೊಕೇಟಿಂಗ್ ರಡಾರ್ (ಶಸ್ತ್ರಾಸ್ತ್ರ ಪತ್ತೆ ರೆಡಾರ್) ಗಳನ್ನು ಅರ್ಮೇನಿಯಾ ದೇಶಕ್ಕೆ ರಫ್ತು ಮಾಡಲ್ಪಿದೆ. ಸ್ವಾತಿ ರಡಾರ್ ಗಳನ್ನು ಅರ್ಮೇನಿಯಾಗೆ ರಫ್ತು ಮಾಡುವ ಕೆಲಸ ಈಗಾಗಲೇ ಆರಂಭವಾಗಿದೆ.

# Current affairs of March 2020 from KPSC Vaani

## 02 03 2020 ನೊವಾಕ್ ಜೊಕೋವಿಕ್ 5ನೇ 'ದುಬ್ಯಾ ಓಪನ್ ಟೆನಿಸ್' ಪ್ರಶಸ್ತಿ



ದುಬ್ಯಾ : ಸರ್ಬಿಯಾದ ನೊವಾಕ್ ಜೊಕೋವಿಕ್ 'ದುಬ್ಯಾ ಓಪನ್ ಟೆನಿಸ್' ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ನೊವಾಕ್ ಜೊಕೋವಿಕ್ ಅವರು ಐದನೇ ಬಾರಿ ಈ ಪ್ರಶಸ್ತಿಗೆ ಮುತ್ತಿಕ್ಕಿದರು. ಇವರು ಗ್ರೀಕ್‌ನ ಆಟಗಾರ ಸ್ಟೆಫನಸ್ ಸಿಸಿಪಸ್ ವಿರುದ್ಧ 6 3, 6 4 ಅಂತರದ ಗೆಲುವು ಸಾಧಿಸಿದರು. ಈ ಗೆಲುವಿನ ಸಾಧನೆಯ ಫಲವಾಗಿ ನೊವಾಕ್ ಜೊಕೋವಿಕ್ ಅವರು ದುಬ್ಯಾ ಸರಕಾರ 'ಗೋಲ್ಡನ್ ವೀಸಾ' ಕೂಡ ಪಡೆದಿದ್ದಾರೆ.

## 02 03 2020 ಕೆಂಪುಪಾಂಡಾಪ್ರಭೇದಗಳಲ್ಲಿಎರಡುಪ್ರತ್ಯೇಕಜಾತಿಗಳು: ಸಂಶೋಧನೆ




ಚೀನೀ ಅಕಾಡೆಮಿ ಆಫ್ ಸೈನ್ಸ್ ಕೆಂಪು ಪಾಂಡಾ ಪ್ರಭೇದಗಳಲ್ಲಿ ವಾಸ್ತವವಾಗಿ ಎರಡು ಪ್ರತ್ಯೇಕ ಜಾತಿಗಳಿರುವುದನ್ನು ಪತ್ತೆ ಹಚ್ಚಿದೆ. ಇಲ್ಲಿಯವರೆಗೂ ಹಿಮಾಲಯನ್ ಕೆಂಪು ಪಾಂಡಾ ಮತ್ತು ಚೀನೀ ಕೆಂಪು ಪಾಂಡಾಗಳನ್ನು ಒಟ್ಟಿಗೆ ಕೆಂಪು ಪಾಂಡಾ ಜಾತಿ ಎಂದು ಪರಿಗಣಿಸಲಾಗಿತ್ತಾದರೂ, ಡಿಎನ್ಎ ವಿಶ್ಲೇಷಣೆಯಿಂದ ಈ ಎರಡು ಪ್ರತ್ಯೇಕ ಜಾತಿಗಳಾಗಿವೆ ಎಂದು ತಿಳಿದು ಬಂದಿದೆ

* ಚೀನಾದ ಕೆಂಪು ಪಾಂಡಾ ಉತ್ತರ ಮ್ಯಾನ್ಮಾರ್, ಸಿಚುವಾನ್, ಆಗ್ನೇಯ ಟಿಬೆಟ್ ಮತ್ತು ಚೀನಾದ ಯುನ್ನಾನ್ ಪ್ರಾಂತ್ಯಗಳಲ್ಲಿ ಕಂಡುಬರುತ್ತದೆ.
* ಹಿಮಾಲಯನ್ ಕೆಂಪು ಪಾಂಡಾಗಳು ಭಾರತ, ನೇಪಾಳ, ಭೂತಾನ್ ಮತ್ತು ದಕ್ಷಿಣ ಟಿಬೆಟ್‌ನಲ್ಲಿ ಕಂಡುಬರುತ್ತವೆ.

# Current affairs of March 2020 from KPSC Vaani

## 02 03 2020 ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸುಧಾಕರ ಚತುರ್ವೇದಿ ನಿಧನ



ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕನ್ನಡಿಗ ಸುಧಾಕರ ಚತುರ್ವೇದಿ ವಯೋಸಹಜದಿಂದ ನಿಧನರಾಗಿದ್ದರೆ. ಮಹಾತ್ಮಾ ಗಾಂಧೀಜಿಯವರ ಆಪ್ತರಾಗಿದ್ದ ಇವರು ನಾಲ್ಕು ವೇದಗಳ ಕುರಿತ ಅಧ್ಯಯನ ಮಾಡಿರುವ ಪಂಡಿತರಾಗಿದ್ದರು. ಮಹಾತ್ಮ ಗಾಂಧಿ ಅವರ 'ಪೋಸ್ಟ್ ಮನ್' ಎಂದೇ ಹೆಸರಾಗಿದ್ದವರು ಸುಧಾಕರ ಚತುರ್ವೇದಿ. ಅವರ ಬದುಕನ್ನು ಹೋರಾಟ ಮತ್ತು ಅಲೆದಾಟಗಳ ಜೋಡಣೆ ಎನ್ನಬಹುದು. ಶ್ರೀಯುತರು ದಿನಾಂಕ 27 ಫೆಬ್ರುವರಿ 2020 ರಂದು ಬೆಂಗಳೂರಿನಲ್ಲಿ ನಿಧನರಾದರು

## 03 03 2020 ಮಾರ್ಚ್ 3: ವಿಶ್ವ ವನ್ಯಜೀವಿ ದಿನ




ಮಾರ್ಚ್ 03 ನೇ ತಾರೀಕಿನಂದು ವಿಶ್ವ ವನ್ಯಜೀವಿ ದಿನವನ್ನಾಗಿ ಜಗತ್ತಿನಾದ್ಯಂತ ಆಚರಿಸಲಾಗುವದು. ಈ ದಿನವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆ, CITES ಮತ್ತು ಇತರ ಪ್ರಾದೇಶಿಕ ಮತ್ತು ಸರ್ಕಾರೇತರ ಸಂಸ್ಥೆ ಸೇರಿದಂತೆ ವಿಶ್ವದ ಹಲವಾರು ಪ್ರಮುಖ ಸಂಸ್ಥೆಗಳು ಆಚರಿಸುತ್ತಿವೆ. ಥೀಮ್: ಭೂಮಿಯ ಮೇಲಿನ ಎಲ್ಲಾ ಜೀವಗಳನ್ನು ಉಳಿಸಿಕೊಳ್ಳುವುದು (Sustaining all Life on Earth)

# Current affairs of March 2020 from KPSC Vaani

## 03 03 2020 ರೈತ ಕಲ್ಯಾಣಕ್ಕಾಗಿ ಕೃಷಿ ವಿಜ್ಞಾನ ಮೇಳ, ಕೃಷಿ ವಿಜ್ಞಾನ ಕೇಂದ್ರ ಸಮ್ಮೇಳನ ಪ್ರಾರಂಭ



ಭಾರತ ಸರ್ಕಾರವು 2022 ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸಲು ಹಲವಾರು ಯೋಜನೆಗಳನ್ನು ರೂಪಿಸಿದೆ. ಈ ರೈತ ಕಲ್ಯಾಣ ಯೋಜನೆಗಳ ಮುಂದುವರೆದ ಭಾಗವಾಗಿ ಕೃಷಿ ವಿಜ್ಞಾನ ಮೇಳ ಮತ್ತು ಕೃಷಿ ವಿಜ್ಞಾನ ಕೇಂದ್ರ ಸಮ್ಮೇಳನವನ್ನು ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಉದ್ಘಾಟಿಸಿದರು. ಕೃಶಿ ವಿಜ್ಞಾನ ಕೇಂದ್ರ ಸಮ್ಮೇಳನ

* 11ನೇ ಕೃಷಿ ವಿಜ್ಞಾನ ಕೇಂದ್ರ ಸಮ್ಮೇಳನ ಇತ್ತೀಚೆಗೆ ನವದೆಹಲಿಯಲ್ಲಿ ನಡೆಯಿತು. ಕೃಷಿ ವಿಜ್ಞಾನ ಕೇಂದ್ರ ಈ ಕೇಂದ್ರಗಳನ್ನು ಭಾರತೀಯ ಕೃಷಿ ಸಂಶೋಧನಾ ಮಂಡಳಿಯು ರಚಿಸಿದೆ. ಮೊದಲ ಕೃಷಿ ವಿಜ್ಞಾನ ಕೇಂದ್ರವನ್ನು 1974 ರಲ್ಲಿ ಸ್ಥಾಪಿಸಲಾಯಿತು. ಕೃಷಿ ವಿಜ್ಞಾನ ಮೇಳ ಕೃಷಿಯನ್ನು ಲಾಭದಾಯಕ ಉದ್ಯಮವನ್ನಾಗಿ ಮಾಡಲು ಕೃಶಿ ವಿಜ್ಞಾನ ಮೇಳವನ್ನು ಪ್ರಾರಂಭಿಸಲಾಯಿತು.

## 03 03 2020 ಶೂನ್ಯ ತಾರತಮ್ಯ ದಿನ: ಪ್ರಪಂಚದಾದ್ಯಂತ ಆಚರಣೆ

ದಿನಾಂಕ ಮಾರ್ಚ್ 1, 2020 ರಂದು, ಜಾಗತಿಕವಾಗಿ ಶೂನ್ಯ ತಾರತಮ್ಯ ದಿನವನ್ನು ಆಚರಿಸಲಾಯಿತು. ಈ ದಿನಾಚರಣೆಯ ಉದ್ದೇಶ ಮಹಿಳೆಯರು ಮತ್ತು ಹುಡುಗಿಯರು ಎದುರಿಸುತ್ತಿರುವ ತಾರತಮ್ಯ ಮತ್ತು ಅಸಮಾನತೆಯನ್ನು ಸಮಾಜಕ್ಕೆ ತೋರಿಸುವ ಉದ್ದೇಶ ಹೊಂದಿದೆ. ಈ ದಿನಾಚರಣೆಯ ಮುಖ್ಯ ಉದ್ದೇಶ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವ ಮತ್ತು ಅವರ ಸಬಲೀಕರಣ ಮತ್ತು ಲಿಂಗ ಸಮಾನತೆಯನ್ನು ಉತ್ತೇಜಿಸುವುದಾಗಿದೆ.

ಥೀಮ್: "ಮಹಿಳೆಯರು ಮತ್ತು ಹುಡುಗಿಯರ ವಿರುದ್ಧ ಶೂನ್ಯ ತಾರತಮ್ಯ"

* ಶೂನ್ಯ ತಾರತಮ್ಯ ದಿನವನ್ನು ವಿಶ್ವಸಂಸ್ಥೆಯ ಏಡ್ಸ್ ಕಾರ್ಯಕ್ರಮವು ಆಚರಿಸುತ್ತದೆ.
* ಪ್ರತಿ ವರ್ಷ ಮಾರ್ಚ್ 1 ರಂದು ದಿನವನ್ನು ಆಚರಿಸಲಾಗುತ್ತದೆ.
* ಈ ದಿನವನ್ನು ಮೊದಲು 2014 ರಲ್ಲಿ ಆಚರಿಸಲಾಯಿತು.

# Current affairs of March 2020 from KPSC Vaani

## 03 03 2020 ಭಾರತದಲ್ಲಿ ಬೇಸಿಗೆಯಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ಶಾಖದ ಅಲೆಗಳು : ಭಾರತೀಯ ಹವಾಮಾನ ಇಲಾಖೆ



ಭಾರತದ ಈ ಬೇಸಿಗೆಯಲ್ಲಿ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳು ಸಾಮಾನ್ಯಕ್ಕಿಂತ ಹೆಚ್ಚು ಬಿಸಿಯಾಗಿರುತ್ತವೆ ಎಂದು ಭಾರತೀಯ ಹವಾಮಾನ ಇಲಾಖೆ ಪ್ರಕಟಿಸಿದೆ. ಭಾರತದ ಶಾಖ ತರಂಗ ವಲಯಗಳಲ್ಲಿ ಶಾಖದ ಅಲೆಗಳು ಮೇಲುಗೈ ಸಾಧಿಸಲಿವೆ ಎಂದು IMD ಪ್ರಕಟಿಸಿದೆ. ಶಾಖ ತರಂಗ ವಲಯ ಎಂದರೆ : ಭಾರತದ ಮೂಲ ಶಾಖ ಅಲೆಗಳ ವಲಯವು ಹಿಮಾಚಲ ಪ್ರದೇಶ, ಪಂಜಾಬ್, ಹರಿಯಾಣ, ದೆಹಲಿ, ಉತ್ತರಾಖಂಡ್, ರಾಜಸ್ಥಾನ, ಗುಜರಾತ್, ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ, ಜಾರ್ಖಂಡ್, ಛತ್ತೀಸಘಡ, ಒಡಿಶಾ, ಪಶ್ಚಿಮ ಬಂಗಾಳ ಮತ್ತು ತೆಲಂಗಾಣ ರಾಜ್ಯಗಳಲ್ಲಿ ವಿಸ್ತರಿಸಿದೆ.

## 03 03 2020 ಕರೋನಾ ವೈರಸ್ ಹೊಂದಿರುವ ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್ ಸದಸ್ಯರಿಗೆ 4 ಮಿಲಿಯನ್ USD ಧನಸಹಾಯ ಘೋಷಣೆ




ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್ ಕೊರೋಣ (COVID 19) ವೈರಸ್ ವ್ಯಾಪಿಸಿರುವ ತನ್ನ ಸದಸ್ಯ ರಾಷ್ಟ್ರಗಳಿಗೆ 4 ಮಿಲಿಯನ್ ಅಮೆರಿಕನ್ ಡಾಲರು ಮೊತ್ತದ ಹಣವನ್ನು ನೀಡಲಿದೆ.

* ಚೀನಾ, ಕಾಂಬೋಡಿಯಾ, ಲಾವೋಸ್, ಥೈಲ್ಯಾಂಡ್, ಮ್ಯಾನ್ಮಾರ್ ಮತ್ತು ವಿಯೆಟ್ನಾಂ ದೇಶಗಲ್ಲಿ ತಕ್ಷಣವೇ ಈ ವೈರಸ್ ಹರಡುವುದನ್ನು ನಿಯಂತ್ರಿಸುವುದು ಈ ನಿಧಿ ಹಂಚಿಕೆಯ ಮುಖ್ಯ ಉದ್ದೇಶವಾಗಿದೆ.
*ಕೊರೋಣ (COVID 19) ವೈರಸ್ ವ್ಯಾಪಕವಾಗಿ ಹರಡಿರುವ ಚೀನಾ ದೇಶಕ್ಕೆ 18.6 ಮಿಲಿಯನ್ USD ವಿಶೇಷ ಸಾಲವನ್ನು ಬ್ಯಾಂಕ್ ಮಂಜೂರು ಮಾಡಿದೆ.

# Current affairs of March 2020 from KPSC Vaani

03 03 2020 HAL ನಿಂದ ಅಮೆರಿಕಾ ಮೂಲದ ಅಪಾಚೆ ರೀತಿಯ ಕಾಪ್ಟರ್ ತಯಾರಿಕೆ



ನವದೆಹಲಿ: ಭಾರತೀಯ ವಾಯುಪಡೆಗೆ ಇತ್ತೀಚೆಗಷ್ಟೇ ಸೇರ್ಪಡೆಯಾಗಿದ್ದ ಅಮೆರಿಕಾದ ಬಲಿಷ್ಠ ಅಪಾಚೆ ಯುದ್ಧ ವಿಮಾನದಷ್ಟೇ ಸಾಮರ್ಥ್ಯ ಹೊಂದಿರುವ ಹೆಲಿಕಾಪ್ಟರ್ ಗಳನ್ನು ತಯಾರಿ ಮಾಡುವುದಕ್ಕೆ HAL (ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್) ಸಿದ್ಧತೆ ಆರಂಭಿಸಿದೆ.

* ಈಗಾಗಲೇ ಆರಂಬಿಕ ಹಂತಗಳ ತಯಾರಿಯನ್ನು ಆರಂಭಿಸಿರುವ HAL ಸುಮಾರು 2027ರ ವೇಳೆಗೆ ಸ್ವದೇಶಿ ನಿರ್ಮಿತ ಬಲಿಷ್ಠವಾದ ಯುದ್ಧ ವಿಮಾನಗಳು ಸೇವೆಗೆ ಲಭ್ಯವಾಗಲಿವೆ.
* ಈ ಹೆಲಿಕಾಪ್ಟರ್ ಎರಡು ಎಂಜಿನ್ ಹೊಂದಿರಲಿದ್ದು ವಾಯುದಾಳಿ, ವಾಯು ಸಾರಿಗೆ, ಯುದ್ಧ ಸಾಮಾಗ್ರಿಯನ್ನು ಹೊತ್ತೊಯ್ಯಲು ಸಹಕಾರಿಯಾಗಲಿದೆ.

03 03 2020 ನ್ಯಾನೋ ತಂತ್ರಜ್ಞಾನ ಉತ್ತೇಜನೆಗೆ ಬೆಂಗಳೂರಿನಲ್ಲಿ ನ್ಯಾನೋ ಪಾರ್ಕ್ ಸ್ಥಾಪನೆ




ಬೆಂಗಳೂರು : ಬೆಂಗಳೂರು ಐಟಿ ಬಿಟಿ ಸೇರಿದಂತೆ ಹಲವು ವಿಧಗಳಲ್ಲಿ ಪ್ರಸಿದ್ಧಿ ಪಡೆದ ನಗರವಾಗಿದೆ. ಇಲ್ಲಿ ಐಟಿ ಬಿಟಿ ಉತ್ತೇಜಿಸಿದಂತೆ ನ್ಯಾನೋ ತಂತ್ರಜ್ಞಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದಿದ್ದು ಇದರ ಮೊದಲ ಹಂತವಾಗಿ ಬೆಂಗಳೂರಿನಲ್ಲಿ ನ್ಯಾನೋ ಪಾರ್ಕ್ ಸ್ಥಾಪನೆ ಮಾಡಲಾಗುವುದು ಎಂದು ಡಿಸಿಎಂ ಡಾ.ಸಿ.ಎನ್.ಅಶ್ವತ್ಥ್‌ನಾರಾಯಣ ತಿಳಿಸಿದ್ದಾರೆ. ನಗರದಲ್ಲಿ ನಡೆದ 11ನೇ ಬೆಂಗಳೂರು ಇಂಡಿಯಾ ನ್ಯಾನೋ ಸಮ್ಮೇಳನ ನಡೆಯುತ್ತಿದ್ದು, ಭಾರತ ರತ್ನ ಸಿ.ಎನ್.ಆರ್.ರಾವ್ ಜತೆಗೆ ಚರ್ಚೆ ನಡೆಸಿ ಅವರ ಮಾರ್ಗದರ್ಶನದಂತೆಯೇ ನ್ಯಾನೋ ಪಾರ್ಕ್ ಸ್ಥಾಪನೆ ಮಾಡಲಾಗುವುದೆಂದು ಅಶ್ವತ್ಥ್‌ನಾರಾಯಣ ತಿಳಿಸಿದರು.

# Current affairs of March 2020 from KPSC Vaani

03 03 2020 ಲೋಕಸಭೆ ಕಲಾಪ: ಗರ್ಭಪಾತ ಅವಕಾಶ 24 ವಾರಕ್ಕೆ ಏರಿಸುವ ಮಸೂದೆ ಮಂಡನೆ



ನವದೆಹಲಿ : ಪ್ರಸ್ತುತ ದೇಶದಲ್ಲಿ ಜಾರಿ ಇರುವ ಗರ್ಭಪಾತ ಮಾಡಿಸುವುದಕ್ಕೆ ಇರುವ ಗರಿಷ್ಠ 20 ವಾರಗಳ ಮಿತಿಯನ್ನು 24 ವಾರಗಳಿಗೆ ಏರಿಸುವ ಮಹತ್ವದ ಮಸೂದೆಯನ್ನು ಸರ್ಕಾರ ಸೋಮವಾರ ಲೋಕಸಭೆಯಲ್ಲಿ ಮಂಡಿಸಿದೆ. ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಇಂದು ನಡೆದ ಕಲಾಪದಲ್ಲಿ "ದ ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ(ಅಮೆಂಡಮೆಂಟ್) ಬಿಲ್ ೨೦೨೦" ಅನ್ನು ಲೋಕಸಭೆಯಲ್ಲಿ ಮಂಡಿಸಿದ್ದಾರೆ.

04 03 2020 ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿ: ಮಹಿಳಾ ವಿಭಾಗದಲ್ಲಿ ಭಾರತಕ್ಕೆ ಕಂಚಿನ ಪದಕ




ನೆದರ್ಲೆಂಡ್ಸ್‌ನ ಹಾರ್ಲೆಮ್‌ನಲ್ಲಿ ಭಾನುವಾರ ನಡೆದ ಸೆಮಿಫೈನಲ್ ನಲ್ಲಿ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಯುವ ಆಟಗಾರ್ತಿಯರಾದ ತಸ್ನಿಂ ಮಿರ್ ಹಾಗೂ ಮಾನಸಿ ಸಿಂಗ್ ಅವರು ಕಂಚಿನ ಪದಕವನ್ನು ಗೆದ್ದುಕೊಂಡಿದ್ದಾರೆ.

* ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಇದೆ ಮೊದಲು ಭಾರತಕ್ಕೆ ಕಂಚಿನ ಪದಕಗಳು ಲಭಿಸಿದ್ದು.
* ತಸ್ನಿಂ ಮಿರ್ ಅವರು ಕೊರಿಯಾದ ಸೊಯುಲ್ ಲೀ ಎದುರು ಆಟವಾಡಿ 19–21, 10–22 ಗೇಮ್‌ಗಳಿಂದ ಸೋತು ಕಂಚಿನ ಪದಕವನ್ನು ಗೆದ್ದುಕೊಂಡಿದ್ದಾರೆ.
* ಮಾನಸಿ ಸಿಂಗ್ ಅವರು ಇಂಡೊನೇಷ್ಯಾದ ಸ್ಟೈಫಿ ರಿಜ್‌ಕಾ ನೂರಿದಯಾಹ್ ಜೊತೆ ಆಟವಾಡಿ 11–21, 16–21 ಸೋಲನ್ನನುಭವಿಸಿ ಕಂಚಿನ ಪದಕವನ್ನು ಗೆದ್ದುಕೊಂಡಿದ್ದಾರೆ.

# Current affairs of March 2020 from KPSC Vaani

04 03 2020 ಇಸ್ರೋದ ಜಿಯೋ ಇಮೇಜಿಂಗ್ ಉಪಗ್ರಹ ಮಾರ್ಚ್ 05 ಕ್ಕೆ ಉಡಾವಣೆ



ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಇದೆ ಮಾರ್ಚ್ 05 ನೇ ತಾರೀಕಿನಂದು ಸಂಜೆ 5.43ಕ್ಕೆ ಜಿಯೋ ಸಿಂಕ್ರೊನಸ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (GSLV F10) ಉಡಾವಣಾ ವಾಹನದಿಂದ ಜಿಯೋ ಇಮೇಜಿಂಗ್ ಉಪಗ್ರಹ GISAT 1ನ್ನು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಲು ಸಿದ್ಧತೆ ನಡೆಸಿದೆ. GISAT 1:

*ಸುಮಾರು ತೂಕ 2,275 ಕೆಜಿ
* ಅತ್ಯಾಧುನಿಕ ಭೂ ವೀಕ್ಷಣಾ ಉಪಗ್ರಹವಾಗಿದೆ.
* ಇದನ್ನು GSLV F10 'ಜಿಯೋ ಸಿಂಕ್ರೊನಸ್ ವರ್ಗಾವಣೆ ಕಕ್ಷೆಯಲ್ಲಿ' ಇರಿಸಲಾಗುವದು.

04 03 2020 ವಿತ್ತ ಕಾರ್ಯದರ್ಶಿಯಾಗಿ ಅಜಯ್ ಭೂಷಣ್ ಪಾಂಡೆ ನಿಯೋಜನೆ



ನವದೆಹಲಿ : ಅಜಯ್ ಭೂಷಣ್ ಪಾಂಡೆಯನ್ನು ವಿತ್ತ ಕಾರ್ಯದರ್ಶಿಯಾಗಿ ನಿಯೋಜಿಸಿರುವುದಾಗಿ ಸಿಬ್ಬಂದಿ ಇಲಾಖೆ ತಿಳಿಸಿದೆ. ಇವರು ಇಲ್ಲಿಯವರೆಗೆ ಕಂದಾಯ ಇಲಾಖೆಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದರು.


# Current affairs of March 2020 from KPSC Vaani

## 04 03 2020 ಕಾರವಾರದಲ್ಲಿ "ಟ್ಯುಪೊಲೆವ್" ಮ್ಯೂಸಿಯಂ : ಒಪ್ಪಂದಕ್ಕೆ ಸಹಿ ಹಾಕಿದ ಅಧಿಕಾರಿಗಳು



ಕಾರವಾರ : ಭಾರತೀಯ ನೌಕಾಪಡೆಗೆ ತನ್ನ ಅಮೂಲ್ಯ ಸೇವೆ ನೀಡಿ ಪ್ರಸ್ತುತ ನೌಕಾಪಡೆಯ ಕಾರ್ಯಾಚರಣೆಗಳಿಂದ ನಿವೃತ್ತಿ ಹೊಂದಿರುವ ಟ್ಯುಪೊಲೆವ್ 142 ಎಂ ಯುದ್ಧ ವಿಮಾನದ ಮ್ಯೂಸಿಯಂ ಆರಂಭಿಸಲು ಅಡ್ಮಿರಲ್ ಮಹೇಶ್‌ಸಿಂಗ್ ಹಾಗೂ ಜಿಲ್ಲಾಧಿಕಾರಿ ಡಾ.ಕೆ.ಹರೀಶ ಕುಮಾರ್ ಅವರು ಮಂಗಳವಾರ ಸಹಿ ಮಾಡಿ, ವಿನಿಮಯ ಮಾಡಿಕೊಂಡರು. ಈ ಯುದ್ಧ ವಿಮಾನದ ಬಿಡಿ ಭಾಗಗಳನ್ನು ನಗರಕ್ಕೆ ತಂದು, ರವೀಂದ್ರನಾಥ ಟ್ಯಾಗೋರ್ ಕಡಲತೀರದ ಚಾಪೆಲ್ ಯುದ್ಧನೌಕೆ ವಸ್ತು ಸಂಗ್ರಹಾಲಯದ ಬಳಿ ಜೋಡಿಸಿ ಕೊಡುವ ಒಪ್ಪಂದ ಪತ್ರಕ್ಕೆ ನೌಕಾಪಡೆಯ ಕರ್ನಾಟಕ ನೌಕಾ ಪ್ರದೇಶದ ಧ್ವಜಅಧಿಕಾರಿರಿಯರ್‌ಅಡ್ಮಿರಲ್‌ಮಹೇಶ್‌ಸಿಂಗ್‌ಸಹಿಹಾಕುವಮೂಲಕ ಒಪ್ಪಿಗೆಸೂಚಿಸಿದರು.

## 04 03 2020 ವಾರ್ಷಿಕ ಮಹಿಳಾ ಹಕ್ಕು ಸಭೆ ಅವಧಿ ಮೊಟಕುಗೊಳಿಸಿದ ವಿಶ್ವಸಂಸ್ಥೆ




ಸಾಮಾನ್ಯವಾಗಿ ಎರಡು ವಾರಗಳ ಕಾಲ ನಡೆಯುವ ವಾರ್ಷಿಕ ಮಹಿಳಾ ಹಕ್ಕು ಸಭೆಯನ್ನು ಒಂದು ದಿನಕ್ಕೆ ಮಿತಗೊಳಿಸಲು ಮಹಿಳಾ ಸ್ಥಿತಿಗತಿ ಕುರಿತ ವಿಶ್ವಸಂಸ್ಥೆಯ ಆಯೋಗ ಸಿಎಸ್ ಡಬ್ಲ್ಯು(CSW) ನಿರ್ಧರಿಸಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಇಡೀ ವಿಶ್ವವನ್ನೇ ಕಾಡುತ್ತಿರುವ ಮಾರಣಾಂತಿಕ ವೈರಸ್ ಕರೋನಾ (Covid 19). ಮಾ 9 ರಿಂದ 20 ರವರೆಗೆ ನಡೆಯಬೇಕಿದ್ದ ಸಭೆಯನ್ನು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೊನಿಯೋ ಗ್ಯುಟೆರಸ್ ಸಲಹೆಯ ಮೇರೆಗೆ ಕೇವಲ ಒಂದು ದಿನಕ್ಕೆ ಸೀಮಿತಗೊಳಿಸಲಾಗಿದೆ ಎಂದು ತಿಳಿಸಲಾಗಿದೆ.

# Current affairs of March 2020 from KPSC Vaani

04 03 2020 ಇನ್ನುಮುಂದೆ ವಿಮಾನದಲ್ಲಿ ವೈ ಫೈ ಬಳಸಲು ಕೇಂದ್ರದಿಂದ ಅನುಮತಿ



ಇಂಟರ್ನೆಟ್ ಮಾನವನ ಜೀವನದ ಅವಿಭಾಜ್ಯ ವಸ್ತು, ಇಂಟರ್ನೆಟ್ ಇಲ್ಲದೆ ಮನುಷ್ಯನ ಜೀವನ ಊಹಿಸಲು ಅಸಾಧ್ಯ ಎಂಬತ್ತಿರುವಾಗ ವಿಮಾನ ಪ್ರಯಾಣದಲ್ಲಿ ಪ್ರಯಾಣಿಕರಿಗೆ ಇಂಟರ್ನೆಟ್ ಬಳಕೆ ನಿರ್ಬಂಧಿಸಲಾಗಿತ್ತು, ಆದರೆ ಇನ್ಮುಂದೆ ವೈ ಫೈ ಸೇವೆಯು ಲಭ್ಯವಾಗಲಿದೆ. ಈ ಕುರಿತು ಕೇಂದ್ರ ಸರ್ಕಾರ ಅಧಿಕೃತವಾಗಿ ಘೋಷಣೆ ಮಾಡಿದೆ. ಪ್ರಯಾಣಿಕರು ವಿಮಾನದಲ್ಲಿ ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಟ್ಯಾಬ್, ಸ್ಮಾರ್ಟ್‌ವಾಚ್ ಸೇರಿದಂತೆ ಇನ್ನಿತರೆ ಇಂಟರ್ನೆಟ ಆಧಾರಿತ ಡಿವೈಸ್‌ಗಳನ್ನು ಬಳಸಬಹುದಾಗಿದೆ.

04 03 2020 ಕರೋನಾ ವೈರಸ್ ಜಾಗೃತಿಗಾಗಿ ಸಹಾಯವಾಣಿ ಆರಂಭಿಸಿದ ಕೇಂದ್ರ ಸರ್ಕಾರ




ಇಡೀ ವಿಶ್ವವನ್ನೇ ಬೆಚ್ಚಿ ಬೀಳಿಸಿರುವ ಕರೋನಾ ವೈರಸ್ ಭಾರತಕ್ಕೆ ಕಾಲಿಟ್ಟಿರುವ ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಮತ್ತು ಭಾರತದಲ್ಲಿ ಕೆಲ ಪ್ರಕರಣಗಳಲ್ಲಿ ಈ ವೈರಸ್ ಇರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಸಾರ್ವಜನಿಕರ ಅನುಕೂಲಕ್ಕಾಗಿ ಸಹಾಯವಾಣಿಯನ್ನು (911123978046) ಆರಂಭಿಸಿದೆ ವಿಶ್ವದ ವಿವಿಧ ದೇಶಗಳಲ್ಲಿ ಈಗಾಗಲೇ ಸಾವಿರಾರು ಜನರನ್ನು ಬಲಿ ಪಡೆದಿರುವ ಈ ವೈರಸ್ ಭಾರತದ ವಿವಿಧ ನಗರಗಳಲ್ಲಿ ಪತ್ತೆಯಾಗಿರುವ ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿದೆ. ಸಾರ್ವಜನಿಕರು ಈ ಸಂಖ್ಯೆಗೆ (911123978046) ಕರೆಮಾಡಿ ರೋಗ ಲಕ್ಷಣ, ಜಾಗೃತಿ, ಸಹಾಯ ಹಾಗೂ ತುರ್ತು ಸಹಾಯಕ್ಕಾಗಿ ಈ ಸಂಖ್ಯೆಯಿಂದ ಮಾಹಿತಿ ಪಡೆಯಬಹುದಾಗಿದೆ.

# Current affairs of March 2020 from KPSC Vaani

## 04 03 2020 ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಸೇರಿಸಲು 2 ಸ್ಥಳಗಳ ಭಾರತ ಸರ್ಕಾರದಿಂದ ನಾಮನಿರ್ದೇಶನ



2020ರ ವಿಶ್ವ ಪರಂಪರೆಯ ಪಟ್ಟಿಯಲ್ಲಿ ಸೇರ್ಪಡೆಗೊಳ್ಳಲು ಭಾರತ ಸರ್ಕಾರ ಎರಡು ಐತಿಹಾಸಿಕ ಸ್ಥಳಗಳನ್ನು ನಾಮನಿರ್ದೇಶನ ಮಾಡಿದೆ. ಅವುಗಳ ವಿವರ ಹೀಗಿದೆ

* ಧೋಲಾವೀರ: ಹರಪ್ಪನ್ ನಗರ
* ಡೆಕ್ಕನ್ ಸುಲ್ತಾನೇಟ್

## 04 03 2020 CAMPA ಯೋಜನೆ ಅಡಿಯಲ್ಲಿ ಕಾಜಿರಂಗ ರಾಷ್ಟ್ರೀಯ ಉದ್ಯಾನವನಕ್ಕೆ ಆರ್ಥಿಕ ನೆರವು



2018 19 ಆರ್ಥಿಕ ವರ್ಷಗಳಲ್ಲಿ 94,46,585 51,24,670 ರೂ.ಗಳನ್ನು ಮತ್ತು
2019 20ರ ಆರ್ಥಿಕ ವರ್ಷಗಳಲ್ಲಿ 51,24,670 ರೂ.ಗಳನ್ನು ಕಾಜಿರಂಗ ರಾಷ್ಟ್ರೀಯ ಉದ್ಯಾನವನಕ್ಕೆ ಮಂಜೂರು ಮಾಡಲಾಗಿದೆ ಮತ್ತು CAMPA ಯೋಜನೆ ಅಡಿಯಲ್ಲಿ ಹಣವನ್ನು ಮಂಜೂರು ಮಾಡಲಾಗಿದೆ. ಇದಲ್ಲದೆ, ಪ್ರಾಜೆಕ್ಟ್ ಟೈಗರ್ ಸ್ಕೀಮ್ ಮತ್ತು ವನ್ಯಜೀವಿ ಆವಾಸಸ್ಥಾನ ಅಭಿವೃದ್ಧಿಯಡಿ ಹಣವನ್ನು ವರ್ಗಾಯಿಸಲಾಗಿದೆ ಎಂದು ರಾಜ್ಯಸಭಾ ಸಂಸದ ಕಾಮಾಕ್ಯ ಪ್ರಸಾದ್ ತಾಸಾ ತಿಳಿಸಿದ್ದಾರೆ.

# Current affairs of March 2020 from KPSC Vaani

04 03 2020 ರಾಷ್ಟ್ರೀಯ ಚಂಬಲ್ ಅಭಯಾರಣ್ಯವನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸಲಾಗಿದೆ




ಮಾರ್ಚ್ 2, 2020 ರಂದು ರಾಷ್ಟ್ರೀಯ ಚಂಬಲ್ ಅಭಯಾರಣ್ಯವನ್ನು ಪರಿಸರ ಸೂಕ್ಷ್ಮ ವಲಯವೆಂದು ಭಾರತ ಸರ್ಕಾರವು ಘೋಷಿಸಿದೆ. ಈ ಅಭಯಾರಣ್ಯದಲ್ಲಿ ಗಂಗಾ ನದಿಯ ಡಾಲ್ಫಿನ್‌ಗಳು ಮತ್ತು ಗೊರಿಲ್ಲಾಗಳಿಗೆ ನೆಲೆಯಾಗಿದೆ. ಈ ಅಭಯಾರಣ್ಯವು ಸ್ವಾಭಾವಿಕವಾಗಿ ವಾಸಿಸುವ ಗೊರಿಲ್ಲಾಗಳಿಗೆ ನೆಲೆಯಾಗಿದೆ. ರೆಸಾರ್ಟ್‌ಗಳು, ಹೋಟೆಲ್‌ಗಳು ಅಥವಾ ಇತರ ವಸತಿ ಮತ್ತು ಕೈಗಾರಿಕಾ ಚಟುವಟಿಕೆಗಳ ನಿರ್ಮಾಣವನ್ನು ಈಅಭಯಾರಣ್ಯದಲ್ಲಿ ನಿಷೇಧಿಸಲಾಗಿದೆ.

05 03 2020 T20ಮಹಿಳಾ ಕ್ರಿಕೆಟ್'ನಲ್ಲಿ ಶಫಾಲಿ ವರ್ಮಾ ನಂ. 1ಆಟಗಾರ್ತಿ



ಕಾಂಗರೂಗಳ ನಾಡು ಎಂದೇ ಕರೆಸಿಕೊಳ್ಳುವ ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಮಹಿಳಾ ಕ್ರಿಕೆಟ್ ಟಿ20 ವಿಶ್ವಕಪ್ ನಲ್ಲಿ ಭಾರತದ ಶಫಾಲಿ ವರ್ಮಾ ನೀಡುತ್ತಿರುವ ಪ್ರದರ್ಶನ ಅದ್ಭುತವಾಗಿದ್ದು, ಐಸಿಸಿ ಟಿ20 ಮಹಿಳಾ ಕ್ರಿಕೆಟ್ ರ್ಯಾಂಕಿಂಗ್ ನ ಬ್ಯಾಟ್ಸ್ ಮನ್ ಗಳ ಪಟ್ಟಿಯಲ್ಲಿ ನಂ.1 ಪಟ್ಟಕ್ಕೇರಿದ್ದಾರೆ. ಮಿಥಾಲಿ ರಾಜ್ ನಂತರ ರ್ಯಾಂಕಿಂಗ್ ಸಾಧನೆ ಮಾಡಿದ ಮತ್ತೋರ್ವ ಆಟಗಾರ್ತಿ ಶಫಾಲಿವರ್ಮಾಅಂತಾರಾಷ್ಟ್ರೀಯಮಹಿಳಾಕ್ರಿಕೆಟ್‌ನ ಹೊಸಸ್ಟಾರ್ಆಗಿಮಿಂಚುತ್ತಿದ್ದಾರೆ.

# Current affairs of March 2020 from KPSC Vaani

## 05 03 2020 ಸರ್ಕಾರಿ ಸ್ವಾಮ್ಯದ 10 ಬ್ಯಾಂಕುಗಳನ್ನು 4 ಬ್ಯಾಂಕ್ ಗಳಾಗಿ ವಿಲೀನ



ನವದೆಹಲಿ: ಸರ್ಕಾರಿ ಸ್ವಾಮ್ಯದ ಒಟ್ಟು 10 ಬ್ಯಾಂಕ್ ಗಳನ್ನು ಕೇವಲ 04 ಬ್ಯಾಂಕ್ ಗಳಾಗಿ ವಿಲೀನ ಮಾಡವ ನೂತನ ಯೋಜನೆಗೆ ಬುಧವಾರ ಕೇಂದ್ರ ಸಚಿವ ಸಂಪುಟದಲ್ಲಿ ಒಪ್ಪಿಗೆ ನೀಡಿದ್ದು, ದಿನಾಂಕ ಏಪ್ರಿಲ್ 1ರಿಂದಲೇ ಈ ವಿಲೀನ ಜಾರಿಗೆ ಬರಲಿದೆ. ಅಲಹಬಾದ್ ಬ್ಯಾಂಕ್, ಆಂಧ್ರ ಬ್ಯಾಂಕ್ ಮತ್ತು ಒರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಬ್ಯಾಂಕ್ ಸೇರಿದಂತೆ ಒಟ್ಟು 10 ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಗಳನ್ನು ನಾಲ್ಕು ಪ್ರಮುಖ ಬ್ಯಾಂಕ್‌ಗಳಾಗಿ ವಿಲೀನಗೊಳ್ಳಲಿವೆ ಎಂದು ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ

## 05 03 2020 ಚಂದ್ರಯಾನ 3ಕ್ಕೆ ಮುಹೂರ್ತ ಫಿಕ್ಸ್ ಮಾಡಿದ ಕೇಂದ್ರ ಸರ್ಕಾರ



ನವದೆಹಲಿ : ಚಂದ್ರಯಾನ 2 ಅಲ್ಪ ಹಿನ್ನಡೆಯಾದ ಬಳಿಕ ಚಂದ್ರಯಾನ 3ಕ್ಕೆ ISRO ಸಿದ್ದತೆ ನಡೆಸಿತ್ತು, ಪ್ರಸ್ತುತ ಕೇಂದ್ರ ಸರ್ಕಾರ ಚಂದ್ರಯಾನ 3 ಕ್ಕೆ ಮುಹೂರ್ತ ನಿಗದಿ ಮಾಡಿದ್ದು, 2021ರ ಮೊದಲ ಭಾಗದಲ್ಲಿ ಚಂದ್ರಯಾನ ನಡೆಯಲಿದೆ ಎಂದು ಕೇಂದ್ರ ಸಚಿವ ಜೀತೇಂದ್ರ ಸಿಂಗ್ ಈ ಕುರಿತು ಮಾಹಿತಿ ನೀಡಿದ್ದಾರೆ. ನಿಗದಿತ ಸಮಯಕ್ಕಿಂತ ಸ್ವಲ್ಪ ತಡವಾದರೂ ಕೂಡ 2021ರಲ್ಲಿ ಚಂದ್ರಯಾನ 3 ನಡೆಸುವುದು ಮಾತ್ರ ನಿಶ್ಚಿತ ಎಂದು ಅವರು ತಿಳಿಸಿದ್ದಾರೆ.

# Current affairs of March 2020 from KPSC Vaani

## 05 03 2020 ಕನ್ನಡಿಗ ಸುನೀಲ್ ಜೋಶಿ BCCI ಆಯ್ಕೆ ಸಮಿತಿ ನೂತನ ಅಧ್ಯಕ್ಷರಾಗಿ ಆಯ್ಕೆ



ಮಾಜಿ ಕ್ರಿಕೆಟಿಗ ಮೇಲಾಗಿ ಕನ್ನಡಿಗರಾದ ಸುನೀಲ್ ಜೋಶಿ ಅವರು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಆಯ್ಕೆ ಸಮಿತಿ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಬುಧವಾರ ಸಂದರ್ಶನ ನಡೆಸಿದ ಬಿಸಿಸಿಐ ನೇಮಿತ ಕ್ರಿಕೆಟ್ ಸಲಹಾ ಸಮಿತಿಯು ಅಂತಿಮವಾಗಿ ಜೋಶಿ ಅವರನ್ನು ಆಯ್ಕೆ ಸಮಿತಿ ಮುಖ್ಯಸ್ಥರ ಸ್ಥಾನಕ್ಕೆ ಶಿಫಾರಸ್ಸು ಮಾಡಿದೆ.

* ಮದನ್ ಲಾಲ್, ಆರ್‌ಪಿ ಸಿಂಗ್ ಮತ್ತು ಸುಲಕ್ಷಣ ನಾಯ್ಕ್ ಅವರನ್ನು ಒಳಗೊಂಡ ತ್ರಿಸದಸ್ಯ ಸಮಿತಿಯು ಸುನಿಲ್ ಜೋಶಿ ನೇಮಕ ಮಾಡಿದೆ.
* ಸುನೀಲ್ ಜೋಶಿಯವರು ಹಾಲಿ ಅಧ್ಯಕ್ಷ ಎಂಎಸ್‌ಕೆ ಪ್ರಸಾದ್ ಸ್ಥಾನವನ್ನು ತುಂಬಲಿದ್ದಾರೆ.
* ಕೇಂದ್ರ ವಲಯದ ಆಯ್ಕೆಗಾರನಾಗಿ ಕಾರ್ಯ ನಿರ್ವಹಿಸಲು ಮಾಜಿ ವೇಗಿ ಹರ್ವಿಂಧರ್ ಸಿಂಗ್ ಆಯ್ಕೆಯಾಗಿದ್ದಾರೆ.
* ನೂತನ ಅಧ್ಯಕ್ಷ ಸುನಿಲ್ ಜೋಶಿ ಸಾರಥ್ಯದಲ್ಲಿ ನೂತನ ಆಯ್ಕೆ ಸಮಿತಿಯು ದಕ್ಷಿಣ ಆಫ್ರಿಕಾ ವಿರುದ್ಧ ನಡೆಯಲಿರುವ ಮೂರು ಪಂದ್ಯಗಳ ಏಕದಿನ ಸರಣಿಗಾಗಿ ಟೀಂ ಇಂಡಿಯಾದ ಆಟಗಾರರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ.

## 05 03 2020 'ವಿವಾದ್ ಸೆ ವಿಶ್ವಾಸ್ ಮಸೂದೆ 2020' ಲೋಕಸಭೆಯಲ್ಲಿ ಅಂಗೀಕಾರ



ನವದೆಹಲಿ: ಆದಾಯ ತೆರಿಗೆ ಮತ್ತು ಕಾರ್ಪೋರೇಟ್ ತೆರಿಗೆಗೆ ಸಂಬಂಧಿಸಿದ ಬಾಕಿ ತೆರಿಗೆ ವಿವಾದಗಳನ್ನು ಬಗೆಹರಿಸುವ ಸಲುವಾಗಿ ರೂಪಿಸಿರುವ "ವಿವಾದ್ ಸೆ ವಿಶ್ವಾಸ್ ಮಸೂದೆ 2020" ಯನ್ನು ಲೋಕಸಭೆ ಬುಧವಾರ ಅಂಗೀಕರಿಸಲಾಯಿತು. ಮಸೂದೆಯನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆ 5 ರಂದು ಲೋಕಸಭೆಯಲ್ಲಿ ಮಂಡಿಸಿದ್ದರು.

# Current affairs of March 2020 from KPSC Vaani

05 03 2020 ಕರ್ನಾಟಕಕ್ಕೆ ಮೊದಲ ತೇಜಸ್ ರೈಲು : ಮಾರ್ಗ ಅಂತಿಮ



ಬೆಂಗಳೂರು : ಕೇಂದ್ರ ಸರ್ಕಾರವು ಖಾಸಗಿ ಸಹಭಾಗಿತ್ವದಲ್ಲಿ ಆರಂಭಿಸಿರುವ ಖಾಸಗಿ ರೈಲು ತೇಜಸ್ ಎಕ್ಸ್‌ಪ್ರೆಸ್ ರೈಲಿಗೆ ಕರ್ನಾಟಕದಲ್ಲಿ ಸಂಚಾರಕ್ಕೆ ಒಪ್ಪಿಗೆ ಸಿಕ್ಕಿದ್ದು, ಈ ರೈಲು ಸಂಚರಿಸಬೇಕಾದ ಮಾರ್ಗವನ್ನು ಈಗಾಗಲೇ ಅಂತಿಮಗೊಳಿಸಲಾಗಿದೆ. ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಒಂದು ತೇಜಸ್ ರೈಲನ್ನು ಘೋಷಣೆ ಮಾಡಲಾಗಿತ್ತು.
* ದೇಶದ ಮೊದಲ ತೇಜಸ್ ರೈಲು ದೆಹಲಿ ಲಕ್ನೋ ಮಾರ್ಗದಲ್ಲಿ ಸಂಚಾರ ನಡೆಸುತ್ತಿದೆ.
* ತೇಜಸ್ ಎಕ್ಸ್‌ಪ್ರೆಸ್ ಹವಾನಿಯಂತ್ರಿತ ಸೆಮಿ ಹೈಸ್ಪೀಡ್ ರೈಲು ಆಗಿದೆ. ಗಂಟೆಗೆ 130 ಕಿ. ಮೀ. ವೇಗದಲ್ಲಿ ಸಂಚರಿಸುತ್ತವೆ. (200 ಕಿ. ಮೀ. ಸಂಚರಿಸುವ ಸಾಮರ್ಥ್ಯ ಹೊಂದಿದೆ).
* ಕರ್ನಾಟಕದ ಮೊದಲ ತೇಜಸ್ ಎಕ್ಸ್‌ಪ್ರೆಸ್ ರೈಲು ಮಂಗಳೂರು ಮತ್ತು ಕೊಯಮತ್ತೂರು ನಡುವೆ (ಸುಮಾರು 414 ಕಿ.ಮೀ.) ಸಂಚಾರ ನಡೆಸಲಿದೆ.

05 03 2020 ಕ್ರಿಪ್ಟೋಕರೆನ್ಸಿ ಮೇಲೆ RBI ವಿಧಿಸಿದ್ದ ನಿಷೇಧ ತೆಗೆದು ಹಾಕಿದ ಸುಪ್ರೀಂಕೋರ್ಟ್



ನವದೆಹಲಿ: ಜಸ್ಟಿಸ್ ರೊಹಿಂಗ್ಟನ್ ಪಾಲಿ ನರಿಮನ್, ಜಸ್ಟಿಸ್ ಎಸ್. ರವೀಂದ್ರ ಭಟ್ ಮತ್ತು ಜಸ್ಟಿಸ್ ವಿ. ರಾಮಸುಬ್ರಮಣಿಯಣ್ ಅವರಿದ್ದ ಸುಪ್ರೀಂ ಕೋರ್ಟಿನ ತ್ರಿಸದಸ್ಯ ಪೀಠವು ಕ್ರಿಪ್ಟೋಕರೆನ್ಸಿ ಅಥವಾ ಬಿಟ್ ಕಾಯಿನ್ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವುದರ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ (RBI) ಹೇರಿದ್ದ ನಿಷೇಧವನ್ನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ ಇಂದು ಆದೇಶನೀಡಿದೆ.

* ಭಾರತೀಯ ರಿಸರ್ವ್ ಬ್ಯಾಂಕ್ ಏಪ್ರಿಲ್ 2018ರಂದು ಕ್ರಿಪ್ಟೋಕರೆನ್ಸಿ ಅಥವಾ ಬಿಟ್ ಕಾಯಿನ್ ಗಳ ಮೇಲೆ ನಿಷೇಧವನ್ನು ಹೇರಿ ಆದೇಶವನ್ನು ಹೊರಡಿಸಿತ್ತು.

# Current affairs of March 2020 from KPSC Vaani

05 03 2020  ಉಚಿತ ಸಾರ್ವಜನಿಕ ಸಾರಿಗೆ ಸೇವೆ ಒದಗಿಸುವ ದೇಶ: ಲಕ್ಸೆಂಬರ್ಗ್



ಯುರೋಪಿಯನ್ ಒಕ್ಕೂಟದ ಎರಡನೇ ಅತಿ ಚಿಕ್ಕ ದೇಶವಾದ ಲಕ್ಸೆಂಬರ್ಗ್ ದೇಶದಲ್ಲಿ ಎಲ್ಲಾ ರೀತಿಯ ಸಾರ್ವಜನಿಕ ಸಾರಿಗೆಯನ್ನು ಮುಕ್ತಗೊಳಿಸಿದ ವಿಶ್ವದ ಮೊದಲ ದೇಶವಾಗಿದೆ. ಈ ದೇಶದಲ್ಲಿ ಅತಿ ಹೆಚ್ಚು ಕಾರುಗಳ ಸಾಂದ್ರತೆಯಿದ್ದು ಇದರಿಂದಾಗಿ ಹೆಚ್ಚಿನ ಟ್ರಾಫಿಕ್ ಕಿರಿಕಿರಿ ಅನುಭವಿಸುತ್ತಿರುವದರಿಂದ ಇಲ್ಲಿನ ಸರ್ಕಾರವು ಎಲ್ಲ ಸಾರ್ವಜನಿಕ ಸಾರಿಗೆಗಳನ್ನು ಸಾರ್ವಜನಿಕರಿಗೆ ಸಂಪೂರ್ಣ ಉಚಿತವಾಗಿಸಿದೆ.

05 03 2020 ಮಾರ್ಚ್ 4:ರಾಷ್ಟ್ರೀಯ ಭದ್ರತಾ ದಿನ




ಮಾರ್ಚ್ 4, 2020 ರಂದು ರಾಷ್ಟ್ರೀಯ ಭದ್ರತಾ ದಿನವನ್ನಾಗಿ ಭಾರತದಾದ್ಯಂತ ಆಚರಿಸಲಾಯಿತು. ದೇಶದ ಭದ್ರತಾ ಪಡೆಗಳ ಕಾರ್ಯವನ್ನು ಗೌರವಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಇದರಲ್ಲಿ ಪ್ರತಿಯೊಬ್ಬ ಭದ್ರತಾ ಸಿಬ್ಬಂದಿ, ಪೊಲೀಸರು, ಪ್ಯಾರಾ ಮಿಲಿಟರಿ ಪಡೆ, ಕಾವಲುಗಾರರು, ಕಮಾಂಡೋಗಳು, ಸೇನಾಧಿಕಾರಿಗಳು ಇತ್ಯಾದಿಗಳು ಸೇರಿದ್ದಾರೆ. ರಾಷ್ಟ್ರೀಯ ಭದ್ರತಾ ದಿನದ ಮುಖ್ಯ ಉದ್ದೇಶವು ಭದ್ರತಾ ಪಡೆಗಳ ಕರ್ತವ್ಯವನ್ನು ಪ್ರೋತ್ಸಾಹಿಸುವುದಾಗಿದೆ.

# Current affairs of March 2020 from KPSC Vaani

## 06 03 2020 ಕರೋನವೈರಸ್ : ಐರೋಪ್ಯಒಕ್ಕೂಟಶೃಂಗಸಭೆಮುಂದೂಡಿಕೆ



ನವದೆಹಲಿ : ವಿಶ್ವವ್ಯಾಪ್ತಿ ಮಾರಕವಾಗಿ ಕಾಡುತ್ತಿರುವ ಕೊರೊನಾ ವೈರಸ್ ಸೋಂಕಿನಿಂದ ಆತಂಕ ಮನೆ ಮಾಡಿದೆ. ಇದೆ ಕಾರಣದಿಂದಾಗಿ ಭಾರತ ಐರೋಪ್ಯ ಒಕ್ಕೂಟ ಶೃಂಗಸಭೆ ಮುಂದೂಡಲಾಗಿದೆ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಬೆಲ್ಜಿಯಂ ರಾಜಧಾನಿ ಬ್ರುಸೆಲ್ಸ್ ಪ್ರವಾಸ ಕೂಡ ರದ್ದಾಗಿದೆ. ಭಾರತ ಐರೋಪ್ಯ ಒಕ್ಕೂಟ ಶೃಂಗಸಭೆಗೆ ಪ್ರಧಾನಿ ಮೋದಿ ಹಾಜರಾಗಲು ಪ್ರವಾಸ ಕೈಗೊಳ್ಳಬೇಕಾಗಿತ್ತು.

## 06 03 2020 ಟಿ 20 ಮಹಿಳಾ ವಿಶ್ವಕಪ್: ಪ್ರಶಸ್ತಿಗಾಗಿ ಭಾರತ ಆಸ್ಟ್ರೇಲಿಯಾ ಸೆಣಸಾಟ




ಟಿ 20 ಮಹಿಳಾ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ವಿರುದ್ಧ ಸೆಣೆಸಲಿದೆ. ಆಸ್ಟ್ರೇಲಿಯಾ ತಂಡವು ಈಗಾಗಲೇ ನಾಲ್ಕು ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಆದರೆ ಭಾರತ ಮಹಿಳಾ ತಂಡವು ಇದೆ ಮೊದಲ ಬಾರಿಗೆ ಫೈನಲ್ ಪ್ರವೇಶ ಮಾಡಿ ಪ್ರಶಸ್ತಿ ಕನಸು ಕಾಣುತ್ತಿದೆ. ಇದೆ ಮಾರ್ಚ್ 8ರಂದು ಆಸ್ಟ್ರೇಲಿಯಾ ಮತ್ತು ಭಾರತದ ತಂಡಗಳ ಮಧ್ಯೆ ಫೈನಲ್ ಪಂದ್ಯ ನಡೆಯಲಿದೆ.

# Current affairs of March 2020 from KPSC Vaani

06 03 2020 ರಂಗಭೂಮಿ ನಟಿ ಅನಿತಾ ಕಾರ್ಯಪ್ಪಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಕರ್ನಾಟಕ ಸರ್ಕಾರ ಕೊಡಮಾಡುವ ಪ್ರತಿಷ್ಠಿತ ಕಿತ್ತೂರು ರಾಣಿ ಚೆನ್ನಮ್ಮ ರಾಜ್ಯ ಪ್ರಶಸ್ತಿ ಈ ಭಾರಿ ಕೊಡಗಿನ ಹಿರಿಯ ರಂಗಭೂಮಿ ನಟಿ ಅಡ್ಡಂಡ ಅನಿತಾ ಕಾರ್ಯಪ್ಪ ಅವರಿಗೆ ಲಭಿಸಿದೆ ಇದೆ ದಿನಾಂಕ ಮಾರ್ಚ್ 8ರಂದು ನಡೆಯುವ ಮಹಿಳಾ ದಿನಾಚರಣೆ ದಿನದಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆಯಾದ ಶಶಿಕಲಾ ಜೊಲ್ಲೆ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಈ ಪ್ರಶಸ್ತಿ ₹25 ಸಾವಿರ ನಗದು ಮತ್ತು ಪ್ರಶಸ್ತಿ ಪಲಕ ಒಳಗೊಂಡಿದೆ.

06 03 2020 ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿಗೆ ಪ್ರಭಾಕರ ಜೋಶಿ ಆಯ್ಕೆ



ಉಡುಪಿ : ರಾಷ್ಟ್ರಕವಿ ಗೋವಿಂದಪೈ ಸಂಶೋಧನಾ ಕೇಂದ್ರ ಇವರು ಕೊಡಮಾಡುವ ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿಯ 2020ನೇ ಸಾಲಿಗೆ ಖ್ಯಾತ ವಿದ್ವಾಂಸ ಹಾಗೂ ಯಕ್ಷಗಾನ ಅರ್ಥಧಾರಿಯಾದ ಡಾ.ಎಂ.ಪ್ರಭಾಕರ ಜೋಶಿಯವರು ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹10,000 ರೂಪಾಯಿ ನಗದು ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ.

## 06 03 2020 ಮುಂಬೈನಲ್ಲಿ 2023ರ ಒಲಂಪಿಕ್ಸ್ ಕ್ರೀಡಾಕೂಟ ಆಯೋಜನೆ !




ನವದೆಹಲಿ : ಭಾರತದ ವಾಣಿಜ್ಯ ನಗರಿಯಾದ ಮುಂಬೈ ಮಹಾನಗರಿಯಲ್ಲಿ 2023ರ ಅಂತಾರಾಷ್ಟ್ರೀಯ ಒಲಂಪಿಕ್ಸ್ ಕ್ರೀಡಾಕೂಟ ನಡೆಯಲಿದೆ.

* ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯು 2023ರ ಒಲಂಪಿಕ್ಸ್ ಆತಿಥ್ಯವನ್ನು ಭಾರತಕ್ಕೆ ವಹಿಸಿಕೊಳ್ಳುವಂತೆ ಸೂಚಿಸಿದ ಹಿನ್ನಲೆಯಲ್ಲಿ ಮುಂಬೈ ಮಹಾನಗರಿಯಲ್ಲಿ ಕ್ರೀಡಾಕೂಟ ನಡೆಸಲು ತೀರ್ಮಾನ ಕೈಗೊಳ್ಳಲಾಗಿದೆ.
* ಈ ವರ್ಷದ ಜುಲೈನಲ್ಲಿ ಟೋಕಿಯೋದಲ್ಲಿ ನಡೆಯಲಿರುವ 136 ನೇ IOC ಮಹಾಸಭೆಯಲ್ಲಿ ಮುಂಬೈನಲ್ಲಿ ಒಲಂಪಿಕ್ಸ್ ನಡೆಸುವ ಕುರಿತು ಅಧಿಕೃತ ಘೋಷಣೆಯಾಗಲಿದೆ.
* 1983ರಲ್ಲಿ ಭಾರತದ ರಾಜಧಾನಿ ನವದೆಹಲಿಯಲ್ಲಿ ಒಲಂಪಿಕ್ಸ್ ಕ್ರೀಡಾಕೂಟ ನೆರವೇರಿತ್ತು.

## 06 03 2020 ಕರ್ನಾಟಕ ಬಜೆಟ್ 2020 21 : ಯಾವ ಯಾವ ಇಲಾಖೆಗಳಿಗೆ ಎಷ್ಟು ಅನುದಾನ?



ಬೆಂಗಳೂರು : ರಾಜ್ಯದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ರಾಜ್ಯ ಬಜೆಟ್ 2020 21 ನ ಬಜೆಟ್ ಮಂಡಿಸಿದ್ದು, ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳ ನೀಡಿದ ಅನುದಾನ ಕುರಿತ ಮಾಹಿತಿ ನಿಮಗಾಗಿ ಇಲಾಖಾವಾರು ಅನುದಾನ ಮಾಹಿತಿ ಇಲ್ಲಿದೆ .

1. ಶಿಕ್ಷಣ ಇಲಾಖೆ 29,768 ಕೋಟಿ ರೂ ಶೇ 11
2. ನಗರಾಭಿವೃದ್ಧಿ ಇಲಾಖೆ 27,952 ಕೋಟಿ ರೂ ಶೇ 10
3. ಜಲಸಂಪನ್ಮೂಲ ಇಲಾಖೆ 21,308 ಕೋಟಿ ರೂ ಶೇ8
4. ಇಂಧನ ಇಲಾಖೆ 17,290 ಕೋಟಿ ರೂ ಶೇ7
5. ಗ್ರಾಮೀಣಾಭಿವೃದ್ಧಿ ಇಲಾಖೆ 15.595 ಕೋಟಿ ರೂ ಶೇ6
6. ಕಂದಾಯ ಇಲಾಖೆ 11,860 ಕೋಟಿ ರೂ ಶೇ4
7. ಲೋಕೋಪಯೋಗಿ ಇಲಾಖೆ 11,463 ಕೋಟಿ ರೂ ಶೇ4
8. ಆರೋಗ್ಯ ಇಲಾಖೆ 10,122 ಕೋಟಿ ರೂ ಶೇ4
9. ಸಾರಿಗೆ, ಒಳಾಡಳಿತ ಇಲಾಖೆ 10,108 ಕೋಟಿ ರೂ ಶೇ4
10. ಸಮಾಜ ಕಲ್ಯಾಣ ಇಲಾಖೆ 9,444 ಕೋಟಿ ರೂ ಶೇ4
11. ಕೃಷಿ & ತೋಟಗಾರಿಕೆ ಇಲಾಖೆ 7,889 ಕೋಟಿ ರೂ ಶೇ 3
12. ಮಹಿಳೆ & ಮಕ್ಕಳ ಕಲ್ಯಾಣ ಇಲಾಖೆ 4,650 ಕೋಟಿ ರೂ ಶೇ2
13. ವಸತಿ ಇಲಾಖೆ 2,971 ಕೋಟಿ ರೂ ಶೇ1
14. ಆಹಾರ ಇಲಾಖೆ 2,668 ಕೋಟಿ ರೂ ಶೇ1

# Current affairs of March 2020 from KPSC Vaani

06 03 2020 ಮಹಾರಾಷ್ಟ್ರದ ಔರಂಗಬಾದ್ ವಿಮಾನ ನಿಲ್ದಾಣಕ್ಕೆ ಮರುನಾಮಕರಣ




ಮುಂಬೈ : ಮಹಾರಾಷ್ಟ್ರದ ಔರಂಗಬಾದ್ ವಿಮಾನ ನಿಲ್ದಾಣವನ್ನು ಛತ್ರಪತಿ ಶಿವಾಜಿ ಮಹಾರಾಜ್ ಅವರ ಪುತ್ರ ಸಂಭಾಜಿ ಮಹಾರಾಜ್ ಎಂದು ಮರುನಾಮಕರಣ ಮಾಡಲು ಮಹಾರಾಷ್ಟ್ರ ಸರ್ಕಾರದ ಸಚಿವ ಸಂಪುಟ ಗುರುವಾರ ಒಪ್ಪಿಗೆ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ

06 03 2020 ಗೂಗಲ್ ಸಂಸ್ಥೆಯು ಮುಂಬೈನ ನಂತರ ದೆಹಲಿಯಲ್ಲಿ Could Region ತೆರೆಯಲಿದೆ




ದೈತ್ಯ ಗೂಗಲ್ ಸಂಸ್ಥೆಯು ಈಗಾಗಲೇ ಭಾರತದ ಮುಂಬೈನಲ್ಲಿ ತನ್ನ Could Region ಕಚೇರಿ ಹೊಂದಿದ್ದು, ತನ್ನ ಎರಡನೇ Could Region ಕಚೇರಿಯನ್ನು ದೆಹಲಿಯಲ್ಲಿ 2021 ರ ವೇಳೆಗೆ ಆರಂಭಿಸುವುದದಾಗಿ ಘೋಷಿಸಿದೆ.

* ದೆಹಲಿ Could Region ಕಚೇರಿ ಜೊತೆಗೆ, ಗೂಗಲ್ ತನ್ನ ಡೇಟಾ ಕೇಂದ್ರಗಳನ್ನು ಟೊರೊಂಟೊ (ಕೆನಡಾ), ಮೆಲ್ಬೋರ್ನ್ (ಆಸ್ಟ್ರೇಲಿಯಾ) ಮತ್ತು ದೋಹಾ (ಕತಾರ್) ನಲ್ಲಿ ತೆರೆಯಲಿದೆ.

# Current affairs of March 2020 from KPSC Vaani

07 03 2020 ನೂತನಸಿಐಸಿಯಾಗಿಬಿಮಲ್‌ಜುಲ್ಕಾಪ್ರಮಾಣವಚನಸ್ವೀಕಾರ



ನವದೆಹಲಿ : ಕೇಂದ್ರ ಸರ್ಕಾರವು ಮಾಜಿ ಐಎಎಸ್ ಅಧಿಕಾರಿಯಾದ ಬಿಮಲ್ ಜುಲ್ಕಾ ಅವರನ್ನು ನೂತನ ಮುಖ್ಯ ಮಾಹಿತಿ ಆಯುಕ್ತ (CIC)ರಾಗಿ ನೇಮಕಗೊಳಿಸಿದೆ. ಈ ಹಿಂದೆ ಸೇವೆಯಲ್ಲಿದ್ದ ಸಿಐಸಿ ಸುಧೀರ ಭಾರ್ಗವ ಅವರು ಜನವರಿ 11ರಂದು ನಿವೃತ್ತರಾಗಿದ್ದರು. ಇದೀಗ ಅವರ ಸ್ಥಾನಕ್ಕೆ ಬಿಮಲ್ ಜುಲ್ಕಾ ನೇಮಕವಾಗಿದ್ದು ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಜುಲ್ಕಾ ಅವರಿಗೆ ಪ್ರಮಾಣ ವಚನವನ್ನು ಬೋಧಿಸಿದರು.

07 03 2020 ರಾಜ್ಯ ಮಹಿಳಾ ಆಯೋಗದ ನೂತನ ಅಧ್ಯಕ್ಷೆಯಾಗಿ ಪ್ರಮೀಳಾ ನಾಯ್ಡು ಆಯ್ಕೆ



ಬೆಂಗಳೂರು : ರಾಜ್ಯ ಮಹಿಳಾ ಆಯೋಗದ ನೂತನ ಅಧ್ಯಕ್ಷೆಯನ್ನಾಗಿ ಪ್ರಮೀಳಾ ನಾಯ್ಡು ಅವರನ್ನು ಆಯ್ಕೆಮಾಡಲಾಗಿದೆ. ರಾಜ್ಯ ಮಹಿಳಾ ಆಯೋಗವು ರಾಜ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುತ್ತದೆ.

# Current affairs of March 2020 from KPSC Vaani



07 03 2020 ಕೇಂದ್ರದ 'ನಾರಿ ಶಕ್ತಿ' ಪುರಸ್ಕಾರ ಪಡೆದ ಕೇರಳದ ಶತಾಯುಷಿಗಳು



ತಿರುವನಂತಪುರ : ಕೇಂದ್ರ ಸರ್ಕಾರದಿಂದ ನೀಡಲಾಗುವ ನಾರಿಶಕ್ತಿ ಪುರಸ್ಕಾರವನ್ನು ಕೇರಳದ ಶತಾಯುಷಿ ಭಾಗೀರಥಿ ಅಮ್ಮ ಮತ್ತು ಕಾರ್ತಿಯಾಯಿನಿ ಅಮ್ಮ ಅವರು ಆಯ್ಕೆಯಾಗಿದ್ದಾರೆ. ಈ ಇಬ್ಬರು ಸಾಧಕಿಯರನ್ನು 2019ನೇ ಸಾಲಿನ ನಾರಿಶಕ್ತಿ ಪುರಸ್ಕಾರಕ್ಕಾಗಿ ಆರಿಸಲಾಗಿದ್ದು ಇಬ್ಬರೂ ಈ ಪುರಸ್ಕಾರವನ್ನು ಹಂಚಿಕೊಳ್ಳಲಿದ್ದಾರೆ. ವಯಸ್ಕರ ಶಿಕ್ಷಣ ಸಮಿತಿಯ ತರಗತಿಗಳಲ್ಲಿ ಪಾಲ್ಗೊಂಡು ಶಿಕ್ಷಣ ಪಡೆದುದಲ್ಲದೆ ಸಮಿತಿಯು ನಡೆಸುವ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಮೂಲಕ ಯುವ ಸಮುದಾಯಕ್ಕೆ ಮಾದರಿಯಾಗಿದ್ದಾರೆ.

07 03 2020 ಭಾರತದಲ್ಲಿ ಮೊದಲು Wi Fi ಸೇವೆ ನೀಡಲಿರುವ ವಿಸ್ತಾರಾ ಏರ್‌ಲೈನ್ಸ್ ಸಂಸ್ಥೆ



ಇತ್ತೀಚಿಗೆ ವಿಸ್ತಾರಾ ಏರ್‌ಲೈನ್ಸ್ ಸಂಸ್ಥೆಯು ಬೋಯಿಂಗ್ 787 9 ಡ್ರೀಮ್‌ಲೈನರ್ ವಿಮಾನ ಖರೀದಿಸಿದ್ದು ಈ ವಿಮಾನಯನ್ನು ಅನಾವರಣಗೊಳಿಸಿದೆ. ಇದರಿಂದಾಗಿ ವಿಸ್ತಾರಾ ಕಂಪನಿಯು ಭಾರತದ ಮೊದಲ ಬೋಯಿಂಗ್ 787 9 ಡ್ರೀಮ್‌ಲೈನರ್ ವಿಮಾನಗಳನ್ನು ಹೊಂದಿರುವ ಕಂಪನಿಯಾಗಿದೆ. ಬೋಯಿಂಗ್ 787 9 ಡ್ರೀಮ್‌ಲೈನರ್ ವಿಮಾನವು ಅಮೇರಿಕಾ ಮೂಲದ್ದಾಗಿದ್ದು ವಾಷಿಂಗ್ಟನ್‌ನಲ್ಲಿರುವ ಬೋಯಿಂಗ್ ಫ್ಯಾಕ್ಟರಿಯಲ್ಲಿ ತಯಾರಾಗುತ್ತದೆ.

* ವಿಶೇಷ ಸಂಗತಿಯೆಂದರೆ 787 9 ಡ್ರೀಮ್‌ಲೈನರ್ ಹಾರಾಟ ನಡೆಸುವಾಗ ವೈಫೈ ಸೌಲಭ್ಯವನ್ನು ನೀಡುವ ಭಾರತದ ಮೊದಲ ವಿಮಾನವಾಗಿದೆ.

# Current affairs of March 2020 from KPSC Vaani

07 03 2020 ಖನಿಜ ಕಾನೂನು ತಿದ್ದುಪಡಿ ಮಸೂದೆ : ಲೋಕಸಭೆಯಲ್ಲಿ ಅಂಗೀಕಾರ



ದಿನಾಂಕ ಮಾರ್ಚ್ 6, 2020 ರಂದು ಲೋಕಸಭೆಯಲ್ಲಿ ಖನಿಜ ಕಾನೂನು (ತಿದ್ದುಪಡಿ) ಮಸೂದೆ, 2020 ಅನ್ನು ಅಂಗೀಕರಿಸಲಾಯಿತು. ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಮತ್ತು 1957ಕಲ್ಲಿದ್ದಲು ಗಣಿ (ವಿಶೇಷ ನಿಬಂಧನೆ) ಕಾಯ್ದೆ 2015 ಅನ್ನು ತಿದ್ದುಪಡಿ ಮಾಡುವ ಮುಖ್ಯ ಉದ್ದೇಶವನ್ನು ಈ ಮಸೂದೆ ಹೊಂದಿದೆ.
* ಈ ಮಸೂದೆಯನ್ನು ಸಂಸತ್ತಿನಲ್ಲಿ ಚರ್ಚೆಯಿಲ್ಲದೆ ಅಂಗೀಕರಿಸಲಾಯಿತು.

07 03 2020 ಮಾರ್ಚ್ 7 : ಜನ ಔಷಧಿ ದಿವಸ




ಮಾರ್ಚ್ 7, 2020 ರಂದು ಜನ ಔಷಧಿ ದಿವಸ ಆಚರಿಸಲಾಗುವದು. ಪ್ರಧಾನಿ ಮೋದಿ ಯವರ ಸರ್ಕಾರ ಜಾರಿಗೆ ತಂದ "ಪ್ರಧಾನ್ ಮಂತ್ರಿ ಭಾರತೀಯ ಜನ ಔಷಧಿ" ಕೇಂದ್ರಗಳ ಉಪಯೋಗಗಳು ಮತ್ತು ಸಾಧನೆಗಳ ಸವಿನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತಿದೆ. ಈ ದಿನದ ಆಚರಣೆಯ ಅಂಗವಾಗಿ ದೇಶದ ಪ್ರಧಾನಿ ನರೇಂದ್ರ ಮೋದಿಯವರು ಏಳು ಪ್ರಧಾನ್ ಮಂತ್ರಿ ಜನ ಔಷಧಿ ಪರಿಯೋಜನಾ ಕೇಂದ್ರಗಳೊಂದಿಗೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಸಂವಾದ ನಡೆಸಲಿದ್ದಾರೆ.

# Current affairs of March 2020 from KPSC Vaani

07 03 2020 YESಬ್ಯಾಂಕ್‌ಗ್ರಾಹಕರವಾಪಸಾತಿಹಣದಮಿತಿತಿಂಗಳಿಗೆ 50,000ರೂ.




ಸಾಲದ ನಷ್ಟದ ಹಣವನ್ನು ಸಂಗ್ರಹಿಸಲು ವಿಫಲವಾದ YES Bank ವಿರುದ್ಧ ರಿಸರ್ವ್ ಬ್ಯಾಂಕ್ ಕ್ರಮ ಕೈಗೊಂಡಿದೆ. RBI ಯು YES Bank ನ ಬಂಡವಾಳವನ್ನು ಸೇರಿಸಲು SBI (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ)ವನ್ನು ಆಯ್ಕೆ ಮಾಡಿದೆ. ಹಾಗು YES ಬ್ಯಾಂಕ್ ನ ಸುಮಾರು 49% ಪ್ರತಿಶತ ಷೇರುಗಳನ್ನು ಖರೀದಿಸಲು ಮುಂದಾಗಿದೆ. ಈ ಹಿನ್ನಲೆಯಲ್ಲಿ YES ಬ್ಯಾಂಕ್ ಗ್ರಾಹಕರಿಗೆ 30 ದಿನಗಳಿಗೆ 50,000ರೂ ಹಣ ವಾಪಸಾತಿ ಮಿತಿಯನ್ನು ಹೇರಿದೆ. ಆದರೆ ತುರ್ತು ಸಂದರ್ಭಗಲ್ಲಿ ನಿರ್ಬಂಧವನ್ನು 5 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ.

08 03 2020 ರಾಜ್ಯದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳ ಎರಡನೇ ಶನಿವಾರ ಬ್ಯಾಗ್ ರಹಿತ ದಿನ



ಬೆಂಗಳೂರು : ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ನೇತೃತ್ವದ ಸರ್ಕಾರವು ರಾಜ್ಯದ ಶಾಲಾ ವಿದ್ಯಾರ್ಥಿಗಳಿಗೆ ಶುಭ ಸುದ್ದಿ ನೀಡಿದ್ದು ವಿದ್ಯಾರ್ಥಿಗಳು ಇನ್ನು ಮುಂದೆ ಪ್ರತಿ ಎರಡನೇ ಶನಿವಾರಗಳಂದು ಬ್ಯಾಗ್ ರಹಿತವಾಗಿ ಶಾಲೆಗೆ ಬರಬಹುದು ಮತ್ತು ಈ ದಿನವನ್ನು ಸಂಭ್ರಮ ಶನಿವಾರ ಆಚರಣೆ ಮಾಡಲಾಗುತ್ತದೆ ಎಂಬುದಾಗಿ ಸರ್ಕಾರ ತಿಳಿಸಿದೆ. ಅಲ್ಲದೇ ಶಿಕ್ಷಕರ ಸೇವಾ ಸೌಲಭ್ಯಗಳನ್ನು ಅಂತರ್ಜಾಲದ ಮೂಲಕ ಒದಗಿಸಲು "ಶಿಕ್ಷಕ ಮಿತ್ರ" ಎಂಬ ಮೊಬೈಲ್ ಆಪ್ ಅಭಿವೃದ್ಧಿ ಪಡಿಸಲಾಗಿದೆ.

# Current affairs of March 2020 from KPSC Vaani

## 08 03 2020 ತರಂಗ ವಾರಪತ್ರಿಕೆಗೆ PRCI ಚಾಣಕ್ಯ ಪ್ರಶಸ್ತಿ



ಬೆಂಗಳೂರು: ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯು (ಪಿಆರ್‌ಸಿಐ) ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂವಹನ ಸಾಧಕರಿಗೆ ಅಥವಾ ಸಂಸ್ಥೆಗಳಿಗೆ ನೀಡುವ ಚಾಣಕ್ಯ ಪ್ರಶಸ್ತಿಗೆ ತರಂಗ ಕನ್ನಡ ವಾರಪತ್ರಿಕೆ ಆಯ್ಕೆಯಾಗಿದೆ. ಮಣಿಪಾಲ್ ಮೀಡಿಯಾ ನೆಟ್‌ವರ್ಕ್ ಲಿಮಿಟೆಡ್‌ನ ಉತ್ಪನ್ನವಾಗಿರುವ ತರಂಗ ವಾರಪತ್ರಿಕೆಯು “ವರ್ಷದ ಸಂವಹನಕಾರ ವರ್ಷದ ವಾರ ಪತ್ರಿಕೆ’ಯಾಗಿ ಆಯ್ಕೆಯಾಗಿದೆ. ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ 11ನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ “ತರಂಗ’ ವಾರಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ಡಾ| ಸಂಧ್ಯಾ ಎಸ್. ಪೈ ಅವರಿಗೆ ಚಾಣಕ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## 08 03 2020 ವಿದ್ಯಾರ್ಥಿಗಳಿಗಾಗಿ "ವಿಜಯೀಭವ" ಚಾನೆಲ್ ಮತ್ತು ಮೈತ್ರಿ ಸಹಾಯವಾಣಿ ಆರಂಭ




ಬೆಂಗಳೂರು : ಉನ್ನತ ಶಿಕ್ಷಣ ಇಲಾಖೆಯಿಂದ ಆಯೋಜಿಸಿದ್ದ ಕೇಂದ್ರ ಕಚೇರಿಯ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯದ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು “ವಿಜಯೀಭವ’ ಯೂಟ್ಯೂಬ್ ಚಾನಲ್ ಹಾಗು ಮೈತ್ರಿಗೆ ಚಾಲನೆ ನೀಡಿದರು.

* “ಮೈತ್ರಿ’ ಸಹಾಯವಾಣಿ: ವಿದ್ಯಾರ್ಥಿಗಳ ಶೈಕ್ಷಣಿಕ ಸಲಹೆಗಳಿಗಾಗಿ ಮೈತ್ರಿ ಸಹಾಯವಾಣಿಯನ್ನು ಆರಂಭಿಸಲಾಗಿದೆ. ಆ ಮೂಲಕ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಮತ್ತು ವೈಯಕ್ತಿಕ ಸಮಸ್ಯೆಗಳ ಕುರಿತು ಮಾರ್ಗದರ್ಶನ ಪಡೆಯಬಹುದಾಗಿದೆ.
* “ವಿಜಯೀಭವ" ಯೂಟ್ಯೂಬ್ ಚಾನೆಲ್ : ವಿದ್ಯಾರ್ಥಿಗಳ ವೃತ್ತಿ ಮಾರ್ಗದರ್ಶನ, ಸ್ಫೂರ್ತಿ, ಶೈಕ್ಷಣಿಕ ಮಾಹಿತಿ ಮೂಲಕ ಯುವಜನರಿಗೆ ಸೂಕ್ತ ಮಾರ್ಗದರ್ಶನ ನೀಡಲು ಉತ್ತಮ ವೇದಿಕೆಯಾಗುವಂತೆ ಈ ಯುಟ್ಯೂಬ್ ಚಾನೆಲ್ ಆರಂಭಿಸಲಾಗಿದೆ.

# Current affairs of March 2020 from KPSC Vaani

08 03 2020 ಭಾರತ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್ ನಿಂದ ಬಂಡವಾಳ ಹಿಂಪಡೆಯಲು ನಿರ್ಧರಿಸಿದ ಕೇಂದ್ರ




ನವದೆಹಲಿ: ಭಾರತ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್ (ಬಿಪಿಸಿಎಲ್)ನಲ್ಲಿ ಕೇಂದ್ರವು ಸರ್ಕಾರವು ಹೊಂದಿರುವ ಶೇ.52.98 ರಷ್ಟು ಷೇರುಗಳನ್ನು ಮಾರಾಟ ಮಾಡಲು ನಿರ್ಧರಿಸಿದೆ. ಬಿಪಿಸಿಎಲ್ ನ ಷೇರುಕೊಳ್ಳುವ ಆಸಕ್ತಿಯನ್ನು ಹೊಂದಿದವರನ್ನು ಮೇ.2 ಒಳಗೆ ಆಹ್ವಾನಿಸಲಾಗಿದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ (ಡಿಐಪಿಎಎಂ) ಹರಾಜು ದಾಖಲೆಯಲ್ಲಿ ಪ್ರಕಟಿಸಿದೆ. ಈ ಮೂಲಕ ಭಾರತ ಸರ್ಕಾರ ಬಿಪಿಸಿಎಲ್‌ನಲ್ಲಿ ಒಟ್ಟು ₹114.91 ಕೋಟಿ ಮೌಲ್ಯದ ಬಂಡವಾಳವಾಳ ಹೂಡಿಕೆಯನ್ನು ಹೊಂದಿದೆ.

08 03 2020 ವಿಶ್ವ ವಿಖ್ಯಾತ ಪ್ರವಾಸಿ ತಾಣಗಳಿಗೆ ನಾಳೆ ಮಹಿಳೆಯರಿಗೆ ಉಚಿತ ಪ್ರವೇಶ




ನವದೆಹಲಿ: ದಿನಾಂಕ ಮಾರ್ಚ್ 08 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ವಿಶ್ವವಿಖ್ಯಾತ ಆಗ್ರಾದ ತಾಜ್‌ಮಹಲ್ ಸೇರಿ ದೇಶದ ಎಲ್ಲ ಸಂರಕ್ಷಿತ ಸ್ಮಾರಕಗಳಿಗೆ ಮಹಿಳೆಯರಿಗೆ ಉಚಿತ ಪ್ರವೇಶ ನೀಡಲಾಗುವುದೆಂದು ಎಂದು ಭಾರತ ಪುರಾತತ್ವ ಸಮೀಕ್ಷಾ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ದೇಶದಲ್ಲಿರುವ ಸ್ಮಾರಕಗಳಾದ ಕೆಂಪು ಕೋಟೆ, ಕುತುಬ್ ಮಿನಾರ್, ಹುಮಾಯೂನ್ ಸಮಾಧಿ, ತಾಜ್ ಮಹಲ್, ಕೊನಾರ್ಕ್‌ನ ಸೂರ್ಯ ದೇವಾಲಯ, ಮಾಮಲ್ಲಾಪುರಂ, ಎಲ್ಲೋರಾ ಗುಹೆಗಳು, ಖಜುರಾಹೊ ಸ್ಮಾರಕಗಳು ಮತ್ತು ಅಜಂತಾ ಗುಹೆಗಳು ಸೇರಿ ಎಲ್ಲ ಸಂರಕ್ಷಿತಾ ಸ್ಮಾರಕಗಳನ್ನು ವೀಕ್ಷಿಸಲು ಮಹಿಳೆಯರಿಗೆ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ.

# Current affairs of March 2020 from KPSC Vaani

## 08 03 2020 YESಬ್ಯಾಂಕ್ : SBIನಿಂದ ಶೇ.49ರಷ್ಟು ಹೂಡಿಕೆ




ಮುಂಬೈ : ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಯೆಸ್ ಬ್ಯಾಂಕ್ ನ ಶೇರುಗಳನ್ನು SBI ಖರೀದಿಸಲು ಮುಂದಾಗಿದ್ದು ಶೇಕಡಾ. 49 ರಷ್ಟು ಷೇರನ್ನು ಖರೀದಿಸಬೇಕಾದರೆ ಸುಮಾರು 2,450 ಕೋಟಿ ರೂಪಾಯಿ ಹೂಡಿಕೆ ಮಾಡುವ ಅಗತ್ಯವಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತಿಳಿಸಿದೆ. SBI ಅಧ್ಯಕ್ಷ ರಜನೀಶ್ ಕುಮಾರ್, ಯೆಸ್ ಬ್ಯಾಂಕನ್ನು ರಕ್ಷಿಸಬೇಕಾಗಿರುವುದು ಅನಿವಾರ್ಯವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

## 08 03 2020 ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಕ್ಯಾಬೇಜ್ ಬೆಳೆದ ಗಗನಯಾತ್ರಿಗಳು



ವಾಶಿಂಗ್ಟನ್ : ಅಂತರ್‌ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್)ದಲ್ಲಿರುವ ಗಗನಯಾತ್ರಿಗಳು ಕ್ಯಾಬೇಜ್ ತರಕಾರಿಯನ್ನು ಬೆಳೆಯನ್ನು ಬೆಳೆಸುವಲ್ಲಿ ಸಫಲರಾಗಿದ್ದಾರೆ. ಈ ತರಕಾರಿಯು ತಿನ್ನಲು ಯೋಗ್ಯವಾಗಿದ್ದು, ರೋಗ ಉಂಟು ಮಾಡುವ ಯಾವುದೇ ಸೂಕ್ಷ್ಮಾಣು ಜೀವಿಗಳಿಂದ ಮುಕ್ತವಾಗಿದೆ ಮೇಲಾಗಿ ಭೂಮಿಯಲ್ಲಿ ಬೆಳೆದ ಕ್ಯಾಬೇಜ್‌ನಷ್ಟೇ ಪೌಷ್ಟಿಕವಾಗಿದೆ ಎಂದು ತಿಳಿದು ಬಂದಿದೆ. ಭೂಮಿಯ ಬೆಳೆಯುವ ಬೆಳೆಗೆ ಹೋಲಿಸಿದರೆ ಕಡಿಮೆ ಗುರುತ್ವಾಕರ್ಷಣೆ ಮತ್ತು ಹೆಚ್ಚು ವಿಕಿರಣದ ವಾತಾವರಣದಲ್ಲಿ ಇದನ್ನು ಬೆಳೆದಿರುವದು ಒಂದು ಸಾಧನೆಯಾಗಿದೆ.

# Current affairs of March 2020 from KPSC Vaani

09 03 2020 ಬಾಕ್ಸಿಂಗ್: ಪೂಜಾ ರಾಣಿ, ವಿಕಾಸ್ ಕ್ರಿಶನ್ ಗೆ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ



ನವದೆಹಲಿ : ಇದೆ ವರ್ಷ ಟೋಕಿಯೋದಲ್ಲಿ ನಡೆಯಲಿರುವ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಭಾರತದಿಂದ ಏಷ್ಯಾ ಚಾಂಪಿಯನ್ ಪೂಜಾ ರಾಣಿ (75 ಕೆಜಿ) ಮತ್ತು ವಿಕಾಸ್ ಕ್ರಿಶನ್ (69 ಕೆಜಿ) ಅವರ ಜೋಡಿ ಅರ್ಹತೆ ಪಡೆಯುವ ಮೂಲಕ ಅರ್ಹತೆ ಪಡೆದ ಮೊದಲ ಭಾರತೀಯ ಬಾಕ್ಸರ್‌ಗಳಾಗಿದ್ದಾರೆ. ಭಾನುವಾರ ಜೋರ್ಡಾನಿನ ಅಮ್ಮನ್ ನಲ್ಲಿ ನಡೆದ ಕ್ವಾರ್ಟರ್ ಫೈನಲ್ಸ್ ನಲ್ಲಿ ಜಯಗಳಿಸಿ ಸೆಮೀಸ್ ಪ್ರವೇಶಿಸುವ ಮೂಲಕ ಒಲಿಂಪಿಕ್ಸ್‌ಗೆ ಅರ್ಹತೆಯನ್ನು ಪಡೆದರು.

09 03 2020 ಮಹಿಳಾ ಟಿ20 ವಿಶ್ವಕಪ್ : ಆಸ್ಟ್ರೇಲಿಯಾ ಮುಡಿಗೆ ವಿಶ್ವಕಪ್ ಕಿರೀಟ




ಸಿಡ್ನಿ: ಮಹಿಳಾ ಟಿ20 ವಿಶ್ವಕಪ್ ಗೆಲ್ಲುವ ಮೂಲಕ ವಿಶ್ವ ಮಹಿಳಾ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಬೇಕೆಂದಿದ್ದ ಭಾರತೀಯರ ವನಿತೆಯರ ಕನಸು ನನಸಾಗಲಿಲ್ಲ, ಇಂದು ಸಿಡ್ನಿಯಲ್ಲಿ ನಡೆದ ಮಹಿಳಾ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಸೋಲೋಪ್ಪಿಕೊಳ್ಳುವ ಮೂಲಕ ಭಾರತ ತಂಡ ಆಸ್ಟ್ರೇಲಿಯಾಕ್ಕೆ ಶರಣಾಯಿತು. ಮೊದಲು ಬ್ಯಾಟಿಂಗ್ ಮಾಡಿದ ಆಸೀಸ್ ನಿಗದಿತ 20 ಓವರ್ ಗಳಲ್ಲಿ 4 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಿತು. ಆದರೆ ಭಾರತ 19.1 ಓವರ್ ಗಳಲ್ಲಿ 99 ರನ್ ಗಳಿಗೆ ಆಲೌಟ್ ಆಗುವ ಮೂಲಕ 85 ರನ್‌ಗಳ ಸೋಲೊಪ್ಪಿಕೊಂಡಿತು.

# Current affairs of March 2020 from KPSC Vaani

09 03 2020 ಕರ್ನಾಟಕದ ಮಾಜಿ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಕೊನೆಯುಸಿರು



ಬೆಂಗಳೂರು 08: ಕಳೆದ 2009 2014ರ ಅವಧಿಯಲ್ಲಿ ಕರ್ನಾಟಕದ ರಾಜ್ಯಪಾಲರಾಗಿ ಕರ್ತವ್ಯ ನಿರ್ವಹಿಸಿದ್ದ ಹಂಸರಾಜ್ ಭಾರದ್ವಾಜ್(82) ಅವರು ವಯೋಸಹಜ ಕಾಯಿಲೆಯಿಂದ ಭಾನುವಾರ(ಮಾರ್ಚ್ 08) ರಂದು ವಿಧಿವಶರಾದರು.

* 2012 2013ರ ಅವಧಿಯಲ್ಲಿ ಕೇರಳ ರಾಜ್ಯಪಾಲರಾಗಿ ಹೆಚ್ಚುವರಿ ಜವಾಬ್ದಾರಿಯನ್ನು ನಿರ್ವಹಿಸಿದ್ದರು.
* ಮೊದಲ ಬಾರಿ 1982ರಲ್ಲಿ ಮಧ್ಯಪ್ರದೇಶದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು.
* ಡಿಸೆಂಬರ್ 1984 ರಿಂದ ನವೆಂಬರ್ 1989ರವರೆಗೂ ಕೇಂದ್ರ ಕಾನೂನು ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

09 03 2020 ಮಾರ್ಚ್ 09 ರಂದು ವರ್ಷದ ಎರಡನೇಸೂಪರ್‌ಮೂನ್



ಹೊಸದಿಲ್ಲಿ :ಇದೆ ಫೆ.9 ರಂದು ವರ್ಷದ ಮೊದಲ ಸೂಪರ್‌ಮೂನ್ ಗೋಚರಿಸಿದ ನಂತರ ಎರಡನೇ ಸೂಪರ್‌ಮೂನ್ ಮಾರ್ಚ್ 09 ರಂದು ಮತ್ತೆ ಘೋಚರಿಸಲಿದೆ. ಅಂದು ಭೂಮಿಯ ಅತ್ಯಂತ ಸಮೀಪದಲ್ಲಿರುವ ಚಂದ್ರ ಸಾಮಾನ್ಯವಾಗಿ ದೊಡ್ಡ ಗಾತ್ರದಲ್ಲಿ ಘೋಚರಿಸುವದರಿಂದ ಸೂಪರ್ ಮೂನ್ ಅಥವಾ 'ವರ್ಮ್ ಮೂನ್' ಎಂದು ಕರೆಯಲಾಗುತ್ತದೆ.

# Current affairs of March 2020 from KPSC Vaani

09 03 2020 ಭಾರತ ಹಿಂದೂ ಮಹಾಸಾಗರ ಆಯೋಗಕ್ಕೆ 5ನೇ ವೀಕ್ಷಕರಾಗಿ ಭಾರತ ಸೇರ್ಪಡೆ




ದಿನಾಂಕ ಮಾರ್ಚ್ 6 2020 ರಂದು ಭಾರತವು ಹಿಂದೂ ಮಹಾಸಾಗರ ಆಯೋಗಕ್ಕೆ ಐದನೇ ವೀಕ್ಷಕರಾಗಿ ಸೇರ್ಪಡೆಯಾಯಿತು. ಈಗಾಗಲೇ ಮಾಲ್ಟಾ, ಚೀನಾ, ಯುರೋಪಿಯನ್ ಯೂನಿಯನ್ ಮತ್ತು ಒಐಎಫ್ (ಇಂಟರ್ನ್ಯಾಷನಲ್ ಆರ್ಗನೈಸೇಶನ್ ಆಫ್ ಲಾ ಫ್ರಾಂಕೊಫೋನಿ) ಗಳು ಇತರೆ ನಾಲ್ಕು ವೀಕ್ಷಕರಾಗಿದ್ದರೆ. * ಆಯೋಗದಲ್ಲಿ ಭಾರತವು ವೀಕ್ಷಕರಾಗಿ ಸೇರಿಕೊಳ್ಳುವುದರಿಂದ ಪಶ್ಚಿಮ ಹಿಂದೂ ಮಹಾಸಾಗರದಲ್ಲಿ ತನ್ನ ಯೋಜನೆಗಳನ್ನು ವಿಸ್ತರಿಸಲು ಭಾರತಕ್ಕೆ ಅನುಕೂಲವಾಗಲಿದೆ.

10 03 2020 ಶಸ್ತ್ರಾಸ್ತ್ರ ಆಮದಿನಲ್ಲಿ ದ್ವಿತೀಯ ಸ್ಥಾನ ಕಾಯ್ದುಕೊಂಡ ಭಾರತ



ಹೊಸದಿಲ್ಲಿ : 2015 ರಿಂದ 2019ರ ವರೆಗಿನ ಅವಧಿಯಲ್ಲಿ ಅತಿ ಹೆಚ್ಚು ಶಸ್ತ್ರಾಸ್ತ ಆಮದು ಮಾಡಿಕೊಂಡ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು ಎರಡನೇ ಸ್ಥಾನದಲ್ಲಿ ಮುಂದುವರೆದಿದೆ. ಇನ್ನುಅಂತ್ಯಂತ ಹೆಚ್ಚು ಶಸ್ತ್ರಾಸ್ತ್ರ ಆಮದು ಮಾಡಿಕೊಂಡ ರಾಷ್ಟ್ರಗಳಲ್ಲಿ ಸೌದಿ ಅರೇಬಿಯಾ ಪ್ರಥಮ ಸ್ಥಾನದಲ್ಲಿದೆ ಎಂದು ಶಸ್ತ್ರಾಸ್ತ್ರ ವರ್ಗಾವಣೆ ಕುರಿತು ವರದಿ ನೀಡುವ ಅಂತರಾಷ್ಟ್ರೀಯ ಸಂಸ್ಥೆ ತಿಳಿಸಿದೆ. ವರದಿಯ ಪ್ರಕಾರ ಅತಿ ಹೆಚ್ಚು ಶಸ್ತ್ರಾಸ್ತ್ರ ಅಮುದು ಮಾಡಿಕೊಳ್ಳುವ ಮೊದಲ ಐದು ದೇಶಗಳು 1. ಸೌದಿ ಅರೇಬಿಯಾ 2. ಭಾರತ 3.ಈಜಿಪ್ಟ್ 4.ಆಸ್ಟ್ರೇಲಿಯಾ 5.ಚೀನಾ

* ಪಾಕಿಸ್ತಾನ 11ನೇ ಸ್ಥಾನದಲ್ಲಿದೆ.
* ಅತ್ಯಧಿಕ ಶಸ್ತ್ರಾಸ್ತ್ರ ರಫ್ತು ಮಾಡಿದ ದೇಶಗಳಲ್ಲಿ America ಮೊದಲ ಸ್ಥಾನದಲ್ಲಿದೆ.

# Current affairs of March 2020 from KPSC Vaani

## 10 03 2020 ಟೋಕಿಯೋ ಒಲಿಂಪಿಕ್ ಗೆ ಅರ್ಹತೆ ಪಡೆದ ಮೇರಿ ಕೋಮ್



ಅಮ್ಮನ್ (ಜೋರ್ಡಾನ್): ಈಗಾಗಲೇ ಆರು ಬಾರಿಯ ವಿಶ್ವ ಚಾಂಪಿಯನ್ ಎನಿಸಿರುವ ಎಂ.ಸಿ.ಮೇರಿ ಕೋಮ್ (51 ಕೆಜಿ ವಿಭಾಗದಲ್ಲಿ) ಬಾಕ್ಸಿಂಗ್ ನಲ್ಲಿ ಫಿಲಿಪೈನ್ಸ್ ದೇಶದ ಐರಿಶ್ ಮ್ಯಾಗ್ನೊ ವಿರುದ್ದ 5 0 ಅಂತರದಲ್ಲಿ ಸುಲಭ ಗೆಲುವು ಸಾಧಿಸುವ ಮೂಲಕ ಏಷ್ಯನ್ ಕ್ವಾಲಿಫೈಯರ್ಸ್ ಸೆಮಿಫೈನಲ್‌ಗೆ ಮುನ್ನಡೆದಿದ್ದಾರೆ. ಅದರ ಜೊತೆಗೆ ಮೇರಿ ಕೋಮ್ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ.

## 10 03 2020 ಮಂಗಳೂರುಅಂತರ್‌ರಾಷ್ಟ್ರೀಯವಿಮಾನನಿಲ್ದಾಣಸೇರಿದೇಶದ 4 ವಿಮಾನ ನಿಲ್ದಾಣಗಳಿಗೆ ಪ್ರಶಸ್ತಿ



ಮಂಗಳೂರು : ರಾಜ್ಯದ ಮಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿ ದೇಶದ ವಿವಿಧ ನಾಲ್ಕು ವಿಮಾನ ನಿಲ್ದಾಣಗಳಿಗೆ 'ವಿಶ್ವದ ಅತ್ಯುತ್ತಮ ವಿಮಾನ ನಿಲ್ದಾಣ ಪ್ರಶಸ್ತಿ' ಲಭಿಸಿದೆ. ಈ ಕುರಿತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಪ್ರಕಟಣೆಯಲ್ಲಿ ತಿಳಿಸಿದೆ. ಒಟ್ಟು 4 ವಿಮಾನ ನಿಲ್ದಾಣಗಳು 10 ವಿಭಾಗಗಳಲ್ಲಿ ಪ್ರಯಾಣಿಕರಿಗೆ ನೀಡಿದ ಸೇವೆಗಳನ್ನು ಆದರಿಸಿ, ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಚಂಡೀಗಡ, ತಿರುವಂತನಪುರಂ ಹಾಗೂ ಲಕ್ನೋ ವಿಮಾನ ನಿಲ್ದಾಣಗಳು ಈ ಪ್ರಶಸ್ತಿ ದೊರೆತಿದೆ.

# Current affairs of March 2020 from KPSC Vaani

10 03 2020 ಪಿವಿ ಸಿಂಧುಗೆ BBC ಗರಿ ಮತ್ತು ಪಿಟಿ ಉಷಾ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ



ನವದೆಹಲಿ : ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ ಸಿಂಧು ಅವರನ್ನು ವರ್ಷದ ಬಿಬಿಸಿ ಭಾರತೀಯ ಕ್ರೀಡಾಪಟು ಎಂದು ಆಯ್ಕೆ ಮಾಡಲಾಗಿದೆ ಮತ್ತು ಪಿಟಿ ಉಷಾ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗಿದೆ. ಸಿಂಧು ಐದು ವಿಶ್ವ ಚಾಂಪಿಯನ್ ಶಿಪ್ ಪದಕಗಳನ್ನು ಪಡೆದ್ದಿದ್ದಲ್ಲದೆ ಒಲಿಂಪಿಕ್ಸ್ ನಲ್ಲಿ ಬ್ಯಾಡ್ಮಿಂಟನ್ ಸಿಂಗಲ್ಸ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು. ಇನ್ನುಳಿದಂತೆ ಭಾರತದ ಓಟಗಾರ್ತಿಯಾದ P T ಉಷಾ ಅವರಿಗೆ ಜೀವಮಾನ ಸಾಧನೆಯಾ ಪ್ರಶಸ್ತಿಯನ್ನು ನೀಡಲಾಯಿತು.

10 03 2020 ಖ್ಯಾತ ಹಾಸ್ಯ ಬರಹಗಾರ ವೈಎಮ್ಮೆನ್ ಮೂರ್ತಿ ನಿಧನ




ಬೆಂಗಳೂರು: ಹ್ಯೂಮರ್ ಕ್ಲಬ್ (ನಗೆ ಕ್ಲಬ್) ಸ್ಥಾಪಕರು ಮತ್ತು ಖ್ಯಾತ ಹಾಸ್ಯ ಬರಹಗಾರರು ಆಗಿದ್ದ ವೈಎಮ್ಮೆನ್ ಮೂರ್ತಿ ಅವರು ಬೆಂಗಳೂರಿನಲ್ಲಿ ರಾತ್ರಿ ತೀವ್ರ ಹೃದಯಾಘಾತದಿಂದ ನಿಧನರಾದರು ಅವರಿಗೆ ಪ್ರಸ್ತುತ 93 ವರ್ಷ ವಯಸ್ಸಾಗಿತ್ತು. ವೈಎಂಎನ್ ಮೂರ್ತಿ ಅವರು ಸುಧಾ ಮತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಲೇಖಕರಾಗಿ ಕೂಡ ಕೆಲಸ ಮಾಡಿದ್ದರು.

# Current affairs of March 2020 from KPSC Vaani

## 10 03 2020 HALನಿಂದ ವಿವಿಧ ದೇಶಗಲ್ಲಿ ಲಾಜಿಸ್ಟಿಕ್ಸ್ ನೆಲೆ ಸ್ಥಾಪನೆ




ಭಾರತದ ಸೇನೆಗೆ ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಡುವ ಸರ್ಕಾರೀ ಸ್ವಾಮ್ಯದ ಸಂಸ್ಥೆಯಾದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ತನ್ನ ಲಾಜಿಸ್ಟಿಕ್ಸ್ ನೆಲೆಗಳನ್ನು ವಿಯೆಟ್ನಾಂ, ಮಲೇಷ್ಯಾ, ಇಂಡೋನೇಷ್ಯಾ ಮತ್ತು ಶ್ರೀಲಂಕಾದಲ್ಲಿ ಸ್ಥಾಪಿಸಲು ಯೋಜಿಸಿದೆ.

## 10 03 2020 ಭಾರತ ಸರ್ಕಾರದಿಂದ 2022ರ ವೇಳೆಗೆ 75 ಲಕ್ಷ ಸ್ವಸಹಾಯ ಗುಂಪು ರಚನೆ



2022ರ ವೇಳೆಗೆ ಸುಮಾರು 17 ಲಕ್ಷಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳನ್ನು ಅಭಿವೃದ್ಧಿಪಡಿಸುವುದಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ನರೇಂದ್ರ ಸಿಂಗ್ ತೋಮರ್ ಪ್ರಕಟಿಸಿದ್ದಾರೆ. ಈಗಾಗಲೇ ದೇಶದಲ್ಲಿ 60 ಲಕ್ಷಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳಿದ್ದು, ಅದಕ್ಕಾಗಿ 6 ಕೋಟಿ ಮಹಿಳೆಯರನ್ನು ಸಜ್ಜುಗೊಳಿಸುತ್ತಿದೆ.

# Current affairs of March 2020 from KPSC Vaani

## 10 03 2020 ಭಾರತ ಸರ್ಕಾರದಿಂದ 2022ರ ವೇಳೆಗೆ 75 ಲಕ್ಷ ಸ್ವಸಹಾಯ ಗುಂಪು ರಚನೆ



2022ರ ವೇಳೆಗೆ ಸುಮಾರು 17 ಲಕ್ಷಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳನ್ನು ಅಭಿವೃದ್ಧಿಪಡಿಸುವುದಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ನರೇಂದ್ರ ಸಿಂಗ್ ತೋಮರ್ ಪ್ರಕಟಿಸಿದ್ದಾರೆ. ಈಗಾಗಲೇ ದೇಶದಲ್ಲಿ 60 ಲಕ್ಷಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳಿದ್ದು, ಅದಕ್ಕಾಗಿ 6 ಕೋಟಿ ಮಹಿಳೆಯರನ್ನು ಸಜ್ಜುಗೊಳಿಸುತ್ತಿದೆ.

## 11 03 2020 ಏಷ್ಯಾದಅತ್ಯಂತಶ್ರೀಮಂತವ್ಯಕ್ತಿಪಟ್ಟಕಳೆದುಕೊಂಡ ಮುಕೇಶ್ ಅಂಬಾನಿ



ಮುಂಬೈ : ಜಾಗತಿಕವಾಗಿ ಕಾಡುತ್ತಿರುವ ಕರೋನ ವೈರಸ್ ಮತ್ತು ತೈಲ ಬೆಲೆಗಳಲ್ಲಿ ಭಾರೀ ಕುಸಿತದ ಪರಿಣಾಮವಾಗಿ ಷೇರುಪೇಟೆಯಲ್ಲಿ ಉಂಟಾಗಿರುವ ತಲ್ಲಣದಿಂದ ರಿಲಯನ್ಸ್ ಇಂಡಸ್ಟ್ರೀಸ್ ನಷ್ಟ ಅನುಭವಿಸಿದರ ಪರಿಣಾಮ ಮುಖ್ಯಸ್ಥ ಮುಕೇಶ್ ಅಂಬಾನಿ ತಾವು ಈ ಹೊಂದಿದ್ದ ನಂಬರ್ 1 ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿ ಪಟ್ಟವನ್ನು ಕಳೆದುಕೊಂಡು ಎರಡನೇ ಸ್ಥಾನಕ್ಕೆ ಕುಸಿದಿದ್ದಾರೆ ಮತ್ತು ಇದೀಗ ಆ ಪಟ್ಟ ಅಲಿಬಾಬಾ ಗ್ರೂಪ್ ನ ಮುಖ್ಯಸ್ಥ ಜ್ಯಾಕ್ ಮಾ ಅವರ ಪಾಲಿಗೆ ಒಲಿದಿದೆ.

# Current affairs of March 2020 from KPSC Vaani

11 03 2020 ಶಸ್ತ್ರಾಸ್ತ್ರ ರಫ್ತು ಮಾಡುವ ದೇಶಗಳ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತ



ಜಾಗತಿಕ ಮಟ್ಟದಲ್ಲಿ ಶಸ್ತ್ರಾಸ್ತ್ರ ವರ್ಗಾವಣೆ ಮಾಡುವ ಬಗ್ಗೆ SIPRIನಿಂದ ದತ್ತಾಂಶ ವರದಿ ಪ್ರಕಾರ ಇದೇ ಪ್ರಥಮ ಬಾರಿಗೆ ಶಸ್ತ್ರಾಸ್ತ್ರಗಳನ್ನ ವಿವಿಧ ರಾಷ್ಟ್ರಗಳಿಗೆ ರಫ್ತು ಮಾಡುವ ದೇಶಗಳ ಸಾಲಿನಲ್ಲಿ ಭಾರತವು ಕೂಡ ಸ್ಥಾನವನ್ನು ಪಡೆದಿದೆ. ಪ್ರಸ್ತುತ 23 ನೇ ಸ್ಥಾನದಲ್ಲಿರುವ ಭಾರತವು ಈ ಸ್ಥಾನವನ್ನು ದಾಟಿ, ಮುಂಬರುವ ವರ್ಷಗಳಲ್ಲಿ ಮೇಲಕ್ಕೆ ಏರಲಿದೆ. ಇದಕ್ಕೆ ಪೂರಕವೆಂಬಂತೆ ಕೇಂದ್ರ ಸರ್ಕಾರವು ವಿದೇಶಗಳಲ್ಲಿ ಶಸ್ತ್ರಾಸ್ತ್ರಗಳನ್ನು ಮಾರುವ ಯೋಜನೆಗಳಿಗೆ ಉತ್ತೇಜಿಸುತ್ತಿದೆ ಎಂಬುದು ವಿಶೇಷ.

11 03 2020 ಅಫ್ಘಾನ್: ಅಧ್ಯಕ್ಷರಾಗಿ ಅಶ್ರಫ್ ಘನಿ ಪ್ರಮಾಣವಚನ



ಕಾಬೂಲ್ : ಎರಡನೆ ಅವಧಿಗೆ ಅಫ್ಘಾನಿಸ್ತಾನದ ಅಧ್ಯಕ್ಷರಾಗಿ ಅಶ್ರಫ್ ಘನಿ ಅವರು ಪ್ರಮಾಣವಚನ ಸ್ವೀಕರಿಸಿದರು. ಕಾಬೂಲ್‌ನ ಅಧ್ಯಕ್ಷೀಯ ಅರಮನೆಯಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಅಫ್ಘಾನಿಸ್ತಾನದ ಮುಖ್ಯರಾಯಭಾರಿಯಾದ ಸೈಯದ್ ಯೂಸುಫ್ ಹಲೀಂ ಅವರು ಅಶ್ರಫ್ ಘನಿ ಅವರಿಗೆ ಪ್ರಮಾಣವಚನ ಬೋಧಿಸಿದರು. ಆದರೆ ಎದುರಾಳಿಯಾದ ಅಬ್ದುಲ್ಲಾ ಅಬ್ದುಲ್ಲಾ, ಸರಕಾರದ ರಚನೆಯನ್ನು ವಿರೋಧಿಸಿದ್ದಲ್ಲದೆ, ಪ್ರತ್ಯೇಕವಾಗಿ ಪ್ರಮಾಣವಚನ ಸ್ವೀಕರಿಸುವ ಮೂಲಕ ಅಫ್ಘಾನಿಸ್ತಾನದಲ್ಲಿ ಹೊಸ ರಾಜಕೀಯ ಬಿಕ್ಕಟ್ಟಿಗೆ ನಾಂದಿ ಹಾಡಿದ್ದಾರೆ.

# Current affairs of March 2020 from KPSC Vaani

11 03 2020 ವಿಶ್ವ ಸಿನಿಮೋತ್ಸವದಲ್ಲಿ ನಟಿ ಹರಿಪ್ರಿಯಾಗೆ ಶ್ರೇಷ್ಠ ನಟಿ ಪ್ರಶಸ್ತಿ



ಭಾರತೀಯ ವಿಶ್ವ ಸಿನಿಮೋತ್ಸವದಲ್ಲಿ ನಮ್ಮ ಸ್ಯಾಂಡಲ್‌ವುಡ್ ನಟಿ ಹರಿಪ್ರಿಯಾ ಅವರಿಗೆ 'ಶ್ರೇಷ್ಠ ನಟಿ' ಪ್ರಶಸ್ತಿ ಪುರಸ್ಕಾರ ಲಭಿಸಿದೆ. ಹರಿಪ್ರಿಯಾ ಅವರು ನಟಿಸಿದ 'ಅಮೃತಮತಿ' ಚಿತ್ರದಲ್ಲಿನ ಮನೋಜ್ಞ ಅಭಿನಯಕ್ಕೆ ಅವರಿಗೆ ಈ ಪ್ರಶಸ್ತಿ ದೊರೆತಿದೆ.

11 03 2020 ಮಾರ್ಚ್ 10ದಿನ ವಿಶೇಷ : CISFರೈಸಿಂಗ್ ಡೇ



ಪ್ರತಿ ವರ್ಷ ದಿನಾಂಕ ಮಾರ್ಚ್ 10 ರಂದು ಕೇಂದ್ರ ಕೈಗಾರಿಕಾ ಭದ್ರತಾ ಪಡೆಗಳ(CISF)ನ ರೈಸಿಂಗ್ ಡೇ ಆಚರಿಸಲಾಗುತ್ತದೆ. ಸಿಐಎಸ್‌ಎಫ್ ಪಡೆಯು ಕೇಂದ್ರ ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಶಸ್ತ್ರ ಪಡೆಯಾಗಿದೆ. ರೈಸಿಂಗ್ ಡೇ ಆಚರಣೆ ವೇಳೆ CISF ಅರ್ಹ ಅಧಿಕಾರಿಗಳಿಗೆ ಹಲವಾರು ಸೇವಾ ಪದಕಗಳನ್ನು ವಿತರಿಸಲಾಗುತ್ತದೆ. ಅಲ್ಲದೆ, ಸಿಐಎಸ್‌ಎಫ್ ಅಧಿಕಾರಿಗಳೊಂದಿಗೆ ಸಹಕರಿಸಲು ನಾಗರಿಕರಲ್ಲಿ ಜಾಗೃತಿ ಮೂಡಿಸಲಾಗುವದು.

# Current affairs of March 2020 from KPSC Vaani

11 03 2020  ಗುಜರಾತ್‌ನಲ್ಲಿ ಅತಿ ಹೆಚ್ಚು ಸೌರ ಮೇಲ್ಛಾವಣಿ ಅಳವಡಿಕೆ



ದೇಶಾದ್ಯಂತ ಅತಿ ಹೆಚ್ಚು ಸೋಲಾರ್ ಮೇಲ್ಛಾವಣಿ ಪ್ಲಾಂಟ್‌ಗಳಲ್ಲಿ ಅಳವಡಿಸುವಲ್ಲಿ ಗುಜರಾತ್ ಅಗ್ರಸ್ಥಾನದಲ್ಲಿದೆ. ನವೀಕರಿಸಬಹುದಾದ ವಿದ್ಯುತ್ ಬಳಕೆ ಉತ್ತೇಜಿಸಿ ತನ್ನ ಗುರಿ ಸಾಧಿಸಲು ಗುಜರಾತ ರಾಜ್ಯ ಸರ್ಕಾರ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಂಡಿದೆ.

*ಗುಜರಾತ ರಾಜ್ಯದಲ್ಲಿ 50,915 ಕ್ಕೂ ಹೆಚ್ಚು ಮೇಲ್ಛಾವಣಿ ಸೌರ ಸ್ಥಾವರಗಳನ್ನು ಸ್ಥಾಪಿಸಲಾಗಿದೆ.
* ಸೌರಶಕ್ತಿಯ ಬಳಕೆಯನ್ನು ಹೆಚ್ಚಿಸುವ ಸಲುವಾಗಿ "ಸೂರ್ಯ ಗುಜರಾತ್" ಯೋಜನೆ ಅಳವಡಿಕೆ.

12 03 2020 ಯೋಗದಿನಾಚರಣೆ : ಈ ಬಾರಿ ಲೇಹ್ ನಲ್ಲಿ ಪ್ರಧಾನಿ ಮೋದಿಗೆ ಆತಿಥ್ಯ



ನವದೆಹಲಿ : ಪ್ರತಿ ವರ್ಷ ಜೂನ್ 21 ರಂದು ಅಂತಾರಾಷ್ಟ್ರೀಯ ಯೋಗದಿನಾಚರಣೆ ಆಚರಿಸಲಾಗುವದು, ಭಾರತದ ಪ್ರಧಾನ ಮಂತ್ರಿಗಳು ಪ್ರತಿ ವರ್ಷ ಯೋಗದಿನಾಚರಣೆ ಪಾಲ್ಗೊಂಡು ಯೋಗಾಭ್ಯಾಸ ಮಾಡುವರು ಅದೇ ರೀತಿ 2020 ನೇ ಸಾಲಿನ ಅಂತಾರಾಷ್ಟ್ರೀಯ ಯೋಗದಿನಾಚರಣೆ ಈ ಬಾರಿ ಪ್ರಧಾನಿ ನರೇಂದ್ರ ಮೋದಿ ಭಾಗಿಯಾಗಲಿರುವ ನಗರವನ್ನೂ ಅಂತಿಮಗೊಳಿಸಲಾಗಿದೆ. ಈ ಕುರಿತು ಸಚಿವಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದು, ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಕೇಂದ್ರಾಡಳಿತ ಪ್ರದೇಶವಾದ ಲಡಾಕ್ ನ ರಾಜಧಾನ್ ಲೇಹ್ ನಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮೋದಿ ಭಾಗವಹಿಸಲಿದ್ದಾರೆ.

# Current affairs of March 2020 from KPSC Vaani

12 03 2020 'ಕೊರೋನಾ ವೈರಸ್ ರಾಜ್ಯ ಸಾಂಕ್ರಾಮಿಕ ರೋಗ' ಎಂದು ಘೋಷಿಸಿದ ಕರ್ನಾಟಕ ಸರ್ಕಾರ



ಬೆಂಗಳೂರು : ಚೀನಾದಲ್ಲಿ ಪತ್ತೆಯಾಗಿ ಇಡೀ ಜಗತ್ತಿಗೆ ಮಾರಣಾಂತಿಕವಾಗಿ ಕಾಡುತ್ತಿರುವ ಕೊರೊನಾ ವೈರಸ್ ಈಗ ಜಗತ್ತಿನಾದ್ಯಂತ ಹರಡಿದೆ. ಭಾರತವು ಸೇರಿದಂತೆ ಒಟ್ಟು 69 ರಾಷ್ಟ್ರಗಳಿಗೆ ಈ ವೈರಸ್ ಈಗಾಗಲೇ ಹರಡಿದೆ. ಕರ್ನಾಟಕದಲ್ಲೂ ಕೆಲ ಪ್ರಕರಣಗಳು ದಾಖಲಾದ ಹಿನ್ನಲೆಯಲ್ಲಿ ಇದರಿಂದ ಜನರನ್ನು ಪಾರು ಮಾಡುವ ಸಲುವಾಗಿ ಮುಂಜಾಗ್ರತಾ ಕ್ರಮವಾಗಿ ರಾಜ್ಯ ಸರ್ಕಾರ ಕೊರೋನಾ ವೈರಸ್ (ಕೊವಿಡ್ 19)ನ್ನು ಸಾಂಕ್ರಾಮಿಕ ರೋಗ ಎಂದು ಘೋಷಣೆ ಮಾಡಿದೆ.

12 03 2020 ಡಿ ಕೆ ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಯ್ಕೆ



ಬೆಂಗಳೂರು : ಕರ್ನಾಟಕ ರಾಜ್ಯ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನದ ಆಯ್ಕೆಯನ್ನು ಕಾಂಗ್ರೆಸ್ ಹೈಕಮಾಂಡ್ ಅಂತಿಮಗೊಳಿಸಿದ್ದು ಕನಕಪುರದ ಶಾಸಕ ಮತ್ತು ಒಕ್ಕಲಿಗ ನಾಯಕರಾದ ಡಿ ಕೆ ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಆದೇಶ ಹೊರಡಿಸಲಾಗಿದೆ.

* ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿರುವ ಸೋನಿಯಾ ಗಾಂಧಿ ಈ ಆದೇಶವನ್ನು ಹೊರಡಿಸಿದ್ದಾರೆ.
* ಈಶ್ವರ ಖಂಡ್ರೆ, ಸತೀಶ್ ಜಾರಕಿಹೊಳಿ ಮತ್ತು ಸಲೀಂ ಅಹಮ್ಮದ್ ಅವರು ಕೆಪಿಸಿಸಿಯ ನೂತನ ಕಾರ್ಯಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ.

# Current affairs of March 2020 from KPSC Vaani

12 03 2020 ಟೋಕಿಯೋ ಒಲಂಪಿಕ್ಸ್‌ಗೆ ಅರ್ಹತೆ ಪಡೆದ ಶಿವಪಾಲ್




ಪೊಟ್‌ಚೆಫ್‌ಸ್ಟ್ರೂಮ್ (ದಕ್ಷಿಣ ಆಫ್ರಿಕಾ) : 2020 ರಲ್ಲಿ ನಡೆಯಲಿರುವ ಟೋಕಿಯೋ ಒಲಿಂಪಿಕ್ಸ್ ಗೆ ಭಾರತದ ಜಾವೆಲಿನ್ ಎಸೆತಗಾರ ಶಿವಪಾಲ್ ಸಿಂಗ್ ಅರ್ಹತೆ ಪಡೆದಿದ್ದಾರೆ, ಈ ಮೂಲಕ ಇದೆ ಮೊದಲ ಬಾರಿಗೆ ಇವರು ಒಲಂಪಿಕ್‌ನಲ್ಲಿ ಭಾಗವಹಿಸಲಿದ್ದಾರೆ.
* ಭಾರತದ ಸ್ಟಾರ್ ಅಥ್ಲೀಟ್ ನೀರಜ್ ಚೋಪ್ರಾ ಈಗಾಗಲೇ ಈ ಕ್ರೀಡಾಕೂಟಕ್ಕೆ ಅರ್ಹತೆ ಪಡೆದಿದ್ದಾರೆ.
* ದಕ್ಷಿಣ ಆಫ್ರಿಕಾದ ಪೊಟ್‌ಚೆಫ್‌ಸ್ಟ್ರೂಮ್‌ನ ಎಸಿಎನ್‌ಡಬ್ಲ್ಯು ಕ್ರೀಡಾಕೂಟದ ಭರ್ಜಿ ಎಸೆತ ಪಂದ್ಯದಲ್ಲಿ ಶಿವಪಾಲ್ ಸಿಂಗ್ 85.47ಮೀಟರ್ ದೂರಕ್ಕೆ ಜಾವೆಲಿನ್ ಎಸೆದು ಚಿನ್ನದ ಪದಕ ಪಡೆದರು.

12 03 2020 ಸೆಪ್ಟಂಬರ್ .7ರಿಂದ ಬೆಂಗಳೂರಿನಲ್ಲಿ ವಿಶ್ವ ಕಾಫಿ ಸಮಾವೇಶ



ಚಿಕ್ಕಮಗಳೂರು : ಏಷ್ಯಾದಲ್ಲಿಯೇ ಪ್ರಪ್ರಥಮ ಬಾರಿಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಇದೆ ಸೆಪ್ಟೆಂಬರ್ 7 ರಿಂದ 9 ರವರೆಗೆ ಐದನೇ ವಿಶ್ವ ಕಾಫಿ ಸಮಾವೇಶ ಮತ್ತು ಎಕ್ಸ್ಪೋ ಆಯೋಜಿಸಲಾಗಿದೆ. ಭಾರತದ ಕಾಫಿ ಉದ್ಯಮವನ್ನು ವಿಶ್ವಕ್ಕೆ ಪರಿಚಯಿಸುವದು ಈ ಸಮಾವೇಶದ ಮುಖ್ಯ ಉದ್ದೇಶವಾಗಿದೆ.

# Current affairs of March 2020 from KPSC Vaani

12 03 2020 ಮಾರ್ಚ್ 31ರಂದು ರಷ್ಯಾ ಉಪ ಪ್ರಧಾನಿ ಯೂರಿ ಟರ್ಟ್‌ನೆವ್ ಭಾರತಕ್ಕೆ ಭೇಟಿ



ನವದೆಹಲಿ: ರಷ್ಯಾ ಉಪ ಪ್ರಧಾನಿಯಾದ ಯೂರಿ ಟರ್ಟ್‌ನೆವ್ ಮಾ.31 ರಂದು ಭಾರತ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಮೂಲಗಳಿಂದ ತಿಳಿದು ಬಂದಿದೆ. ಈ ಭೇಟಿಯಾ ವೇಳೆ ಬಂಡವಾಳ ಹೂಡಿಕೆ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಭಾರತ ಮತ್ತು ರಷ್ಯಾ ನಡುವಿನ ಬಾಂಧವ್ಯ ಮತ್ತಷ್ಟು ವೃದ್ದಿಯಾಗಲಿದೆ ಹಾಗೂ ಎರಡು ದೇಶಗಳ ಬಾಂಧ್ಯವ್ಯ ವೃದ್ದಿಗೆ ಮಾತುಕತೆ ನಡೆಯಲಿದೆ ಎನ್ನಲಾಗಿದೆ.

12 03 2020 ಉತ್ತರ ಕೊರಿಯಾದಿಂದ ಮತ್ತೆ ಕ್ಷಿಪಣಿ ಪರೀಕ್ಷೆ



ಸೋಲ್: ಕಳೆದ ವರ್ಷ ವಿಯೆಟ್ನಾಂ ರಾಜಧಾನಿ ಹನೋಯ್‌ಯಲ್ಲಿ ನಡೆದ ಕಿಮ್ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವಿನ ಮಾತುಕತೆ ಮುರಿದುಬಿದ್ದ ಬೆನ್ನಲ್ಲೇ ಬಹು ದೂರದ ಗುರಿಯತ್ತ ಚಿಮ್ಮಬಲ್ಲ ನಿರ್ದೇಶಿತ ಕ್ಷಿಪಣಿಗಳ ಪರೀಕ್ಷೆಯನ್ನು ಉತ್ತರ ಕೊರಿಯಾ ನೆರವೇರಿಸಿತು. ಈ ಮೂಲಕ ಉತ್ತರ ಕೊರಿಯಾ ತನ್ನ ಶಸ್ತ್ರಾಸ್ತ್ರ ಸಾಮರ್ಥ್ಯ ವೃದ್ದಿಸಿಕೊಳ್ಳುತ್ತಿದೆ. ಅಮೆರಿಕ ಮತ್ತು ದಕ್ಷಿಣ ಕೊರಿಯಾಕ್ಕೆ ಎಚ್ಚರಿಕೆ ನೀಡುವುದೇ ಈ ಕ್ಷಿಪಣಿ ಪರೀಕ್ಷೆಯ ಮುಖ್ಯ ಉದ್ದೇಶವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

# Current affairs of March 2020 from KPSC Vaani

13 03 2020 ಕೊರೋನವೈರಸನ್ನು 'ಮಹಾ ಸಾಂಕ್ರಾಮಿಕ ರೋಗ' ಎಂದು ಘೋಷಿಸಿದ: WHO



ಜಿನೀವ (ಸ್ವಿಟ್ಸರ್‌ಲ್ಯಾಂಡ್) : ಇಡೀ ವಿಶ್ವದಾದ್ಯಂತ ಹರಡಿ ಜಾಗತಿಕವಾಗಿ ಸುಮಾರು 4300ಕ್ಕೂ ಅಧಿಕ ಜನರನ್ನು ಬಲಿ ತೆಗೆದುಕೊಂಡಿರುವ ಕರೋನ ವೈರಸ್ ಅನ್ನು 'ಮಹಾ ಸಾಂಕ್ರಾಮಿಕ ರೋಗ' ಎಂಬುದಾಗಿ ಪರಿಗಣಿಸಿ ವಿಶ್ವ ಆರೋಗ್ಯ ಸಂಸ್ಥೆ (WHO) ಘೋಷಿಸಿದೆ. ಭೌಗೋಳಿಕವಾಗಿ ದೊಡ್ಡ ವ್ಯಾಪ್ತಿಯಲ್ಲಿ ಅಂದರೆ ಹಲವು ಖಂಡಗಳಲ್ಲಿ ಹರಡಿರುವ ರೋಗಗಳನ್ನೂ "ಮಹಾ ಸಾಂಕ್ರಾಮಿಕ ರೋಗ (ಪಾಂಡೆಮಿಕ್)" ಎಂಬುದಾಗಿ ಪರಿಗಣಿಸಲಾಗುತ್ತದೆ.


13 03 2020 ಕೊನೆಯ ಗ್ರಹ ನೆಪ್ಚೂನ್ ಇದರ ಆಚೆ 139 ಹೊಸ ಆಕಾಶಕಾಯಗಳ ಪತ್ತೆ



ವಾಶಿಂಗ್ಟನ್ : 'ದಿ ಆಯಸ್ಟ್ರೋಫಿಸಿಕಲ್ ಜರ್ನಲ್ ಸಪ್ಲಿಮೆಂಟ್ ಸೀರೀಸ್'ನಲ್ಲಿ ಪ್ರಕಟಗೊಂಡಿರುವ ಅಧ್ಯಯನವೊಂದರ ವರದಿ ಪ್ರಕಾರ ಸೌರವ್ಯೂಹದ ಕೊನೆಯ ಗ್ರಹವಾದ ನೆಪ್ಚೂನ್ ಗ್ರಹದ ಆಚೆಗೆ ಇರುವ 139 ಹೊಸ ಆಕಾಶಕಾಯಗಳನ್ನು ಖಗೋಳ ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಈ ಮೂಲಕ ದೂರದ ಗ್ರಹಗಳನ್ನು ಪತ್ತೆ ಹಚ್ಚುವ ಹೊಸ ವಿಧಾನವೊಂದನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ಕಾಲ್ಪನಿಕ 'ಒಂಬತ್ತನೇ ಗ್ರಹ' ಹಾಗೂ ಇತರ ಪತ್ತೆಯಾಗದ ಗ್ರಹಗಳ ಸಂಶೋಧನೆಯಲ್ಲಿ ತೊಗಾಗಿಕೊಳ್ಳಬಹುದಾಗಿದೆ.

# Current affairs of March 2020 from KPSC Vaani

## 13 03 2020 ಬನ್ನೇರುಘಟ್ಟ:ಪರಿಸರಸೂಕ್ಷ್ಮವಲಯ(ESZ)100 ಚ.ಕಿ.ಮೀ.ಕಡಿತ




ಬೆಂಗಳೂರು : ರಾಜ್ಯ ರಾಜಧಾನಿಗೆ ಅಂಟಿಕೊಂಡಿರುವ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಆರಂಭದಲ್ಲಿ ಗೊತ್ತುಪಡಿಸಿದ್ದ ಪರಿಸರ ಸೂಕ್ಷ್ಮ ವಲಯದ (ESZ) ವ್ಯಾಪ್ತಿಯನ್ನು ಪ್ರಸ್ತುತ ಇದ್ದ 268.96 ಚ.ಕಿ.ಮೀಟರ್‌ಗಳನ್ನು ಸುಮಾರು 100 ಚದರ ಕಿ.ಮೀಗೆ ಕಡಿತಗೊಳಿಸಿ 168.84 ಚದರ ಕಿ.ಮೀಗೆ ಇಳಿಸಿ ಕೇಂದ್ರದ ಪರಿಸರ ಅರಣ್ಯ ಮತ್ತು ಹವಾಮಾನ ವೈಪರೀತ್ಯ ಸಚಿವಾಲಯ ಅಧಿಸೂಚನೆ ಪ್ರಕಟಿಸಿದೆ.

## 13 03 2020 ನಕಲಿ ನೋಟುಗಳನ್ನು ಪತ್ತೆಗೆ ವಿಶಿಷ್ಟ ಭದ್ರತಾ ಶಾಯಿಯನ್ನು ಅಭಿವೃದ್ಧಿಪಡಿಸಿದ CSIR



ಭಾರತೀಯ ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್(CSIR) ಮತ್ತು ನ್ಯಾಷನಲ್ ಫಿಸಿಕಲ್ ಲ್ಯಾಬೊರೇಟರಿ ಜಂಟಿಯಾಗಿ ಇತ್ತೀಚೆಗೆ ದ್ವಿ ಪ್ರಕಾಶಕ(ಎರಡು ವರ್ಣದಲ್ಲಿ ಪ್ರಕಾಶಿಸುವ) ಭದ್ರತಾ ಶಾಯಿಯನ್ನು ನಕಲಿ ನೋಟುಗಳ ಹಾವಳಿ ತಡೆಯಲು ಕಂಡುಹಿಡಿದಿದೆ. ನಕಲಿ ಕರೆನ್ಸಿ ನೋಟುಗಳಿಗೆ ಶಾಯಿಯನ್ನು ಬಳಸಲಾಗುತ್ತದೆ. ಶಾಯಿ ಬಗ್ಗೆ : ಸಾಮಾನ್ಯ ಈ ಶಾಹಿಯು ಬಿಳಿ ಬೆಳಕಿನಲ್ಲಿ ಬಿಳಿ ಬಣ್ಣದಲ್ಲಿರುತ್ತದೆ. ಹಾಗೂ ನೇರಳಾತೀತ ಬೆಳಕಿನಲ್ಲಿ ಇರಿಸಿದಾಗ, ಅದು ಕೆಂಪು ಬಣ್ಣಕ್ಕೆ ತಿರುಗುತ್ತದೆ. ಯುವಿ ಬೆಳಕನ್ನು ಆಫ್ ಮಾಡಿದ ನಂತರ ಅದು ಹಸಿರು ಬಣ್ಣಕ್ಕೆ ತಿರುಗುತ್ತದೆ.

# Current affairs of March 2020 from KPSC Vaani

## 13 03 2020 ಕಿಸಾನ್ ರೈಲು ಯೋಜನೆ ಅನುಷ್ಠಾನಕ್ಕೆ ಸಮಿತಿ ರಚನೆ : ಕೇಂದ್ರ ಸರ್ಕಾರ



ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಬಜೆಟ್ ನಲ್ಲಿ ಘೋಷಿಸಿದಂತೆ "ಕಿಸಾನ್ ರೈಲು ಯೋಜನೆ" ಕುರಿತು ಸಲಹೆ ಸೂಚನೆಗಳನ್ನು ಪಡೆಯಲು ಸಲುವಾಗಿ ಭಾರತ ಸರ್ಕಾರ ಇತ್ತೀಚೆಗೆ ಒಂದು ಸಮಿತಿಯನ್ನು ರಚಿಸಿದೆ. ಈ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಕೇಂದ್ರ ಬಜೆಟ್ 2020 21ರಲ್ಲಿ ಘೋಷಿಸಿದ್ದರು.

## 13 03 2020 ಭಾರತೀಯ ಅಂಚೆಯಿಂದ ಮೊದಲ ಬಾರಿಗೆ ಡಿಜಿಟಲ್ ಲಾಕರ್ ಸೇವೆ ಆರಂಭ..!



ಕೋಲ್ಕತಾ: ಆಧುನಿಕ ಯುಗಕ್ಕೆ ಕಳೆದಂತೆ ಬದಲಾಗುತ್ತ ಸಾಗಿರುವ ಭಾರತೀಯ ಅಂಚೆ ಇಲಾಖೆಯು ಇದೀಗ ಇನ್ನೂ ಒಂದು ಸೇವೆಯನ್ನು ಇನ್ನೊಂದೆ ತನ್ನ ಬತ್ತಳಿಕೆಗೆ ಸೇರಿಸಲಿದೆ. ಹೆಜ್ಜೆ ಮುಂದೆ ಹೋಗಿ, ಡಿಜಿಟಲ್ ಲಾಕರ್ ಸೇವೆಯನ್ನು ಪರಿಚಯಿಸಿದೆ. ಆರಂಭದಲ್ಲಿ ಈ ಸೇವೆಯು ಕೋಲ್ಕತಾದಲ್ಲಿನ ನಬದಿಗಂತ ಐಟಿ ಪೋಸ್ಟ್ ಆಫೀಸ್ ಹಾಗೂ ನ್ಯೂಟೌನ್ ಶಾಖೆಯಲ್ಲಿ ಡಿಜಿಟಲ್ ಲಾಕರ್ ಸೇವೆ ಸಿಗಲಿದೆ.

# Current affairs of March 2020 from KPSC Vaani

14 03 2020 ಯೆಸ್ ಬ್ಯಾಂಕ್ ನೆರವಿಗೆ ಬಂಡವಾಳ ಹೂಡಲು ಸಹಾಯಕ್ಕೆ ಬಂದ ಐಸಿಐಸಿಐ ಮತ್ತು ಇನ್ನು ಹಲವರು




ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ನೇತೃತ್ವದಲ್ಲಿ ಖಾಸಗಿ ವಲಯದ ಸಾಲಗಾರ ಯೆಸ್ ಬ್ಯಾಂಕ್ ಗಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಪ್ರಸ್ತಾಪಿಸಿರುವ ಪುನರ್ನಿರ್ಮಾಣ ಯೋಜನೆಗೆ ಕ್ಯಾಬಿನೆಟ್ ಅನುಮೋದನೆ ನೀಡಿದೆ. SBI ಜೊತೆಗೆ ICICI Bank, HDFC, ಕೋಟಕ್ ಮಹಿಂದ್ರಾ ಬ್ಯಾಂಕ್, Axis ಇನ್ನು ಹಲವಾರು ಸೇರಿ 12000 ಕೋಟಿ ರೂಪಾಯಿ ಬಂಡವಾಳವನ್ನು ಹೂಡಿಕೆ ಮಾಡಲಿದ್ದಾರೆ.

14 03 2020 ಈ ವರ್ಷದ ರಣಜಿ ಟ್ರೋಫಿ ತನ್ನದಾಗಿಸಿಕೊಂಡ ಸೌರಾಷ್ಟ್ರ



ಜಯದೇವ್ ಉನದ್ಕತ್ ನ ಉತ್ತಮ ಆಟದಿಂದ ಸೌರಾಷ್ಟ್ರ ತಂಡವು ಬಂಗಾಳದ ವಿರುದ್ಧ ತನ್ನ ಚೊಚ್ಚಲ ರಣಜಿ ಟ್ರೋಫಿಯನ್ನು ಗೆದ್ದಿತು.

# Current affairs of March 2020 from KPSC Vaani

14 03 2020 ೧ಕೋಟಿಗೂಹೆಚ್ಚಿನಜನಸಂಖ್ಯೆಇರುವನಗರಗಳಿಗೆಪಿಂಕ್‌ಬಸ್ ನಿತಿನ್‌ಗಡ್ಕರಿ



ಗುಲಾಬಿ ಬಸ್ ಗಳನ್ನು ಮಹಿಳಾ ಪ್ರಯಾಣಿಕರಿಗಾಗಿ ಸುರಕ್ಷತೆಯ ಸಲುವಾಗಿ ಪರಿಚಯಿಸಿದ್ದು, ಇದರಲ್ಲಿ ಚಾಲಕರು , ಕಂಡಕ್ಟರ್ ಗಳು ಸಹ ಮಹಿಳೆಯರೇ ಆಗಿರುತ್ತಾರೆ ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಲೋಕಸಭೆಯಲ್ಲಿ ಹೇಳಿದ್ದಾರೆ

14 03 2020 ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ.4ರಷ್ಟು ಹೆಚ್ಚಳ



ನವದೆಹಲಿ: ಕೇಂದ್ರ ಸರ್ಕಾರೀ ನೌಕರಿಗೆ ಕೇಂದ್ರವು ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆಯನ್ನು(ಡೈಲಿ ಅಲ್ಲೋವನ್ಸ್) ಶೇಕಡಾ 4ರಷ್ಟು ಹೆಚ್ಚಿಸಿ ಕೇಂದ್ರ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಕುರಿತು ಅಧಿಕೃತವಾಗಿ ತಿಳಿಸಿದ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಅವರು, ಸುದ್ದಿಗೋಷ್ಠಿಯನ್ನು ಏರ್ಪಡಿಸಿ ಕೇಂದ್ರ ಸರ್ಕಾರಿ ನೌಕರರ ಡಿಎ ಶೇ.4 ರಷ್ಟು ಹೆಚ್ಚಿಸಲು ಸಂಪುಟ ತೀರ್ಮಾನಿಸಿದೆ ಎಂದು ತಿಳಿಸಿದರು. ಸದ್ಯ ಇರುವ ತುಟ್ಟಿಭತ್ಯೆ ಶೇ.17 ರಷ್ಟು ಏರಿಕೆಯಾಗಿದ್ದು ಶೇ.21ಕ್ಕೆ, ಇದರಿಂದ ಪ್ರಯೋಜನ 50 ಲಕ್ಷ ನೌಕರರು ಮತ್ತು 65 ಲಕ್ಷ ಪಿಂಚಣಿದಾರರಿಗೆ ಅನುಕೂಲ.

# Current affairs of March 2020 from KPSC Vaani

14 03 2020 ಏಪ್ರಿಲ್ 15ಕ್ಕೆ IPL ಪದ್ಯಾವಳಿ ಮುಂದೂಡಿಕೆ




ಮುಂಬೈ : ಇದೆ ಮಾರ್ಚ್ 29 ನಡೆಯಬೇಕಿದ್ದ ಭಾರತದ ಪ್ರತಿಷ್ಠಿತ ಕ್ರಿಕೆಟ್ ಪಂದ್ಯಾವಳಿಯಾದ Indian Premier league (IPC) ಅನ್ನು ದೇಶದಲ್ಲಿ ಕೊರೋನಾವೈರಸ್ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಮುನ್ನಚ್ಚೆರಿಕೆ ಕ್ರಮವಾಗಿ ಏಪ್ರಿಲ್ 15 ರವರೆಗೆ ಮುಂದೂಡಲು ಬಿಸಿಸಿಐ ತೀರ್ಮಾನಿಸಿದೆ.

14 03 2020 ಕೊರೊನಾ ವಿರುದ್ದ ಹೋರಾಟಕ್ಕಾಗಿ ಸಾರ್ಕ್ ರಾಷ್ಟ್ರಗಳಿಗೆ ಮೋದಿ ಕರೆ



ನವದೆಹಲಿ : ಮಾರಕ ಕೊರೊನಾ ವೈರಸ್ ವಿರುದ್ದ ಹೋರಾಡಲು ಹಾಗೂ ಜಂಟಿ ಕಾರ್ಯತಂತ್ರ ರೂಪಿಸುವಂತೆ ಪ್ರಧಾನಿ ನರೇಂದ್ರ ಮೋದಿ ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ (ಸಾರ್ಕ್) ದೇಶಗಳ ನಾಯಕರುಗಳಿಗೆ ಕರೆ ನೀಡಿದ್ದಾರೆ. ಅಲ್ಲದೆ ದಕ್ಷಿಣ ಏಷ್ಯಾ ದೇಶಗಳ ಜನರರಕ್ಷಣೆಗಾಗಿ ಜಂಟಿಕಾರ್ಯತಂತ್ರರೂಪಿಸುವ ಮೂಲಕ ವಿಶ್ವಕ್ಕೆ ಮಾದರಿಯಾಗಬೇಕೆಂದುಅವರುಸಲಹೆಮಾಡಿದ್ದಾರೆ.

# Current affairs of March 2020 from KPSC Vaani

15 03 2020 ಉಡಾನ್ ಯೋಜನೆ:ಹುಬ್ಬಳ್ಳಿ ಏರ್‌ಪೋರ್ಟ್‌ಗೆ ಉತ್ತಮ ವಿಮಾನ ನಿಲ್ದಾಣ ಪ್ರಶಸ್ತಿ



ಹುಬ್ಬಳ್ಳಿ : ಕೇಂದ್ರ ಸರ್ಕಾರದ ಉಡಾನ್ ಯೋಜನೆಯಡಿ ಕೇಂದ್ರ ಸರ್ಕಾರದ ವಿಮಾನಯಾನ ಮಂತ್ರಾಲಯವು ಭಾರತೀಯ ವಾಣಿಜ್ಯೋದ್ಯಮ ಸಂಸ್ಥೆಯ ಸಹಯೋಗದಲ್ಲಿ ಹೈದರಾಬಾದ್‌ನ ಬೇಗಂಪೇಟೆಯಲ್ಲಿ ಆಯೋಜಿಸಿರುವ ವಿಮಾನಯಾನ ಕುರಿತ ಕಾರ್ಯಕ್ರಮದಲ್ಲಿ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಉತ್ತಮ ವಿಮಾನ ನಿಲ್ದಾಣ ಪ್ರಶಸ್ತಿ ನೀಡಿ ಗೌರವಿಸಿದೆ. ಮಾರ್ಚ್ 13 ರಂದು ನಡೆದ ಸಮಾರಂಭದಲ್ಲಿ ಹುಬ್ಬಳ್ಳಿ ವಿಮಾನ ನಿಲ್ದಾಣದ ನಿರ್ದೇಶಕ ಪ್ರಮೋದ ಠಾಕ್ರೆ ಪ್ರಶಸ್ತಿ ಸ್ವೀಕರಿಸಿದರು.

15 03 2020 ಕೊರೋನವೈರಸ್ : 'ಅಧಿಸೂಚಿತ ವಿಪತ್ತು' ಘೋಷಿಸಿದ ಭಾರತ



ನವದೆಹಲಿ : ಭಾರತದಲ್ಲಿ ಕೊರೋನವೈರಸ್ ದಾಳಿಯನ್ನು 'ಅಧಿಸೂಚಿತ ವಿಪತ್ತು' ಎಂದು ಕೇಂದ್ರ ಸರಕಾರವು ಘೋಷಿಸಿದೆ.

* ಇನ್ನು ಸೋಂಕಿನಿಂದ ಮೃತರ ಕುಟುಂಬಗಳಿಗೆ ನಾಲ್ಕು ಲಕ್ಷ ರೂ. ಪರಿಹಾರವನ್ನು ನೀಡಲಾಗುವುದು.
* ಚಿಕಿತ್ಸೆಯಲ್ಲಿರುವ ಸೋಂಕುಪೀಡಿತರ ಆಸ್ಪತ್ರೆ ವೆಚ್ಚವನ್ನು ಆಯಾ ರಾಜ್ಯಗಳ ರಾಜ್ಯ ಸರಕಾರಗಳು ನಿಗದಿಪಡಿಸಲಿವೆ ಎಂದು ಕೇಂದ್ರ ಗೃಹ ಸಚಿವಾಲಯವು ತಿಳಿಸಿದೆ.


# Current affairs of March 2020 from KPSC Vaani

15 03 2020 ಕೊರೊನಾ ವೈರಸ್ : ರಾಷ್ಟ್ರೀಯ ತುರ್ತು ಪರಿಸ್ಥಿತಿ ಘೋಷಿಸಿದ ಅಮೆರಿಕ



ವಾಷಿಂಗ್ಟನ್ : ಅಮೇರಿಕಾದಲ್ಲಿ ತೀವ್ರವಾಗಿ ವ್ಯಾಪಿಸುತ್ತಿರುವ ಕೊರೊನಾ ಮಹಾಮಾರಿ ವೈರಸ್ ಗೆ ಈಗಾಗಲೇ ಅಮೇರಿಕಾದಲ್ಲಿ 41 ಮಂದಿ ಮೃತಪಟ್ಟಿದ್ದಾರೆ. ಈ ಬೆನ್ನಲ್ಲೇ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು "ರಾಷ್ಟ್ರೀಯ ತುರ್ತು ಪರಿಸ್ಥಿತಿ" ಘೋಷಣೆ ಮಾಡಿದ್ದಾರೆ.

15 03 2020 ಭಾರತದಲ್ಲಿ ಸ್ಟೇಜ್ 2ಹಂತ ತಲುಪಿದ 'ಕರೋನಾ ವೈರಸ್'



ಭಾರತದಲ್ಲಿ ಕರೋನಾ ಸೋಂಕು ವ್ಯಾಪಕವಾಗಿ ಹೆಚ್ಚುತ್ತಿರುವ ಹಿನ್ನಲೆಯಲ್ಲಿ, ಈಗಾಗಲೇ ಸೋಂಕು ನಿಯಂತ್ರಣಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ಕರೋನಾ ಭಾರತದಲ್ಲಿ ಸ್ಟೇಜ್ 2ಹಂತ ತಲುಪಿದೆ.
ಹಂತ 1: ಸೋಂಕಿತ ಸ್ಥಳಗಳಿಂದ ವೈರಸ್ ಹರಡುವ ಪ್ರಕರಣಗಳು.
ಹಂತ2: ಸ್ಥಳೀಯ ಜನರಲ್ಲಿ ಹರಡಲು ಪ್ರಾರಂಭಿಸುತ್ತದೆ. ಪ್ರಕರಣಗಳು ಹೆಚ್ಚಾಗಲು ಪ್ರಾರಂಭಿಸುತ್ತವೆ.
ಹಂತ 3: ದೊಡ್ಡ ಪ್ರಮಾಣದಲ್ಲಿ ಇದು ಸಮುದಾಯಗಳು, ನೆರೆಹೊರೆಗಳಲ್ಲಿ ಹರಡಲು ಪ್ರಾರಂಭಿಸುತ್ತದೆ.
ಹಂತ 4: ರೋಗವು ಸಾಂಕ್ರಾಮಿಕ ರೋಗವಾಗಿ ಬದಲಾಗುತ್ತದೆ. ಅದು ಯಾವಾಗ ಮತ್ತು ಎಲ್ಲಿ ಕೊನೆಗೊಳ್ಳುತ್ತದೆ ಎಂದು ಹೇಳುವುದು ಕಷ್ಟ.
* ಇಟಲಿ, ಚೀನಾದಲ್ಲಿ ಕರೋನಾ ಸಾಂಕ್ರಾಮಿಕ ರೋಗವಾಗಿ ಮಾರ್ಪಟ್ಟಿದೆ.

# Current affairs of March 2020 from KPSC Vaani

## 15 03 2020 ಕೊರನಾವೈರಸ್ಔಷಧಿತಯಾರಿಕೆಯಲ್ಲಿಭಾರತಕ್ಕೆ5ನೇಸ್ಥಾನ




ನವದೆಹಲಿ : ಇಡೀ ವಿಶ್ವವನ್ನೇ ಮಾರಕವಾಗಿ ಕಾಡುತ್ತಿರುವ ಕೊರೊನಾ ವೈರಸ್ ಸೋಂಕಿಗೆ ಇದುವರೆಗೂ ಯಾವ ರಾಷ್ಟ್ರವು ಯಾವುದೇ ಔಷಧಿಯನ್ನು ಕಂಡು ಹಿಡಿದಿಲ್ಲ. ಭಾರತದ ಪುಣೆಯಲ್ಲಿ ಇರುವ ಸೂಕ್ಷ್ಮ ರೋಗಾಣುಗಳ ಅಧ್ಯಯನ ಕೇಂದ್ರದಲ್ಲಿ ವಿಜ್ಞಾನಿಗಳು ಕೊರೊನಾ ವೈರಸ್ ಲಸಿಕೆ ಕಂಡು ಹಿಡಿಯಲು ಶ್ರಮಿಸುತ್ತಿದ್ದು, ಈ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು 5ನೇ ಸ್ಥಾನ ಪಡೆದಿದೆ ಎಂದು ವರದಿಯಾಗಿದೆ. * ಈ ಮಾರಕ ರೋಗಕ್ಕೆ ಲಸಿಕೆ ಕಂಡು ಹಿಡಿಯಬೇಕಾದರೆ ಕನಿಷ್ಠ 18 ತಿಂಗಳಾದರೂ ಬೇಕಾಗುತ್ತದೆ ಎಂದು ಅಂತಾರಾಷ್ಟ್ರೀಯ ಆರೋಗ್ಯ ಸಂಸ್ಥೆ ತಿಳಿಸಿದೆ.

## 15 03 2020 ಮೃದಂಗ ವಿದ್ವಾನ್ ಟಿ.ಎ.ಎಸ್. ಮಣಿ ನಿಧನ



ಬೆಂಗಳೂರು: ಖ್ಯಾತ ಮೃದಂಗ ವಿದ್ವಾನ್ ಟಿ.ಎ.ಎಸ್. ಮಣಿ (84) ಅವರು ಮೃತಪಟ್ಟಿದ್ದಾರೆ. ಅಂತರರಾಷ್ಟ್ರೀಯ ಖ್ಯಾತಿಯ ಲಯವಾದ್ಯ ಗೋಷ್ಠಿಯಾದ 'ತಾಳ ತರಂಗಿಣಿ' ಪ್ರಾರಂಭಿಸಿದ್ದರು, ಮತ್ತು ದೇಶದ ಅನೇಕ ಕಡೆ ಪ್ರದರ್ಶಿಸಿದರು. ಕರ್ನಾಟಕ ಗಾನ ಕಲಾ ಪರಿಷತ್ತಿನಿಂದ 'ಗಾನ ಕಲಾ ಭೂಷಣ' ಗೌರವ ಸೇರಿದಂತೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಹಲವು ಪ್ರಶಸ್ತಿಗಳು ಗೌರವಗಳು ಇವರಿಗೆ ಸಂದಿವೆ.

# Current affairs of March 2020 from KPSC Vaani

15 03 2020 ನವದೆಹಲಿಯಲ್ಲಿ GST 39ನೇ ಕೌನ್ಸಿಲ್ ಸಭೆ




ಮಾರ್ಚ್ 14, 2020 ರಂದು ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸರಕುಗಳು ಮತ್ತು ಸೇವಾ ತೆರಿಗೆಗಳ ಮಂಡಳಿಯ 39ನೇ ಸಭೆ ನವದೆಹಲಿಯಲ್ಲಿ ನಡೆಯಿತು. ಮುಖ್ಯಾಂಶಗಳು
* ಮೊಬೈಲ್ ಫೋನ್‌ಗಳ GSTಯನ್ನು 12% ರಿಂದ 18% ಕ್ಕೆ ಹೆಚ್ಚಿಸಿದೆ.
* ಕೈಯಿಂದ ಮಾಡಿದ ಮತ್ತು ಯಂತ್ರ ತಯಾರಿಸಿದ ಮ್ಯಾಚ್ ಸ್ಟಿಕ್‌ಗಳ ತೆರಿಗೆಯನ್ನು 12% ಕ್ಕೆ ಇಳಿಸಿತು.
*ವಿಮಾನಗಳ ನಿರ್ವಹಣೆ/ದುರಸ್ತಿ ಸೇವೆಗಳ ಮೇಲಿನ ಜಿಎಸ್‌ಟಿಯನ್ನು 18% ರಿಂದ 5% ಕ್ಕೆ ಇಳಿಸಲಾಗಿದೆ.

16 03 2020 ಕರೋನ ವೈರಸ್: ಸಾರ್ಕ್ ನಾಯಕರೊಂದಿಗೆ ಪ್ರಧಾನಿ ಮೋದಿ ವಿಡಿಯೋ ಕಾನ್ಫರೆನ್ಸ್




ಭಾರತದ ಪ್ರಧಾನಿ ಮೋದಿಯವರು ನೆರೆಯ ರಾಷ್ಟ್ರಗಳಾದ ಸಾರ್ಕ್ ದೇಶಗಳೊಂದಿಗೆ ಮಾರಕ ಕೊರೊನಾ ವೈರಸ್ ನಿಯಂತ್ರಣ ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತಂತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದರು. ಈ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಮಾಲ್ಡೀವ್ ಅಧ್ಯಕ್ಷ ಇಬ್ರಾಹಿಂ ಮುಹಮ್ಮದ್ ಸೊಲಿಹ್, ಶ್ರೀಲಂಕಾ ಪ್ರಧಾನ ಮಂತ್ರಿ ಗೊಟಬಯ ರಾಜಪಕ್ಷೆ, ಭೂತಾನ್ ಪ್ರಧಾನಿ ಲೋಟೆ ತ್ಶೆರಿಂಗ್, ಬಾಂಗ್ಲಾದೇಶ ಪ್ರಧಾನಿ ಶೇಖ್ ಹಸೀನಾ, ನೇಪಾಳ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಮತ್ತು ಅಫ್ಘಾನ್ ಅಧ್ಯಕ್ಷ ಅಶ್ರಫ್ ಘನಿ, ಪಾಕಿಸ್ತಾನದ ಪ್ರತಿನಿಧಿಯಾಗಿ ಡಾ. ಝೂಫರ್ ಮಿರ್ಜಾ ಅವರು ಭಾಗವಹಿಸಿದ್ದರು.

# Current affairs of March 2020 from KPSC Vaani



# Current affairs of March 2020 from KPSC Vaani

16 03 2020 ಮೈಕ್ರೋಸಾಫ್ಟ್ ನ ನಿರ್ದೇಶಕರ ಜವಾಬ್ದಾರಿ ತ್ಯಜಿಸಿದ ಬಿಲ್ ಗೇಟ್ಸ್



ಸ್ಯಾನ್ ಫ್ರಾನ್ಸಿಸ್ಕೊ : ಮೈಕ್ರೋಸಾಫ್ಟ್ ಸಹ ಸಂಸ್ಥಾಪಕರಾದ ಬಿಲ್ ಗೇಟ್ಸ್ ಅವರು ಸಂಸ್ಥೆಯ ನಿರ್ದೇಶಕರ ಮಂಡಳಿಯಿಂದ ಸ್ಥಾನದಿಂದ ಹೊರಬಂದಿದ್ದಾರೆ. ಇನ್ನು ಪೂರ್ಣ ಪ್ರಮಾಣದ ಸಮಾಜಸೇವೆಯಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎಂದು ಸಂಸ್ಥೆಯ ಮೂಲಗಳಿಂದ ತಿಳಿದುಬಂದಿದೆ. ಸುಮಾರು ಒಂದು ದಶಕದ ಹಿಂದೆಯೇ ಇವರು ಸಂಸ್ಥೆಯ ಅಧ್ಯಕ್ಷ ಹುದ್ದೆಯನ್ನು ತ್ಯಜಿಸಿ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಂದ ದೂರ ಉಳಿದಿದ್ದರು.

16 03 2020 ರಾಷ್ಟ್ರೀಯಸ್ವಚ್ಛಗಂಗಾಮಿಷನ್ಇಂದ“ಗಂಗಾಅಮಂತ್ರನ ಅಭಿಯಾನ”ಆಯೋಜನೆ



ಮಾರ್ಚ್ 14, 2020 ರಂದು, ರಾಷ್ಟ್ರೀಯ ಸ್ವಚ್ಛ ಗಂಗಾ ಮಿಷನ್ ಇಂದ “ಗಂಗಾ ಅಮಂತ್ರನ ಅಭಿಯಾನ” ಅನ್ನು ಆಯೋಜಿಸಿತು. ಗಂಗಾ ಅಮಂತ್ರನ ಅಭಿಯಾನವು ಗಂಗಾ ನದಿಯಲ್ಲಿ ತೆರೆದ ನೀರಿನ ದೋಣಿವಿಹಾರ ಸೇರಿ ವಿವಿಧ ಆಟಗಳನ್ನು ಆಯೋಜಿಸುವದಾಗಿದೆ. ದೇವ್‌ಪ್ರಯಾಗ್ ಮತ್ತು ಗಂಗಾ ಸಾಗರ್ ನಡುವೆ ಜಲ ಕ್ರೀಡೆಗಳನ್ನು ಆಯೋಜಿಸಲಾಗುವದು. ದೇವಪ್ರಯಾಗ್ ಎಂಬ ಸ್ಥಳದಲ್ಲಿ ಅಲಕಾನಂದ ಮತ್ತು ಭಾಗೀರಥಿ ಎಂಬ ಎರಡು ನದಿಗಳು ಒಟ್ಟಿಗೆ ಸೇರುವುದರ ಮೂಲಕ ಪ್ರಬಲವಾದ ಗಂಗಾ ನದಿ ರೂಪಗೊಳ್ಳುವಸ್ಥಳವಾಗಿದೆ.

# Current affairs of March 2020 from KPSC Vaani

16 03 2020 ಕರೋನಾವೈರಸ್:ಒಟ್ಟು37ಅಂತರರಾಷ್ಟ್ರೀಯಗಡಿಗಳಪೈಕಿ 18ನ್ನು ಮುಚ್ಚಿದ ಭಾರತ



ಭಾರತವು ಒಟ್ಟು 37 ಅಂತರರಾಷ್ಟ್ರೀಯ ಗಡಿಗಳನ್ನು ಹೊಂದಿದ್ದು ಅವುಗಳ ಪೈಕಿ 18 ಅನ್ನು ಮಾರ್ಚ್ 15, 2020 ರಿಂದ ಮುಚ್ಚುವಂತೆ ಭಾರತ ಸರ್ಕಾರ ಆದೇಶಿಸಿದೆ. ಇವುಗಳ ಪೈಕಿ ನೇಪಾಳ, ಮ್ಯಾನ್ಮಾರ್, ಭೂತಾನ್ ಮತ್ತು ಬಾಂಗ್ಲಾದೇಶಗಳ ಗಡಿಗಳು ಸೇರಿವೆ. ಭಾರತದಲ್ಲಿ ಕರೋನಾ ವೈರಸ್ ಪ್ರಕರಣಗಳು 100 ಕ್ಕೂ ಹೆಚ್ಚು ದಾಟಿದ್ದು ಈ ಕುರಿತಂತೆ ದೇಶದಲ್ಲಿ ಅಂತರರಾಷ್ಟ್ರೀಯ ಗಡಿಗಳನ್ನು ಮುಚ್ಚಲು ಭಾರತ ಸರ್ಕಾರ ಆದೇಶ ನೀಡಿದೆ.

16 03 2020 ಜಮ್ಮು ಕಾಶ್ಮೀರ ರಾಜ್ಯವನ್ನು ಶೀಘ್ರದಲ್ಲೇ ಸ್ಥಾಪಿಸಲಾಗುವುದು : ಅಮಿತ್ ಷಾ




ದಿನಾಂಕ ಮಾರ್ಚ್ 15, 2020 ರಂದು ರಾಜಕೀಯ ನಿಯೋಗದಲ್ಲಿ ಗೃಹ ಸಚಿವ ಅಮಿತ್ ಶಾ ಅವರು ಜಮ್ಮು ಮತ್ತು ಕಾಶ್ಮೀರದ ರಾಜ್ಯತ್ವವನ್ನು ಪುನ ಸ್ಥಾಪಿಸಲಾಗುವುದು ಎಂದು ಘೋಷಿಸಿದ್ದಾರೆ. ರಾಜ್ಯದ ರಾಜ್ಯತ್ವವನ್ನು ಪುನರಾರಂಭಿಸುವಾಗ, ಜನರನ್ನು ಬಂಧನ ಮುಕ್ತ, ಕರ್ಫ್ಯೂ ನಿಷೇದ ಮತ್ತು ಅಂತರ್ಜಾಲ ಸೇವೆಯನ್ನು ಪುನ :ಆರಂಭಿಸಲಾಗುವದು. ಅಲ್ಲದೆ, ಈ ಪ್ರದೇಶದಲ್ಲಿ ಶೀಘ್ರದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಶೀಘ್ರದಲ್ಲೇ ಕೈಗಾರಿಕಾ ನೀತಿಯನ್ನು ರಚಿಸಲಾಗುವುದು ಎಂದು ತಿಳಿಸಿದರು. ಜಮ್ಮು ಕಾಶ್ಮೀರ ರಾಜ್ಯದಲ್ಲಿ ಜಾರಿಯಿಂದ 370 ನೇ ವಿಧಿಯನ್ನು ರದ್ದುಪಡಿಸಿದ ನಂತರ ನಡೆಯುತ್ತಿರುವ ಮೊದಲ ರಾಜಕೀಯ ನಿಯೋಗ ಇದಾಗಿತ್ತು.

# Current affairs of March 2020 from KPSC Vaani

17 03 2020 ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೋಯ್ ರಾಜ್ಯಸಭೆಗೆ ನಾಮನಿರ್ದೇಶನ



ನವದೆಹಲಿ : ಸುಪ್ರೀಂ ಕೋರ್ಟ್ ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿಯವರನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ರಾಜ್ಯಸಭೆಗೆ ನಾಮಕರಣಗೊಳಿಸಿ ಆದೇಶ ಹೊರಡಿಸಿದ್ದಾರೆ. * ಸುಪ್ರೀಂ ಕೋರ್ಟ್ ನ 46ನೇ ಮುಖ್ಯ ನ್ಯಾಯಮೂರ್ತಿಯಾಗಿ ರಂಜನ್ ಗೊಗೋಯ್ ಅವರು 2018 ಅಕ್ಟೋಬರ್ 3 ರಂದು ಅಧಿಕಾರ ಸ್ವೀಕರಿಸಿದ್ದರು. ಹಾಗೂ 2019ರ ನವೆಂಬರ್ 17ರಂದು ನಿವೃತ್ತಿ ಹೊಂದಿದ್ದರು. * ನಿವೃತ್ತ ನ್ಯಾಯಾಧೀಶರೊಬ್ಬರನ್ನು ರಾಷ್ಟ್ರಪತಿಗಳು ರಾಜ್ಯಸಭೆಗೆ ನಾಮನಿರ್ದೇಶನ ಮಾಡುತ್ತಿರುವುದು ಭಾರತದ ಇತಿಹಾಸದಲ್ಲಿ ಇದೇ ಮೊದಲು ಎನ್ನಲಾಗುತ್ತಿದೆ

17 03 2020 ಹಿರಿಯ ಪತ್ರಕರ್ತ, ಸಾಹಿತಿ, ನಾಡೋಜ ಪಾಟೀಲ ಪುಟ್ಟಪ್ಪ ವಿಧಿವಶ



ಹಿರಿಯ ಪತ್ರಕರ್ತ, ಸಾಹಿತಿ, ನಾಡೋಜ ಪಾಟೀಲ ಪುಟ್ಟಪ್ಪ ಅವರು ದಿನಾಂಕ 16 ಮಾರ್ಚ್ 2020 ರಂದು ವಯೋಸಹಜ ಕಾಯಿಲೆಯಿಂದ ನಿಧನರಾಗಿದ್ದಾರೆ. ಅವರಿಗೆ 102 ವರ್ಷ ವಯಸ್ಸಾಗಿತ್ತು.

* 70ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಇವರು ಕನ್ನಡ ನಾಡು ನುಡಿಗೆ ಅಪಾರ ಕೊಡುಗೆ ನೀಡಿದ್ದಾರೆ.
* 1921 ಜನವರಿ 14ರಂದು ಧಾರವಾಡ ಜಿಲ್ಲೆಯ ಹಾವೇರಿ ತಾಲೂಕು ಕುರಬಗೊಂಡದಲ್ಲಿ ಜನನ
* ಪಾಟೀಲ ಪುಟ್ಟಪ್ಪ, 'ಪಾಪು' ಎಂದೇ ಖ್ಯಾತರಾಗಿದ್ದರು.
* ಶತಾಯುಷಿ ಪಾಟೀಲ ಪುಟ್ಟಪ್ಪ ಸ್ವಾತಂತ್ರ್ಯ ಹೋರಾಟಗಾರರಾಗಿ ಪತಿಕ್ರೋದ್ಯಮ, ಸಾಹಿತ್ಯ ರಚನೆ ಮತ್ತು ಕನ್ನಡಪರ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.
* ಎರಡು ಅವಧಿಗೆ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.
* ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ, ಟಿಎಸ್ ಆರ್ ಪತ್ರಿಕಾ ಪ್ರಶಸ್ತಿ, ನಾಡೋಜ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಪಾಟೀಲ ಪುಟ್ಟಪ್ಪ ಅವರು ಭಾಜನರಾಗಿದ್ದರು.

# Current affairs of March 2020 from KPSC Vaani

17 03 2020 ಕೊರೊನಾ ವೈರಸ್ : ಭಾರತ ಬಾಂಗ್ಲಾದೇಶ ನಡುವಿನ ಮೈತ್ರಿ ಬಂಧನ್ ಎಕ್ಸ್ ಪ್ರೆಸ್ ರೈಲು ಸ್ಥಗಿತ



ನವದೆಹಲಿ : ಕೊರೊನಾ ವೈರಸ್ ಸೋಂಕಿನ ಭೀತಿಯಿಂದಾಗಿ ಮುಂಜಾಗ್ರತಾ ಕ್ರಮವಾಗಿ ಭಾರತ ಬಾಂಗ್ಲಾ ದೇಶದ ನಡುವೆ ಸಂಚರಿಸುವ ಮೈತ್ರಿ ಮತ್ತು ಬಂಧನ್ ಎಕ್ಸ್ ಪ್ರೆಸ್ ರೈಲುಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಪೂರ್ವ ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ರೈಲುಗಳು ಭಾರತದಿಂದ ಬಾಂಗ್ಲಾದೇಶದ ರಾಜಧಾನಿಯಾದ ಢಾಕಾದ ನಡುವೆ ಸಂಚರಿಸುತ್ತಿದ್ದ ಮೈತ್ರಿ ಎಕ್ಸ್ ಪ್ರೆಸ್ ಮತ್ತು ಬಂಧನ ಎಕ್ಸ್ ಪ್ರೆಸ್ ರೈಲುಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ.

17 03 2020 ವಾಯು ಮಾಲಿನ್ಯ ತಡೆಗೆ 'ಎಫ್‌ಜಿಡಿ' ತಂತ್ರಜ್ಞಾನಕ್ಕೆ ಮೊರೆ



ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ ಚಿಮಣಿಗಳಿಂದ ಹೊರಸೂಸುವ ಮಾಲಿನ್ಯಕಾರಕ 'ಸಲ್ಫರ್ ಡೈ ಆಕ್ಸೈಡ್ (ಎಸ್‌ಒ2)' ಪ್ರಮಾಣ ಕಡಿಮೆಗೊಳಿಸಲು ರಾಜ್ಯ ಸರ್ಕಾರವು 'ಫ್ಲ್ಯು ಗ್ಯಾಸ್ ಡಿ ಸಲ್ಫರೈಜೇಷನ್ (ಎಫ್‌ಜಿಡಿ)' ತಂತ್ರಜ್ಞಾನದ ಅಳವಡಿಸಲು ಮುಂದಾಗಿದ್ದು ಇದಕ್ಕಾಗಿ ಸುಮಾರು ₹2,510 ಕೋಟಿ ವೆಚ್ಚ ಮಾಡಲಾಗುತ್ತಿದೆ.

ಚಿಮಣಿಗಳಿಂದ ಬಿಡುವ ಹೊಗೆಯನ್ನು ಎಫ್‌ಜಿಡಿ ತಂತ್ರಜ್ಞಾನದ ಮೂಲಕ ಶುದ್ಧೀಕರಣ ಮಾಡುವ ಪ್ರಕ್ರಿಯೆಯನ್ನು ಈಗ ಅಳವಡಿಸಲಾಗುತ್ತಿದೆ. ವಿದ್ಯುತ್ ಸ್ಥಾವರದಲ್ಲಿರುವ ಈಗಿರುವ ಚಿಮಣಿಗಳಿಗೆ ಹೊಂದಿಕೊಂಡು ಎಫ್‌ಜಿಡಿ ತಂತ್ರಜ್ಞಾನದ ಗೋಪುರಗಳು ತಲೆ ಎತ್ತಲಿವೆ. ರಾಯಚೂರು ಮತ್ತು ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರ, ಯರಮರಸ್ ಸೂಪರ್ ಕ್ರಿಟಿಕಲ್ ಶಾಖೋತ್ಪನ್ನ ವಿದ್ಯುತ್ ಸ್ಥಾವರ (ವೈಟಿಪಿಎಸ್) ಗಳಲ್ಲಿ ಇವುಗಳಲ್ಲಿ ಹಂತ ಹಂತವಾಗಿ ಎಫ್‌ಜಿಡಿ ಅಳವಡಿಸಲಾಗುತ್ತಿದೆ.

# Current affairs of March 2020 from KPSC Vaani

## 17 03 2020 ಮೋಟಾರು ವಾಹನಗಳ ಕಾಯ್ದೆ: 5 ತಿಂಗಳಲ್ಲಿ 10% ರಸ್ತೆ ಅಪಘಾತ ಕಡಿಮೆ




ಕೇಂದ್ರ ಸರ್ಕಾರವು ಜಾರಿಗೆ ತಂದ ಮೋಟಾರು ವಾಹನಗಳ ಕಾಯ್ದೆಯಿಂದಾಗಿ ಕಳೆದ 5 ತಿಂಗಳಲ್ಲಿ ರಸ್ತೆ ಅಪಘಾತಗಳಲ್ಲಿ 10% ಇಳಿಕೆ ಕಂಡುಬಂದಿದೆ ಎಂದು ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಮಾರ್ಚ್ 16, 2020 ರಂದು ರಾಜ್ಯಸಭೆಗೆಮಾಹಿತಿನೀಡಿದ್ದಾರೆ.

* 5 ವರ್ಷಗಳಲ್ಲಿ 50% ರಷ್ಟು ಅಪಘಾತಗಳನ್ನು ಕಡಿಮೆ ಮಾಡುವ ಗುರಿಯನ್ನು ಭಾರತ ಹೊಂದಿದೆ ಎಂದು ಇದೆ ಸಮಯದಲ್ಲಿ ಸಚಿವರು ತಿಳಿಸಿದರು.

## 17 03 2020 WHO : ಭಾರತದಲ್ಲಿ ಯುರೇನಿಯಂನಿಂದಾಗಿ ಪ್ರತಿ ಲೀಟರ್‌ಗೆ 30 ಮೈಕ್ರೊ ಗ್ರಾಂ ನಷ್ಟು ಅಂತರ್ಜಲ ಕಲುಷಿತ




ಭಾರತದಲ್ಲಿ ಪ್ರತಿ ಲೀಟರ್ ಅಂತರ್ಜಲ ನೀರಿನಲ್ಲಿ ಸುಮಾರು 30 ಮೈಕ್ರೊ ಗ್ರಾಂ ದರದಷ್ಟು ಯುರೇನಿಯಂ ಸೇರಿಕೊಂಡು ಕಲುಷಿತಗೊಂಡಿದೆ ಎಂದು 2020 ರ ಮಾರ್ಚ್ 16 ರಂದು ಜಲ ಶಕ್ತಿ ಸಚಿವಾಲಯದ ರಾಜ್ಯ ಸಚಿವರಾದ ಶ್ರೀ ರಟ್ಟನ್ ಲಾಲ್ ಕಟಾರಿಯಾ ಸಂಸತ್ತಿನಲ್ಲಿ ಪ್ರಕಟಿಸಿದರು.

* ಕೇಂದ್ರ ಜಲಶಕ್ತಿ ಸಚಿವಾಲಯದ ಪ್ರಕಾರ, ಭಾರತದ ಕೆಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಅಂತರ್ಜಲವು ಯುರೇನಿಯಂನಿಂದ ಕಲುಷಿತಗೊಂಡಿದ್ದು ಪ್ರತಿ ಲೀಟರ್ ನೀರಿಗೆ ಸುಮಾರು 30 ಮೈಕ್ರೋ ಗ್ರಾಂ ಗಿಂತ ಅಧಿಕ ಪ್ರಮಾಣದಲ್ಲಿ ಬೆರೆಕೆಗೊಂಡಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಉಲ್ಲೇಖಿಸಿದೆ.

# Current affairs of March 2020 from KPSC Vaani

## 18 03 2020 ನೌಕಾಪಡೆಯಲ್ಲಿ ಮಹಿಳಾ ಅಧಿಕಾರಿಗಳಿಗೆ ಖಾಯಂ ಆಯೋಗಕ್ಕೆ ಸುಪ್ರೀಂ ಆದೇಶ




ನವದೆಹಲಿ : ಭಾರತೀಯ ನೌಕಾ ಪಡೆಯಲ್ಲಿ ಮಹಿಳಾ ಅಧಿಕಾರಿಗಳಿಗೆ ಖಾಯಂ ಆಯೋಗ ಸ್ಥಾಪಿಸಲು ಸುಪ್ರೀಂ ಕೋರ್ಟ್ ಆದೇಶಿಸಿದೆ. ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠವು ಈ ತೀರ್ಪು ನೀಡಿದ್ದು, ಕೇಂದ್ರ ಸರ್ಕಾರಕ್ಕೆ ಇನ್ನು ಮೂರು ತಿಂಗಳೊಳಗೆ ಆಯೋಗ ರಚಿಸುವ ಸಂಬಂಧ ರೂಪು ರೇಷೆಗಳನ್ನು ಸಿದ್ಧಪಡಿಸಲು ನಿರ್ದೇಶನ ನೀಡಿದೆ.

* ಇತ್ತೀಚೆಗಷ್ಟೇ ಸುಪ್ರೀಂಕೋರ್ಟ್ ಭಾರತೀಯ ಭೂ ಸೇನೆ ಮಹಿಳಾ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಪ್ರತ್ಯೇಕ ಶಾಶ್ವತ ಆಯೋಗ ರಚಿಸಲು ಆದೇಶ ನೀಡಿತ್ತು.
* ಪುರುಷರು ಮತ್ತು ಮಹಿಳಾ ಸಿಬ್ಬಂದಿ ನಡುವೆ ಯಾವುದೇ ಲಿಂಗ ತಾರತಮ್ಯ ಇರಬಾರದು ಎಂದು ಮಹಿಳೆಯರಿಗೆ ಪ್ರತ್ಯೇಕ ಶಾಶ್ವತ ಆಯೋಗ ರಚಿಸುವಂತೆ ತೀರ್ಪು ನೀಡಿದೆ.

## 18 03 2020 ಕರೋನ ವೈರಸ್ : ವಿವಿಧ ದೇಶಗಳ ಪ್ರಯಾಣಿಕರಿಗೆ ಭಾರತ ಪ್ರವೇಶ ನಿಷೇಧ



ನವದೆಹಲಿ : ಕೊರೋನ ವೈರಸ್ ಸೋಂಕು ಭಾರತದಲ್ಲಿ ಹರಡುವಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಭಾರತ ಸರ್ಕಾರವು ವಿವಿಧ ದೇಶಗಳಿಂದ ಆಗಮಿಸುವ ಪ್ರಯಾಣಿಕರಿಗೆ ನಿರ್ಬಂಧ ಹೇರಿ ಆದೇಶ ಹೊರಡಿಸಿದೆ. ಯುರೋಪಿಯನ್ ಯೂನಿಯನ್ (ಇಯು) ದೇಶಗಳು, ಯುರೋಪಿಯನ್ ಮುಕ್ತ ವ್ಯಾಪಾರ ಸಂಘ, ಟರ್ಕಿ ಮತ್ತು ಯುನೈಟೆಡ್ ಕಿಂಗ್ ಡಮ್, ಅಫ್ಘಾನಿಸ್ತಾನ, ಫಿಲಿಪೈನ್ಸ್ ಮತ್ತು ಮಲೇಷ್ಯಾ ನಿಂದ ಬರುವ ಪ್ರಯಾಣಿಕರಿಗೆ ಭಾರತ ಪ್ರವೇಶಿಸುವುದಕ್ಕೆ ಕೇಂದ್ರ ಸರಕಾರ ಸೋಮವಾರ ನಿಷೇಧ ವಿಧಿಸಿದೆ. "ಮಾರ್ಚ್ 18, 2020 ರಿಂದ ಯಾವುದೇ ವಿಮಾನಯಾನ ಸಂಸ್ಥೆಗಳು ಈ ರಾಷ್ಟ್ರಗಳಿಂದ ಪ್ರಯಾಣಿಕರನ್ನು ಭಾರತಕ್ಕೆ ಕರೆ ತರಬಾರದು" ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ತಿಳಿಸಿದೆ.

# Current affairs of March 2020 from KPSC Vaani

## 18 03 2020 ಪ್ರವಾಸಿತಾಣಗಳ ವೀಕ್ಷಣೆಗಾಗಿ ಮೈಸೂರಿನಲ್ಲಿ ಡಬಲ್ ಡೆಕ್ಕರ್ ಬಸ್ ಸಂಚಾರ



ಮೈಸೂರು : ಸಾಂಸ್ಕೃತಿಕ ನಗರಿ ಎಂದೇ ಪ್ರಸಿದ್ಧಿ ಪಡೆದಿರುವ ಮೈಸೂರಿನಲ್ಲಿ ಬರುವ ಏಪ್ರಿಲ್ ಒಂದನೇ ತಾರೀಕಿನಿಂದ ಡಬಲ್ ಡೆಕ್ಕರ್ ಬಸ್ ಸೇವೆಯನ್ನು ಆರಂಭಿಸಲಾಗುವದು, ಬರುವ ದಿನಗಳಲ್ಲಿ ಪ್ರವಾಸಿಗರು ಡಬಲ್ ಡೆಕ್ಕರ್ ಬಸ್‌ನಲ್ಲಿ ಮೈಸೂರಿ ನಗರದ ಪ್ರವಾಸಿತಾಣಗಳನ್ನು ಸಂದರ್ಶಿಸಬಹುದಾಗಿದೆ. ವಿಶ್ವ ಪ್ರಸಿದ್ಧ ಪ್ರವಾಸಿತಾಣಗಳಾದ ಮೈಸೂರು ಹಾಗೂ ಹಂಪಿಯ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಡಬಲ್ ಡೆಕ್ಕರ್ ಬಸ್ ಸೇವೆಯನ್ನು ರಾಜ್ಯ ಸರ್ಕಾರದಿಂದ ಆರಂಭಿಸಲಾಗುತ್ತಿದೆ.

## 18 03 2020 ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 2020 ಕ್ಕೆ ವಿಧಾನಸಭೆ ಒಪ್ಪಿಗೆ 1




ಬೆಂಗಳೂರು : ರಾಜ್ಯ ಲೋಕಾಯುಕ್ತರು ಯಾವುದೇ ಪ್ರಕರಣದ ವಿಚಾರಣೆಯನ್ನು ತಾವು ಮಾಡಲಾಗದ ಸಂದರ್ಭದಲ್ಲಿ ಅಂತಹ ಪ್ರಕರಣವನ್ನು ಉಪಲೋಕಾಯುಕ್ತರಿಗೆ ವರ್ಗಾವಣೆ ಮಾಡುವ ಅಧಿಕಾರ ನೀಡುವ ಉದ್ದೇಶದ ಹೊಂದಿದ "ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 2020"ಕ್ಕೆ ವಿಧಾನಸಭೆಯಲ್ಲಿ ದಿನಾಂಕ 17 ಮಾರ್ಚ್ 2020 ರಂದು ಒಪ್ಪಿಗೆ ನೀಡಿತು.

* ಮುಖ್ಯಮಂತ್ರಿಗಳ ಬಿ.ಎಸ್.ಯಡಿಯೂರಪ್ಪ ಅವರ ಪರವಾಗಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಮಂಡಿಸಿದ ಈ ವಿಧೇಯಕಕ್ಕೆ ಸದನ ಧ್ವನಿ ಮತದ ಅಂಗೀಕಾರ ದೊರೆಯಿತು.

# Current affairs of March 2020 from KPSC Vaani

18 03 2020 ತಪಾಸಣೆ ಸಾಮರ್ಥ್ಯ ಹೆಚ್ಚಿಸಲು ಎಲ್ಲ ದೇಶಗಳಿಗೆ ವಿಶ್ವ ಆರೋಗ್ಯ ಸಂಸ್ಥೆಯಿಂದ ಕರೆ



ಝೂರಿಕ್ (ಸ್ವಿಟ್ಸರ್‌ಲ್ಯಾಂಡ್): ಇಡೀ ವಿಶ್ವವನ್ನೇ ಮಾರಕವಾಗಿ ಕಾಡುತ್ತಿರುವ ಕೊರೋನವೈರಸ್ ಸೋಂಕು ತಡೆಗಟ್ಟಲು ಎಲ್ಲ ದೇಶಗಳು ತಪಾಸಣೆ ಸಾಮರ್ಥ್ಯವನ್ನು ಹೆಚ್ಚಿಸುವಂತೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಸೋಮವಾರ(16 ಮಾರ್ಚ್ 2020)ರಂದು ಎಲ್ಲ ದೇಶಗಳಿಗೆ ಆದೇಶಿಸಿದೆ. ಇದರಿಂದಾಗಿ ಈ ರೋಗದ ಸೋಂಕು ಹರಡುವುವಿಕೆಯನ್ನು ಆದಷ್ಟು ಕಡಿಮೆ ಮಾಡುವ ಅತ್ಯುತ್ತಮ ಮಾರ್ಗ ಇದಾಗಿದೆ ಎಂದು ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕ ಟೆಡ್ರಾಸ್ ಅದನಾಮ್ ಗೇಬ್ರಿಯೇಸಸ್ ಜಿನೀವದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಕರೆ ನೀಡಿದ್ದಾರೆ.

18 03 2020 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಜಾಲತಾಣದಲ್ಲಿ ವಿಶೇಷ ಕಾಯಿಲೆಗಳ ರಾಷ್ಟ್ರೀಯ ಕರಡು ನೀತಿ ಪ್ರಕಟ



ನವದೆಹಲಿ: ದಿನಾಂಕ ಮಾರ್ಚ್ 17, 2020 ರಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಜಾಲತಾಣದಲ್ಲಿ ವಿಶೇಷ ಕಾಯಿಲೆಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಕರಡು ನೀತಿಯನ್ನು ಪ್ರಕಟಿಸಲಾಗಿದೆ. ಈ ಕರಡನ್ನು ಸಾರ್ವಜನಿಕರು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಅಭಿಪ್ರಾಯಗಳಿಗಾಗಿ ಮುಕ್ತವಾಗಿಸಿದೆ. ವಿಶೇಷ ಕಾಯಿಲೆಗಳಿಂದ ಬಳಲುತ್ತಿರುವ ಮತ್ತು ಬಡತನ ರೇಖೆಯ ಕೆಳಗೆ ವಾಸಿಸುವ ಕುಟುಂಬಗಳಿಗೆ ಚಿಕಿತ್ಸೆಗಾಗಿ ಒಂದು ಬಾರಿಗೆ ಸಚಿವಾಲಯವು 15 ಲಕ್ಷ ರೂ ಸಹಾಯಧನವನ್ನು ರಾಷ್ಟ್ರೀಯ ಆರೋಗ್ಯ ನಿಧಿಯಿಂದ ನೀಡಲಾಗುವುದೆಂದು ಪ್ರಕಟಿಸಲಾಗಿದೆ.

# Current affairs of March 2020 from KPSC Vaani

## 18 03 2020 ನೇಪಾಳದ ಶಾಲೆಗಳ ನಿರ್ಮಾಣಕ್ಕಾಗಿ ಭಾರತದಿಂದ 107.01 ಮಿಲಿಯನ್ ನೇಪಾಳಿ ರೂಪಾಯಿ



ಭಾರತವು ನೇಪಾಳದಲ್ಲಿ ಹೊಸ ಶಾಲೆಗಳ ನಿರ್ಮಾಣಕ್ಕಾಗಿ ಸುಮಾರು 107.01 ಮಿಲಿಯನ್ ನೇಪಾಳಿ ರೂಪಾಯಿಗಳನ್ನು ನೀಡುವ ಒಪ್ಪಂದದಡಿ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿತು. ಈ ಒಪ್ಪಂದದ ಅನುಸಾರ ಮೊದಲ ಹಂತವಾಗಿ ಭಾರತವು 8 ಲಕ್ಷ ರೂಪಾಯಿಗಳ (INR) ಚೆಕ್ ಅನ್ನು ನೇಪಾಳಕ್ಕೆ ಹಸ್ತಾಂತರಿಸಿತು. ನೇಪಾಳದಲ್ಲಿ ಶಾಲೆಗಳನ್ನು ನಿರ್ಮಿಸುವ ಒಪ್ಪಂದದಿಂದ ಭಾರತ ನೇಪಾಳ ರಾಷ್ಟ್ರಗಳ ಅಭಿವೃದ್ಧಿ ಸಹಭಾಗಿತ್ವ ನಿರ್ಮಾಣಕ್ಕೆ ಸಹಕಾರಿಯಾಗಲಿದೆ.

## 19 03 2020 ಆಯುಷ್ಮಾನ್ ಭಾರತ್ ಯೋಜನೆಯು COVID 19 ವಿರುದ್ಧ ಹೋರಾಡಲು ಸಹಾಯ ಮಾಡಲಿದೆ




ಕರೋನಾ ವೈರಸ್ ವಿರುದ್ಧ ಹೋರಾಡಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಆಯುಷ್ಮಾನ್ ಭಾರತ್ ಅಥವಾ ಪ್ರಧಾನ್ ಮಂತ್ರಿ ಜನ ಆರೋಗ್ಯ ಯೋಜನೆಯನ್ನು ಸೇರಿಸಿದೆ. ಇದುವರೆಗೆ ಭಾರತವು 168 ಕರೋನಾ ವೈರಸ್ ಪ್ರಕರಣಗಳನ್ನು ದೃಢಪಟ್ಟಿದೆ. ಈ ಪೈಕಿ ಭಾರತವು 14 ಜನರನ್ನು ಗುಣಪಡಿಸಿದೆ

# Current affairs of March 2020 from KPSC Vaani

19 03 2020 ಮಾರ್ಚ್ 18: ಆರ್ಡನೆನ್ಸ್ ಕಾರ್ಖಾನೆ ದಿನ




ದಿನಾಂಕ ಮಾರ್ಚ್ 18, 2020 ರಂದು 219 ನೇ ಆರ್ಡ್‌ನೆನ್ಸ್ ಫ್ಯಾಕ್ಟರೀಸ್ ಫೌಂಡೇಶನ್(ಆರ್ಡ್‌ನೆನ್ಸ್ ಕಾರ್ಖಾನೆ ಸಂಸ್ಥಾಪನಾ ದಿನ) ದಿನವನ್ನು ಆಚರಿಸಲಾಯಿತು. ಪ್ರತಿ ವರ್ಷ ಭಾರತದಲ್ಲಿ ಮಾರ್ಚ್ 18 ಅನ್ನು ಆರ್ಡನೆನ್ಸ್ ಫ್ಯಾಕ್ಟರಿ ದಿನವಾಗಿ ಆಚರಿಸುತ್ತದೆ. ಮೊದಲ ಆರ್ಡ್‌ನೆನ್ಸ್ ಫ್ಯಾಕ್ಟರಿಯನ್ನು 1801 ರಲ್ಲಿ ಕೋಲ್ಕತ್ತಾದಲ್ಲಿ ಸ್ಥಾಪಿಸಲಾಯಿತು. ದೇಶದಲ್ಲಿ 41ಆರ್ಡನೆನ್ಸ್ ಕಾರ್ಖಾನೆಗಳಿವೆ.

19 03 2020 ಕೊರೊನಾವೈರಸ್ ಎಫೆಕ್ಟ್: 3 ಪ್ರಮುಖ ಯೋಜನಾ ನೀತಿಗಳನ್ನು ಕೈ ಬಿಟ್ಟ ಭಾರತ



ಭಾರತದಲ್ಲಿ ಕೊರೊನಾವೈರಸ್‌ನಿಂದಾಗಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ಭಾರತ ಮೂರು ಪ್ರಮುಖ ಯೋಜನಾ ನೀತಿಗಳನ್ನು ಕೈ ಬಿಟ್ಟಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ.

* ಸಸ್ಯಜನ್ಯ ಎಣ್ಣೆಗಳ(ವೆಜಿಟೇಬಲ್ ಆಯಿಲ್) ಮೇಲಿನ ಆಮದು ತೆರಿಗೆಯನ್ನು ಕಡಿಮೆ ಮಾಡುವುದು.
* ವಿಟಮಿನ್ ಬಲವರ್ಧಿತ ಅಕ್ಕಿ ನೀಡಲು ಆಹಾರ ಸಚಿವಾಲಯವು ಪ್ರಸ್ತಾಪಿಸಿರುವ ಮತ್ತೊಂದು ಯೋಜನೆ ಸೇರಿ ಒಟ್ಟು 3 ಯೋಜನೆಗಳನ್ನು ಕೇಂದ್ರ ಸರ್ಕಾರ ಕೈಬಿಟ್ಟಿದೆ ಇದರ ಜೊತೆಗೆ ಇನ್ನೂ ಹಲವಾರು ಪ್ರಮುಖ ನೀತಿಗಳು ಮತ್ತು ಯೋಜನೆಗಳನ್ನು ನಿಧಾನಗೊಳಿಸುವ ಸಾಧ್ಯತೆಯಿರುವುದಾಗಿ ತಿಳಿದು ಬಂದಿದೆ.

# Current affairs of March 2020 from KPSC Vaani

19 03 2020 ಕೊರೊನಾವೈರಸ್:ಸೌದಿರಾಜಕುಮಾರ,ಪ್ರಧಾನಿಮೋದಿ ಮಾತುಕತೆ




ನವದೆಹಲಿ : ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ(17 ಮಾರ್ಚ್ 2020) ಸೌದಿ ಅರೇಬಿಯಾದ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರೊಂದಿಗೆ ದೂರವಾಣಿ ಮೂಲಕ ಸಂಭಾಷಣೆ ನಡೆಸಿದ್ದು, ಜಾಗತಿಕವಾಗಿ ಹರಡಿರುವ ಕೊರೊನಾ ವೈರಸ್ ನಿಂದ ಉಂಟಾಗಿರುವ ಸವಾಲನ್ನು ಜೊತೆಯಾಗಿ ಎದುರಿಸಲು ತೆಗೆದುಕೊಳ್ಳಬೇಕಾದ ಪ್ರಯತ್ನಗಳ ಕುರಿತು ಸಂಭಾಷಣೆ ನಡೆಸಿದ್ದಾರೆ.

* ನರೇಂದ್ರ ಮೋದಿ ಕರೋನ ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಕುರಿತು ಸಾರ್ಕ್ ರಾಷ್ಟ್ರಗಳ ನಾಯಕರ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಚರ್ಚಿಸಿದ್ದರು.

19 03 2020 ಅದ್ನಾನ್ ಝುರ್ಫಿ ಇರಾಕ್‌ನ ನೂತನ ಪ್ರಧಾನಿಯಾಗಿ ಆಯ್ಕೆ



ಬಗ್ದಾದ್ : ಇರಾಕ್ ದೇಶದ ಅಧ್ಯಕ್ಷರು ಮಂಗಳವಾರ ನಜಾಫ್ ನಗರದ ಮಾಜಿ ಗವರ್ನರ್ ಅದ್ನಾನ್ ಝುರ್ಫಿಯನ್ನು ದೇಶದ ನೂತನ ಪ್ರಧಾನಿಯಾಗಿ ನೇಮಿಸಿದ್ದಾರೆ. ಈ ಮೂಲಕ ಅದ್ನಾನ್ ಝುರ್ಫಿ ಅವರಿಗೆ ಸೇನಾ ಅಶಾಂತಿ, ಬೀದಿ ಪ್ರತಿಭಟನೆಗಳು ಮತ್ತು ಕೊರೋನವೈರಸ್ ಸಾಂಕ್ರಾಮಿಕದಿಂದ ಬಸವಳಿದಿರುವ ದೇಶವನ್ನು ಮುನ್ನಡೆಸುವ ಜವಾಬ್ದಾರಿ ಪಡೆದರು.

* ಇರಾಕ್‌ನ ನಿರ್ಗಮನ ಪ್ರಧಾನಿ ಆದಿಲ್ ಅಬ್ದುಲ್ ಮಹದಿ ಡಿಸೆಂಬರ್‌ನಲ್ಲಿ ರಾಜೀನಾಮೆ ನೀಡಿದ್ದರು.

# Current affairs of March 2020 from KPSC Vaani

20 03 2020 ಕಡಿಮೆ ತೂಕದ ಮೆಷಿನ್ ಗನ್‌ಗಳ ಖರೀದಿಗೆ ಇಸ್ರೇಲ್ ಸಂಸ್ಥೆಯೊಂದಿಗೆ ಕೇಂದ್ರ ಸರ್ಕಾರ ಸಹಿ




ನವದೆಹಲಿ : ಭಾರತೀಯ ಸಶಸ್ತ್ರ ಪಡೆಗಳಿಗಾಗಿ ಕಡಿಮೆ ತೂಕದ ಆಧುನಿಕ ಅತ್ಯಾಧುನಿಕ ಮೆಷಿನ್ ಗನ್‌ಗಳನ್ನು ಪೂರೈಸಲು ಭಾರತ ಸರ್ಕಾರವು ಇಸ್ರೇಲ್ ವೆಪನ್ಸ್ ಇಂಡಸ್ಟ್ರೀಸ್‌ನೊಂದಿಗೆ ಬಂಡವಾಳ ಸ್ವಾಧೀನ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಒಪ್ಪಂದ ಪ್ರಕಾರ ಸುಮಾರು 880 ಕೋಟಿ ರೂ.ಗಳ ವೆಚ್ಚದಲ್ಲಿ 16,479 ಹಗುರ ಮೆಷಿನ್ ಗನ್‌ಗಳನ್ನು (ಎಲ್‌ಎಂಜಿ) ಖರೀದಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

20 03 2020 ಕೊರೊನಾ ವಿರುದ್ಧ ಹೋರಾಟ; ಜನತಾ ಕರ್ಫ್ಯೂಗೆ ಪ್ರಧಾನಿ ಮೋದಿ ಕರೆ



ನವದೆಹಲಿ : ದೇಶದಲ್ಲಿ ವ್ಯಾಪಾಕವಾಗಿ ಹರಡುತ್ತಾ ಜನರಲ್ಲಿ ತೀವ್ರ ಆತಂಕ ಹುಟ್ಟಿಸಿರುವ ಕೊರೊನಾ ವೈರಸ್ ಸೋಂಕು ಹರಡದಂತೆ ಭಾರತೀಯರು ಸಂಯಮ ಹಾಗೂ ಸಂಕಲ್ಪ ಹೊಂದಬೇಕು ಎಂದು ಮೋದಿಯವರು ಗುರುವಾರ ತಿಳಿಸಿದರು. ಇದರೊಟ್ಟಿಗೆ ಹಲವು ಮುಂಜಾಗ್ರತಾ ಸೂಚನೆಗಳನ್ನು ಪಾಲಿಸುವಂತೆ ಜನರಲ್ಲಿ ಮನವಿ ಮಾಡಿದರು. ಅಲ್ಲದೇ ಪ್ರಮುಖವಾಗಿ ಕೊರೊನಾ ವಿರುದ್ಧ ಹೋರಾಟದ ರೂಪವಾಗಿ ಮಾರ್ಚ್ 22 ರಂದು ಬೆಳಿಗ್ಗೆ 8 ರಿಂದ ರಾತ್ರಿ 9 ರವರೆಗೆ ಜನತಾ ಕರ್ಫ್ಯೂ ಆಚರಿಸುವಂತೆ ಜನರಿಗೆ ಕರೆ ನೀಡಿದ್ದಾರೆ. ಜನರು ಭಯಪಡುವ ಅಗತ್ಯವಿಲ್ಲ ಸರ್ಕಾರ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುವುದಾಗಿ ಅಭಯ ನೀಡಿದ್ದಾರೆ.

# Current affairs of March 2020 from KPSC Vaani

## 20 03 2020 ಕರ್ನಾಟಕದಲ್ಲಿ ಕೊರೊನಾ ವೈರಸ್ ಸೋಂಕಿನ ಮಾಹಿತಿಗಾಗಿ ನೂತನ ಸಹಾಯವಾಣಿ



ಬೆಂಗಳೂರು : ಕರೋನ ವೈರಸ್ ಹರಡುವಿಕೆಯನ್ನು ತಡೆಗಟ್ಟಲು ಮತ್ತು ಜನರ ಆತಂಕ ಹಾಗೂ ಮಾಹಿತಿಗಾಗಿ ಕರ್ನಾಟಕ ಆರೋಗ್ಯ ಇಲಾಖೆಯು ನೂತನ ಸಹಾಯವಾಣಿಯನ್ನು ಆರಂಭಿಸಿದೆ. ನೂತನ ಆರಂಭಿಸಿರುವ ಸಹಾಯವಾಣಿ ಕುರಿತು ಬಿಬಿಎಂಪಿ ಆಯುಕ್ತರಾದ ಬಿ.ಎಚ್. ಅನಿಲ್ ಕುಮಾರ್ ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ. ಕೊರೊನಾ ಬಗ್ಗೆ ಯಾವುದೇ ಮಾಹಿತಿ ಬೇಕಿದ್ದರೂ 080 46848600ಕ್ಕೆ ಕರೆ ಮಾಡಿ ಅಥವಾ ರಾಷ್ಟ್ರೀಯ ಸಹಾಯವಾಣಿ 1075 ರಾಜ್ಯ ಸಹಾಯವಾಣಿ 104 ಕ್ಕೆ ಕರೆ ಮಾಡಿ ಮಾಹಿತಿ ಪಡಯಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## 20 03 2020 ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಶಿಲಾಯುಗದ ಸ್ಮಾರಕಕಗಳ ಕುರುಹು ಪತ್ತೆ



ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ ಮತ್ತು ಭದ್ರಾವತಿ ತಾಲ್ಲೂಕಿನ ಅರಣ್ಯ ಭೂಮಿಯಲ್ಲಿ ಕ್ರಿ.ಪೂ 1,200 ರಿಂದ 1,000ರ ನಡುವೆ ನೆಲೆಸಿತ್ತು ಎನ್ನಲಾದ ಶ್ರೀಮಂತ ಶಿಲಾಯುಗದ ಕುರುಹುಗಳು ಇತ್ತೀಚಿನ ಉತ್ಖನನಗಳು ತಿಳಿದುಬಂದಿದೆ.

* ಭದ್ರಾವತಿ ತಾಲ್ಲೂಕಿನಲ್ಲಿ ಅರಣ್ಯ ಭೂಮಿಯ ಗಡಿಯ ಬೇಲಿಯೊಂದರಲ್ಲಿ ಇಂತಹ ಪುರಾತನ ಶಿಲೆಯು ಕಂಡುಬಂದಿದೆ.

# Current affairs of March 2020 from KPSC Vaani

## 20 03 2020 ಕೋವಿಡ್ 19ನಿಂದಜಗತ್ತಿನಾದ್ಯಂತ2.5ಕೋಟಿ ಉದ್ಯೋಗನಷ್ಟಸಾಧ್ಯತೆ:ವಿಶ್ವಸಂಸ್ಥೆ



ವಿಶ್ವಸಂಸ್ಥೆ: ಜಾಗತಿಕವಾಗಿ ವ್ಯಾಪಿಸುತ್ತಿರುವ ಕೊರೊನಾ ವೈರಸ್ ಸಾಂಕ್ರಾಮಿಕದಿಂದಾಗಿ ಜಗತ್ತಿನಾದ್ಯಂತ ಸುಮಾರು 2.5 ಕೋಟಿ ಉದ್ಯೋಗಗಳು ನಷ್ಟವಾಗಬಹುದೆಂದು ವಿಶ್ವಸಂಸ್ಥೆ ತಿಳಿಸಿದೆ. ಉದ್ಯೋಗ ಸಂಸ್ಥೆಗಳಲ್ಲಿ ಉದ್ಯೋಗಿಗಳ ರಕ್ಷಣೆ, ಉದ್ಯೋಗ ಹೆಚ್ಚಿಸುವದು ಹಾಗೂಕೆಲಸಆದಾಯಗಳಿಗೆಬೆಂಬಲಿಸುವಹಲವುಕ್ರಮಗಳಿಂದ ನಿರುದ್ಯೋಗತಪ್ಪಿಸಬಹುದುಎಂದುಸಲಹೆ ನೀಡಿದೆ.

## 20 03 2020 ಅಟಲ್ಮಿಷನ್:ಕೇಂದ್ರದಿಂದ7ರಾಜ್ಯಗಳಿಗೆ6,000 ಕೋಟಿರೂ.ಮಂಜೂರು

ನವದೆಹಲಿ : ಭಾರತದಲ್ಲಿ ಸರಾಸರಿ ವಾರ್ಷಿಕ ಶೇ. 20 ರ ಪ್ರಮಾಣದಲ್ಲಿ ಅಂತರ್ಜಲ ಶೀಘ್ರವಾಗಿ ಕ್ಷೀಣಿಸುತ್ತಿರುವವುದನ್ನು ಮನಗಂಡು ಕೇಂದ್ರ ಸರ್ಕಾರವು ಅಂತರ್ಜಲ ಸಂಪನ್ಮೂಲಗಳ ನಿರ್ವಹಣೆಗಾಗಿ ಅಟಲ್ ಮಿಷನ್ ಯೋಜನೆ ಅಡಿ ಸುಮಾರು 6,000 ಕೋಟಿ ರೂ. ಬಿಡುಗಡೆಗೊಳಿಸಿದ್ದಾಗಿ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಲೋಕಸಭೆಗೆ ತಿಳಿಸಿದ್ದಾರೆ. ಭಾರತದ ರಾಜ್ಯಗಳಾದ ಗುಜರಾತ್, ಹರಿಯಾಣ, ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಉತ್ತರ ಪ್ರದೇಶ ರಾಜ್ಯಗಳ ಒಟ್ಟು 78 ಜಿಲ್ಲೆಗಳಲ್ಲಿ ಸದ್ಯ ಅಟಲ್ ಜಲ ಮಿಷನ್ ಜಾರಿಗೊಳಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

# Current affairs of March 2020 from KPSC Vaani

20 03 2020 ಭಾರತಸರ್ಕಾರದಿಂದರಾಷ್ಟ್ರೀಯತಾಂತ್ರಿಕಜವಳಿಮಿಷನ್‌ಗೆ 1,480ಕೋಟಿ ರೂ



ಕೇಂದ್ರ ಜವಳಿ ಸಚಿವೆ ಶ್ರೀಮತಿ ಸ್ಮೃತಿ ಇರಾನಿ ಅವರು ರಾಜ್ಯಸಭೆಯಲ್ಲಿ ರಾಷ್ಟ್ರೀಯ ತಾಂತ್ರಿಕ ಜವಳಿ ಮಿಷನ್ ಗಾಗಿ ಭಾರತ ಸರ್ಕಾರವು ಸುಮಾರು 1,480 ಕೋಟಿ ರೂ ಅನುದಾನ ನೀಡಿರುವುದಾಗಿ ತಿಳಿಸಿದರು. ಈ ಯೋಜನೆಯು ಭಾರತದಲ್ಲಿ ತಾಂತ್ರಿಕ ಜವಳಿಗಳನ್ನು ಸುಧಾರಿಸುವ ಉದ್ದೇಶವನ್ನು ಹೊಂದಿದೆ.

21 03 2020 ಕೇಂದ್ರೀಯ ಸಂಸ್ಕೃತ ವಿವಿಗಳ ಮಸೂದೆಗೆ ಸಂಸತ್ನಲ್ಲಿ ಅಂಗೀಕಾರ



ನವದೆಹಲಿ : ದೇಶದಲ್ಲಿರುವ ಒಟ್ಟು 03 ಡೀಮ್ಡ್ ಸಂಸ್ಕೃತ ವಿಶ್ವ ವಿದ್ಯಾಲಯಗಳನ್ನು ಕೇಂದ್ರೀಯ ವಿಶ್ವವಿದ್ಯಾಲಯಗಳಾಗಿ ಮೇಲ್ದರ್ಜೆಗೇರಿಸುವ "ಕೇಂದ್ರೀಯ ಸಂಸ್ಕೃತ ವಿವಿಗಳ ಮಸೂದೆ"ಯನ್ನು ಶುಕ್ರವಾರ ಸಂಸತ್ತು ಅಂಗೀಕರಿಸಿದೆ. ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ಶ್ರೀ ಲಾಲಬಹಾದೂರ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ ಮತ್ತು ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ ಈ ಮೂರು ಸಂಸ್ಕೃತ ವಿಶ್ವವಿದ್ಯಾಲಯಗಳನ್ನು ಇನ್ನು ಕೇಂದ್ರೀಯ ವಿಶ್ವವಿದ್ಯಾಲಯಗಳಾಗಿ ಮೇಲ್ದರ್ಜೆಗೇರಲಿವೆ.

# Current affairs of March 2020 from KPSC Vaani

21 03 2020 ಕರೋನ ವೈರಸ್ : ಜಿ7ಶೃಂಗಸಭೆ ರದ್ದುಪಡಿಸಿದ ಟ್ರಂಪ್




ವಾಶಿಂಗ್ಟನ್ : ಇಡೀ ಜಗತ್ತನ್ನೇ ನಿದ್ದೆಗೆಡಿಸಿರುವ ಕೊರೋನವೈರಸ್ ಸಾಂಕ್ರಾಮಿಕ ರೋಗದಿಂದಾಗಿ, ಈ ವರ್ಷ ವಾಶಿಂಗ್ಟನ್ ಸಮೀಪದ ಕ್ಯಾಂಪ್ ಡೇವಿಡ್‌ನಲ್ಲಿ ನಡೆಸಲು ಉದ್ದೇಶಿಸಲಾಗಿದ್ದ 2020 ರ ಜಿ7 ಶೃಂಗಸಭೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರದ್ದುಪಡಿಸಿ ಅದರ ಬದಲಿಗೆ ಜಿ7 ನಾಯಕರು ಮತ್ತು ಅಧಿಕಾರಿಗಳೊಂದಿಗೆ ವೀಡಿಯೊ ಕಾನ್ಫರೆನ್ಸ್ ಮೂಲಕ ಶೃಂಗಸಭೆ ನಡೆಸಲು ಉದ್ದೇಶಿಸಲಾಗಿದೆ ಎಂದು ಶ್ವೇತಭವನ ಪ್ರಕಟಿಸಿದೆ. ಜಿ7 ರಾಷ್ಟ್ರಗಳು: ಜಗತ್ತಿನ ಏಳು ಶ್ರೀಮಂತ ಪ್ರಜಾಪ್ರಭುತ್ವ ಹೊಂದಿರುವ ದೇಶಗಳ ಗುಂಪು

21 03 2020 ನರೇಂದ್ರ ಮೋದಿರ 'ಜನತಾ ಕರ್ಫ್ಯೂ' ಮೆಚ್ಚಿಕೊಂಡ ವಿಶ್ವ ಆರೋಗ್ಯ ಸಂಸ್ಥೆ



ನವದೆಹಲಿ : ಪ್ರಧಾನಿ ನರೇಂದ್ರ ಮೋದಿಯವರು ಕರೋನ ವೈರಸ್ ವಿರುದ್ಧ ಹೋರಾಡಲು ಭಾನುವಾರ 'ಜನತಾ ಕರ್ಫ್ಯೂ' ಆಚರಿಸುವಂತೆ ದಿನಾಂಕ 19 ಮಾರ್ಚ್ 2020 ರಂದು ಭಾರತಿಯಲ್ಲಿ ಮನವಿ ಮಾಡಿದ್ದಾರೆ, ಮೋದಿಯವರ ಈ ಯೋಜನೆಯನ್ನು ವಿಶ್ವ ಸಂಸ್ಥೆ ಪ್ರಶಂಸಿದೆ, ಹಾಗೂ ಕರೋನ ವೈರಸ್ ಹರಡದಂತೆ ತಡೆಗಟ್ಟಲು ಇದೊಂದು ಒಳ್ಳೆಯ ಯೋಜನೆಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಲ್ಲದೆ ಭಾರತದ ಪ್ರಧಾನಿ ಮೋದಿ ಜನತಾ ಕರ್ಫ್ಯೂ ಜಾರಿಗೊಳಿಸಿರುವುದನ್ನು ನಾವು ಸ್ವಾಗತಿಸುತ್ತೇವೆ.

ಏನಿದು ಜನತಾ ಕರ್ಫ್ಯೂ ?
ಮೋದಿ ಗುರುವಾರ ದೇಶವನ್ನು ಉದ್ದೇಶಿಸಿದ ಮಾತನಾಡಿದ್ದು 'ಜನತಾ ಕರ್ಫ್ಯೂ' ಕರೆ ನೀಡಿದ್ದಾರೆ. ಇದು ಸರ್ಕಾರ ಜಾರಿಮಾಡಿರುವ ಕರ್ಫ್ಯೂ ಆಗಿರದೆ ಜನರು ತಮ್ಮಷ್ಟಕ್ಕೆ ತಾವೇ ವಿಧಿಸಿಕೊಳ್ಳುವ ಕರ್ಫ್ಯೂ ಆಗಿರುತ್ತದೆ, ಈ ದಿನ ಭಾರತೀಯರು ಬೆಳಿಗ್ಗೆ 07ಗಂಟೆಯಿಂದ ರಾತ್ರಿ 9ಗಂಟೆಯವರೆಗೆ ಇದನ್ನು ಸ್ವಯಂ ಆಚರಿಸಲು ಸೂಚಿಸಲಾಗಿದೆ.

# Current affairs of March 2020 from KPSC Vaani

## 21 03 2020 ಗ್ರೀಸ್ ನಿಂದ ಒಲಿಂಪಿಕ್ಸ್ ಜ್ಯೋತಿ ಪಡೆದಜಪಾನ್




ಅಥೆನ್ಸ್ : ಕೊರೊನಾ ವೈರಸ್ ಭೀತಿಯಿಂದಾಗಿ ಈಗಾಗಲೇ ಅದೆಷ್ಟೋ ಕ್ರೀಡಾಕೂಟಗಳನ್ನು ರದ್ದುಪಡಿಸಲಾಗಿದೆ ಮತ್ತು ಕೆಲವನ್ನು ಮುಂದೂಡಲಾಗಿದೆ. ಇದೆಲ್ಲದರ ನಡುವೆ ಜಪಾನ್ ನಿಗದಿತ ಸಮಯಕ್ಕೆ ಒಲಿಂಪಿಕ್ಸ್ ಕ್ರೀಡಾಕೂಟವನ್ನು ನಡೆಸುವದಾಗಿ ಹೇಳುತ್ತಲೆ ಬಂದಿದೆ. ಅಲ್ಲದೆ ಗ್ರೀಸ್ ನಲ್ಲಿ ಗುರುವಾರ ಟೋಕಿಯೊ ಒಲಿಂಪಿಕ್ಸ್ ಸಮಿತಿಗೆ ಟಾರ್ಚ್(ಕ್ರೀಡಾ ಜ್ಯೋತಿ) ನೀಡಲಾಗಿದೆ. ಈ ಕ್ರೀಡಾ ಜ್ಯೋತಿಯನ್ನು ಒಲಿಂಪಿಕ್ ಧ್ರುವ ವಾಲ್ಟ್ ಚಾಂಪಿಯನ್ ಕತ್ರಿನಾ ಸ್ಟೆಫಾನಿಡಿ ಅವರು ಪಂಥನಾಸಿಕ್ ಕ್ರೀಡಾಂಗಣದೊಳಗೆ ಬೆಳಗಿಸಿದರು.

## 21 03 2020 ಮಾರ್ಚ್ 22 ರಿಂದ ಯಾವುದೇ ಅಂತಾರಾಷ್ಟ್ರೀಯ ವಿಮಾನಗಳಿಗೆ ಭಾರತ ಪ್ರವೇಶ ನಿಷೇದ




ನವದೆಹಲಿ : ಭಾರತದಲ್ಲಿ ಕೊರೋನಾ ಸೋಂಕಿತರ ಸಂಖ್ಯೆ ನಿಯಂತ್ರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ವಿದೇಶಗಳಿಂದ ಆಗಮಿಸುವ ವಿಮಾನಗಳಿಗೆ ಭಾರತದ ಪ್ರವೇಶವನ್ನು ನಿಷೇಧ ಹೇರಲು ನಿರ್ಧರಿಸಲಾಗಿದೆ. ಇದೆ ಮಾರ್ಚ್ 22ರಿಂದ ಈ ನಿಯಮ ಜಾರಿಗೆ ಬರಲಿದೆ.

# Current affairs of March 2020 from KPSC Vaani

21 03 2020 ಮಧ್ಯಪ್ರದೇಶ ರಾಜಕೀಯ ಬಿಕ್ಕಟ್ಟು: ಮುಖ್ಯಮಂತ್ರಿ ಸ್ಥಾನಕ್ಕೆ ಕಮಲ್ ನಾಥ್ ರಾಜೀನಾಮೆ



ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷದಿಂದ ಬಂಡಾಯ ಎದ್ದು 22 ಶಾಸಕರು ರಾಜೀನಾಮೆ ನೀಡಿದ್ದರಿಂದ ರಾಜ್ಯಪಾಲರು ಬಹುಮತ ಸಾಬೀತುಪಡಿಸುವಂತೆ ಮುಂಖ್ಯಮಂತ್ರಿ ಕಮಲನಾಥ್ ಸರ್ಕಾರಕ್ಕೆ ಸೂಚಿಸಿದ್ದರು. ಬಹುಮತ ಸಾಬೀತುಪಡಿಸುವ ಮುನ್ನವೇ ಮುಖ್ಯಮಂತ್ರಿ ಸ್ಥಾನಕ್ಕೆ ಕಮಲನಾಥ್ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

21 03 2020 ಚಿಕ್ಕಮಗಳೂರಿಗೆ ಮೆಡಿಕಲ್ ಕಾಲೇಜು ಸ್ಥಾಪನೆಗೆ ಅನುಮತಿ ನೀಡಿದ ಕೇಂದ್ರ




ಚಿಕ್ಕಮಗಳೂರು ಜಿಲ್ಲಾ ಕೇಂದ್ರದಲ್ಲಿ ಮೆಡಿಕಲ್ ಕಾಲೇಜು ಆರಂಭಿಸಲು ಇದ್ದ ಹಲವು ದಿನಗಳ ಬೇಡಿಕೆಗೆ ಕೊನೆಗೂ ಕೇಂದ್ರ ಸರ್ಕಾರ ಸಮ್ಮತಿ ನೀಡಿದೆ. ಅಲ್ಲದೆ ಕೇಂದ್ರ ಆರೋಗ್ಯ ಸಚಿವರು ವೈದ್ಯಕೀಯ ಕಾಲೇಜಿಗೆ ಮಂಜೂರಾತಿಯನ್ನು ನೀಡಿದ ಪತ್ರವನ್ನು ಸಂಸದೆ ಶೋಭಾ ಕರಂದ್ಲಾಜೆ ಅವರಿಗೆ ಹಸ್ತಾಂತರಿಸಿದರು.

# Current affairs of March 2020 from KPSC Vaani


21 03 2020 ಭಾರತದ ಹಿರಿಯ ಫುಟ್ಬಾಲಿಗ ಪಿ.ಕೆ. ಬ್ಯಾನರ್ಜಿ ನಿಧನ



ಕೋಲ್ಕೊತಾ : ದಿಗ್ಗಜ ಫುಟ್ಬಾಲ್ ಆಟಗಾರ ಪಿ.ಕೆ. ಬ್ಯಾನರ್ಜಿ ಶುಕ್ರವಾರ ಕೋಲ್ಕತ್ತಾ ನಗರದಲ್ಲಿ ಅಸುನೀಗಿದ್ದಾರೆ ಇವರು ದೀರ್ಘಕಾಲದಿಂದ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು.

* ಎರಡು ಬಾರಿಯ ಒಲಿಂಪಿಯನ್ ಮತ್ತು 1962ರ ಏಷ್ಯನ್ ಗೇಮ್ಸ್ ನಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದ ಪರ ಏಕೈಕ ಗೋಲ್ ಗಳಿಸಿದ ಆಟಗಾರರಾಗಿ ಬ್ಯಾನರ್ಜಿ ಗುರುತಿಸಿಕೊಂಡಿದ್ದರು.
* ಫುಟ್ಬಾಲ್ ಕ್ಷೇತ್ರದಲ್ಲಿ ಆಟಗಾರ ಮತ್ತು ತರಬೇತುದಾರರಾಗಿ ಗುರುತಿಸಿಕೊಂಡಿದ್ದರು

22 03 2020 ವಿಶ್ವ ಜಲ ದಿನ World water day




ವಿಶ್ವ ಜಲ ದಿನವು ವಾರ್ಷಿಕ ಯುಎನ್ ಆಚರಣೆಯ ದಿನವಾಗಿದೆ (ಮಾರ್ಚ್ 22) ಇದು ಸಿಹಿನೀರಿನ ಮಹತ್ವವನ್ನು ತೋರಿಸುತ್ತದೆ. ಸಿಹಿನೀರಿನ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಗೆ ಸಲಹೆ ನೀಡಲು ದಿನವನ್ನು ಬಳಸಲಾಗುತ್ತದೆ. ಪ್ರತಿ ದಿನದ ವಿಷಯವು ಶುದ್ಧ ನೀರು, ನೈರ್ಮಲ್ಯ ಮತ್ತು ನೈರ್ಮಲ್ಯಕ್ಕೆ (ವಾಶ್) ಸಂಬಂಧಿಸಿದ ವಿಷಯಗಳ ಮೇಲೆ ಕೇಂದ್ರೀಕರಿಸುತ್ತದೆ, ಇದು ಸುಸ್ಥಿರ ಅಭಿವೃದ್ಧಿ ಗುರಿ 6 (Sustainable Development Goal 6)ರ ಗುರಿಗಳಿಗೆ ಅನುಗುಣವಾಗಿರುತ್ತದೆ. ವಿಶ್ವ ನೀರಿನ ದಿನದಂದು ಪ್ರತಿವರ್ಷ ಯುಎನ್ ವಿಶ್ವ ಜಲ ಅಭಿವೃದ್ಧಿ ವರದಿ (World water development report WWDR) ಬಿಡುಗಡೆಯಾಗುತ್ತದೆ.


# Current affairs of March 2020 from KPSC Vaani

22 03 2020 ರೈಸ್(RAISE)2020:ಕರೋನಾ ವೈರಸ್‌ನಿಂದಾಗಿ ಭಾರತದ ಮೊದಲ ಕೃತಕ ಬುದ್ಧಿಮತ್ತೆ ಶೃಂಗಸಭೆ ಮುಂದೂಡಿಕೆ




RAISE 2020 Responsible AI for Social Empowerment 2020 ಏಪ್ರಿಲ್ 11,2020 ಮತ್ತು ಏಪ್ರಿಲ್ 12,2020ರಂದು ಮೊತ್ತ ಮೊದಲಿಗೆ ಭಾರತದಲ್ಲಿ ನಡೆಯಬೇಕಿದ್ದ ಶೃಂಗಸಭೆಯನ್ನು ಕರೋನ ವೈರಸ್ ನಿಂದಾಗಿ ಮುಂದೂಡಲಾಗಿದೆ. 2019 ರಲ್ಲಿ NITI ಆಯೋಗ್ ಸ್ಥಾಪಿಸಿದ AIRAWAT (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ರಿಸರ್ಚ್, ಅನಾಲಿಟಿಕ್ಸ್ ಮತ್ತು ನಾಲೆಡ್ಜ್ ಅಸಿಮಿಲೇಷನ್ ಪ್ಲಾಟ್‌ಫಾರ್ಮ್) ಎಂಬ ಕಂಪ್ಯೂಟಿಂಗ್ ಪ್ಲಾಟ್‌ಫಾರ್ಮ್. ಕೃಷಿ, ಶಿಕ್ಷಣ, ಆರೋಗ್ಯ, ನಗರ ಮುಂತಾದ ಕ್ಷೇತ್ರಗಳಲ್ಲಿ ಉದಯೋನ್ಮುಖ ಆರ್ಥಿಕತೆಗಳಲ್ಲಿ ಭಾರತವನ್ನು ಪ್ರವರ್ತಕ(POINEER)ರನ್ನಾಗಿ ಮಾಡುವ ಗುರಿ ಹೊಂದಿದೆ

22 03 2020 ಕೊರೋನಾ ವೈರಸ್ ತುರ್ತು ನಿಧಿಗೆ ದೇಣಿಗೆ ನೀಡಿದ ಸಾರ್ಕ ದೇಶಗಳು




ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಕೊರೊನಾ ವೈರಸ್ ವಿರುದ್ಧ ಹೋರಾಡಲು ಸಾರ್ಕ್ ರಾಷ್ಟ್ರಗಳು ಒಟ್ಟಾಗಿ ಶ್ರಮಿಸಬೇಕು ಎಂದು ಹೇಳಿದ್ದರು. ಕೊರೋನಾ ವೈರಸ್ ವಿರುದ್ಧ ಹೋರಾಡಲು ಸಾರ್ಕ ದೇಶಗಳು ಒಟ್ಟುಗೂಡಿ ದೇಣಿಗೆಯನ್ನು ಸಂಗ್ರಹಿಸುತ್ತಿದ್ದಾವೆ. ಕೊರೋನಾ ಸೋಂಕು ನಿವಾರಣೆ ನಿದಿಗೆ ಭಾರತ 10 ಮಿಲಿಯನ್ US$ , ನೇಪಾಳ 1 ಮಿಲಿಯನ್ US$, ಮಾಲ್ಡಿವ್ಸ್ 200,000US$ ಮತ್ತು ಭೂತಾನ್ 100,000US$ ಈಗಾಗಲೇ ಈ ನಾಲ್ಕು ದೇಶಗಳು ದೇಣಿಗೆಯನ್ನು ಸಂಗ್ರಹ ಮಾಡಿದ್ದಾವೆ.


# Current affairs of March 2020 from KPSC Vaani

22 03 2020 ಸತ್ಯರೂಪಸಿದ್ಧಾಂತ್ ಜಗತ್ತಿನ ಅತಿ ಎತ್ತರದ ಅಗ್ನಿ ಪರ್ವತ ಏರಿದ ಪರ್ವತಾರೋಹಿ ಮೊದಲ ಭಾರತೀಯ ಲಿಂಕಾ ದಾಖಲೆ



ಸತ್ಯರೂಪ ಸಿದ್ಧಾಂತ ಅವರು ಜಗತ್ತಿನ ಏಳು ಪರ್ವತಗಳು ಮತ್ತು ಅಗ್ನಿ ಪರ್ವತಗಳನ್ನು ಏರಿ, ಜಗತ್ತಿನ ಅತಿ ಕಿರಿಯ ವಯಸ್ಸಿನ ಪರ್ವತಾರೋಹಿ ಎಂಬ ದಾಖಲೆ ಬರೆದಿದ್ದಾರೆ. ಏಳು ಅಗ್ನಿ ಪರ್ವತಗಳನ್ನು ಏರಿದ ಮೊದಲ ಭಾರತೀಯ ಏಳು ಪರ್ವತಗಳನ್ನು ಮತ್ತು ಏಳು ಅಗ್ನಿ ಪರ್ವತಗಳನ್ನು ಏರಿದ ಮೊದಲ ಭಾರತೀಯ ಮತ್ತು ಇನ್ನು ಹಲವು ದಾಖಲೆಗಳು ಸತ್ಯರೂಪ ಅವರ ಹೆಸರಿಗೆ ಲಿಮ್ಕಾ ಬುಕ್ ಆ ರೆಕಾರ್ಡ್ಸ್ ಗೆ ಸೇರ್ಪಡೆ

22 03 2020 ನಿರ್ಭಯಾ ಹಂತಕರಿಗೆ ಗಲ್ಲು ಹಿನ್ನಲೆ ಮರಣದಂಡನೆ ಶಿಕ್ಷೆ ರದ್ದುಗೊಳಿಸಲು ವಿಶ್ವಸಂಸ್ಥೆ ಕರೆ



ಯುನೈಟೆಡ್ ನೇಷನ್ಸ್: ಭಾರತದಲ್ಲಿ ನಿರ್ಭಯಾ ಪ್ರಕರಣದಲ್ಲಿ ಅತ್ಯಾಚಾರಿಗಳಿಗೆ ಇತ್ತೀಚಿಗೆ ಗಲ್ಲುಶಿಕ್ಷೆ ವಿಧಿಸಿ ನೇಣಿಗೇರಿಸಿದ ಒಂದು ದಿನದ ನಂತರ ಮರಣದಂಡನೆ ಶಿಕ್ಷೆಯನ್ನು ನಿಲ್ಲಿಸುವಂತೆ ಅಥವಾ ಅದರ ಮೇಲೆ ನಿಷೇಧ ಹೇರುವಂತೆ ವಿಶ್ವಸಂಸ್ಥೆಯು ತನ್ನ ಸದಸ್ಯ ರಾಷ್ಟ್ರಗಳಿಗೆ ಕರೆ ನೀಡಿದೆ. ಭಾರತದಲ್ಲಿ ಯುವ ವೈದ್ಯಕೀಯ ವಿದ್ಯಾರ್ಥಿನಿಯಾದ ನಿರ್ಭಯಾ ಮೇಲೆ ನಡೆದ ಅತ್ಯಾಚಾರ ಹಾಗೂ ಕೊಲೆ ನಡೆಸಿದ 4 ಆರೋಪಿಗಳಿಗೆ ಶುಕ್ರವಾರ ಮುಂಜಾನೆ ಮರಣದಂಡನೆ ಶಿಕ್ಷೆಯಾಗಿದೆ. ಈ ಶಿಕ್ಷೆ ಕುರಿತು ಪ್ರತಿಕ್ರಯಿಸಿರುವ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ವಕ್ತಾರರು "ವಿಶ್ವವ್ಯಾಪಿ ಮರಣದಂಡನೆ ಶಿಕ್ಷೆ ಜಾರಿಯನ್ನು ರದ್ದುಗೊಳಿಸಬೇಕು ಇಲ್ಲವೇ ಅದರ ಮೇಲೆ ನಿಷೇಧ ಹೇರಬೇಕು" ಎಂದು ವಿಶ್ವಸಂಸ್ಥೆ ಸದಸ್ಯ ರಾಷ್ಟ್ರಗಳಿಗೆ ಕರೆ ಕೊಟ್ಟಿದ್ದಾರೆ.

# Current affairs of March 2020 from KPSC Vaani

## 22 03 2020 ಹೈಪರ್ಸೋನಿಕ್ ನ್ಯೂಕ್ಲಿಯರ್ ಕ್ಷಿಪಣಿಯನ್ನು ಪರೀಕ್ಷಿಸಿದ US



ದಿನಾಂಕ ಮಾರ್ಚ್ 20, 2020 ರಂದು, ಯುನೈಟೆಡ್ ಸ್ಟೇಟ್ಸ್ ಪರಮಾಣು ಸಾಮರ್ಥ್ಯದ ಹೈಪರ್ಸೋನಿಕ್ ಕ್ಷಿಪಣಿಗಳನ್ನು ಯಶಸ್ವಿಯಾಗಿ ಪರೀಕ್ಷೆ ನಡೆಸಿದೆ. ಈ ಪರೀಕ್ಷೆಯು ಡಿಸೆಂಬರ್ 2019 ರಲ್ಲಿ ರಷ್ಯಾ ಹೈಪರ್ಸಾನಿಕ್ ಪರೀಕ್ಷಿಸಿದ ಕ್ಷಿಪಣಿ ಪರೀಕ್ಷಾ ಸಾಮರ್ಥ್ಯಗಳನ್ನು ಮೀರಿಸುತ್ತದೆ, ಚೀನಾ ಈಗಾಗಲೇ ತನ್ನ DF 17 ಹೈಪರ್ಸಾನಿಕ್ ಗ್ಲೈಡ್ ವಾಹನವನ್ನು ಪ್ರದರ್ಶಿಸಿತ್ತು,ಹಾಗುಇದರವೇಗಶಬ್ದದವೇಗಕ್ಕಿಂತಐದುಪಟ್ಟುಹೆಚ್ಚು ಹಾರಿತು.


## 23 03 2020 ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಂಸ್ಥೆಯಿಂದ ಟೋಕಿಯೊ ಒಲಿಂಪಿಕ್ಸ್2020ಮುಂದೂಡಲು ಚಿಂತನೆ !



ಇತ್ತೀಚಿಗಷ್ಟೇ ಗ್ರೀಸ್ ನಿಂದ ಒಲಿಂಪಿಕ್ ಜ್ವಾಲೆಯನ್ನು ಜಪಾನ್‌ಗೆ ಹಸ್ತಾಂತರಿಸಲಾಗಿತ್ತಾದರೂ, ಕರೋನಾ ವೈರಸ್ ಪ್ರಕರಣಗಳು ಜಗತ್ತಿನಾದ್ಯಂತ ಹೆಚ್ಚುತ್ತಿರುವ ಹಿನ್ನಲೆಯಲ್ಲಿ, ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯು 2020 ರ ಒಲಿಂಪಿಕ್ಸ್ ಅನ್ನು ಮುಂದೂಡಲು ಯೋಚಿಸುತ್ತಿದ್ದು, ಸಂಸ್ಥೆ ಒಲಿಂಪಿಕ್ಸ್ ಅನ್ನು 2021 ಕ್ಕೆ ಮುಂದೂಡಬಹುದಾದ ಸಾಧ್ಯತೆಗಳಿವೆ. ಒಲಿಂಪಿಕ್ಸ್ ಮುಂದೂಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ 4 ವಾರಗಳ ಕಾಲಮಿತಿಯನ್ನು ನಿಗದಿಪಡಿಸಿದ್ದು ಈ ಕಾಲಮಿತಿಯೊಳಗೆ ತನ್ನ ಅಂತಿಮ ತೀರ್ಮಾನ ತಿಳಿಸಲಿದೆ. COVID 19 ವೈರಸ್ ಭೀತಿಯಿಂದ ಕ್ರೀಡಾಪಟುಗಳ ಸುರಕ್ಷತೆ ಮತ್ತು ಸಾರ್ವಜನಿಕ ಆರೋಗ್ಯವನ್ನು ಪರಿಗಣಿಸಿ ಕೆನಡಾ, ಉತ್ತರ ಕೊರಿಯಾ ಮತ್ತು ಇಂಡೋನೇಷ್ಯಾ ರಾಷ್ಟ್ರಗಳು ಈಗಾಗಲೇ ಆಟದಿಂದ ಹಿಂದೆ ಸರಿಯುವುದಾಗಿ ಘೋಷಿಸಿವೆ.

# Current affairs of March 2020 from KPSC Vaani

23 03 2020 ಮಾರ್ಚ್ 23: ವಿಶ್ವ ಹವಾಮಾನ ದಿನ




1950 ರಿಂದ ಪ್ರತಿ ವರ್ಷ ಮಾರ್ಚ್ 23 ರಂದು ವಿಶ್ವ ಹವಾಮಾನ ದಿನವನ್ನು ಆಚರಿಸಲಾಗುತ್ತದೆ. ಈ ದಿನವನ್ನು ವಿಶ್ವ ಹವಾಮಾನ ಸಂಸ್ಥೆ (WMO) ಮತ್ತು ವಿಶ್ವಸಂಸ್ಥೆಗಳು ಜಂಟಿಯಾಗಿ ಆಚರಿಸುತ್ತಿದೆ. 1950ರ ದಿನಾಂಕ ಮಾರ್ಚ 23 ವಿಶ್ವ ಹವಾಮಾನ ಸಂಸ್ಥೆ ಸ್ಥಾಪನೆಯಾದ ದಿನದಂದು ವಿಶ್ವ ಹವಾಮಾನ ದಿನ ಆಚರಿಸಲಾಗುತ್ತಿದೆ. ಈ ವರ್ಷ, ಮಾರ್ಚ್ 22 ರಂದು ಆಚರಿಸಲಾಗುತ್ತಿರುವ ವಿಶ್ವ ಜಲ ದಿನಾಚರಣೆಯೊಂದಿಗೆ ಘೋಷ ವಾಕ್ಯವನ್ನು ಹೊಂದಿಸಲಾಗಿದ್ದು 2020 ವಿಶ್ವ ಹವಾಮಾನ ದಿನಾಚರಣೆಯ ಘೋಷ ವಾಕ್ಯ : ಹವಾಮಾನ ಮತ್ತು ನೀರು

23 03 2020 ವಿಶ್ವ ನಗರಗಳ ಶೃಂಗಸಭೆ ಮುಂದೂಡಿಕೆ




ಕರೋನಾ ವೈರಸ್ ಬೆದರಿಕೆಯಿಂದಾಗಿ ವಿಶ್ವ ನಗರಗಳ ಶೃಂಗಸಭೆಯನ್ನು ಇತ್ತೀಚೆಗೆ ಮುಂದೂಡಲಾಗಿದೆ. ವಿಶ್ವವ್ಯಾಪಿ ವ್ಯಾಪಿಸಿರುವ ಕರೋನ ವೈರಸ್ ಭೀತಿಯಿಂದ ಈ ವರ್ಷ ಸಿಂಗಾಪುರದಲ್ಲಿ ನಡೆಸಲು ಉದ್ದೇಶಿಸಲಾಗಿದ್ದ ಈ ಶೃಂಗಸಭೆಯನ್ನು ಸಭೆಯನ್ನು ಜೂನ್ 20 ಕ್ಕೆ ಮುಂದೂಡಲಾಯಿತು.

ಈ ವರ್ಷ ಶೃಂಗಸಭೆಯಾ ಘೋಷ ವಾಕ್ಯ : ವಾಸಯೋಗ್ಯ ಮತ್ತು ಸುಸ್ಥಿರ ನಗರಗಳು: ಅಸ್ತವ್ಯಸ್ತಗೊಂಡ ಜಗತ್ತಿಗೆ ಹೊಂದಿಕೊಳ್ಳುವುದು (Liveable and Sustainable Cities: Adapting to a DisruptedWorld)

# Current affairs of March 2020 from KPSC Vaani

23 03 2020 ಮಾರ್ಚ್ 18:ಜಾಗತಿಕ ಮರುಬಳಕೆ ದಿನ




ಪ್ರತಿ ವರ್ಷದ ದಿನಾಂಕ ಮಾರ್ಚ್ 18 ರಂದು ಜಾಗತಿಕ ಮರುಬಳಕೆ ದಿನವಾಗಿ ಆಚರಿಸಲಾಗುತ್ತಿದೆ. ಯಾವ ವಸ್ತುಗಳನ್ನು ಮರುಬಳಕೆ ಮಾಡಲು ಸಾಧ್ಯವೋ ಆ ವಸ್ತುಗಳನ್ನು "ಏಳನೇ ಸಂಪನ್ಮೂಲ" ಎಂದು ಕರೆಯಲಾಗುತ್ತದೆ. ವಿಶ್ವಸಂಸ್ಥೆಯ ಪ್ರಕಾರ ಪ್ರತಿವರ್ಷ ಸುಮಾರು 700 ಮಿಲಿಯನ್ ಟನ್ ನಷ್ಟು ಕಾರ್ಬನ್ ಡೈಆಕ್ಸೈಡ್ ಅನ್ನು ಉಳಿಸಲು ಅವು ಸಹಾಯ ಮಾಡುತ್ತವೆ. ಘೋಷವಾಕ್ಯ: ಮರುಬಳಕೆ ಮಾಡುವ ನಾಯಕರು (Recycling Heroes) ವಿಶ್ವಸಂಸ್ಥೆಯ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯು ಈ ದಿನವನ್ನು ಬೆಂಬಲಿಸುತ್ತದೆ. ಈ ದಿನ ಆಚರಣೆಯ ಮುಖ್ಯ ಉದ್ದೇಶವೆಂದರೆ "ಉಳಿದ ತ್ಯಾಜ್ಯದ ಪ್ರಮಾಣವನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದಾಗಿದೆ"

23 03 2020 ಆಯುಷ್ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳ ಸ್ಥಾಪನೆಗೆ ಕೇಂದ್ರಸಚಿವಸಂಪುಟಅನುಮೋದನೆನೀಡಿದೆ




ದಿನಾಂಕ ಮಾರ್ಚ್ 21, 2020 ರಂದು ಆಯುಷ್ಮಾನ್ ಭಾರತ್ ಮಿಷನ್ ಅಡಿಯಲ್ಲಿ ಆಯುಷ್ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ ಸ್ಥಾಪಿಸಲು ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಯಿತು. ಅನುಮೋದನೆಯಡಿಯಲ್ಲಿ ಒಟ್ಟು 3,395 ಕೋಟಿ ರೂ. ವೆಚ್ಚದಲ್ಲಿ ಸುಮಾರು 12,500 ಕೇಂದ್ರಗಳನ್ನು 05 ವರ್ಷಗಳಕಾಲಮಿತಿಯಲ್ಲಿನಿರ್ಮಿಸಲುಭಾರತಸರ್ಕಾರಯೋಜಿಸಿದೆ.

# Current affairs of March 2020 from KPSC Vaani


24 03 2020 ಮಧ್ಯಪ್ರದೇಶ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಚೌಹಾಣ್




ಭೋಪಾಲ್ : ಮಧ್ಯಪ್ರದೇಶ ರಾಜಕೀಯ ಬಿಕ್ಕಟ್ಟಿನಿಂದಾಗಿ ಕಾಂಗ್ರೆಸ್ ನಾಯಕ ಕಮಲ ನಾಥ್ ಅವರು ಬಹುಮತ ಸಾಬೀತು ಪಡಿಸಲು ವಿಫಲರಾದ ಬೆನ್ನಲ್ಲೇ ಮಧ್ಯಪ್ರದೇಶ ಮುಖ್ಯಮಂತ್ರಿಯಾಗಿ BJP ಯ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಸೋಮವಾರ ಸಂಜೆ ಪ್ರಮಾಣವಚನ ಸ್ವೀಕರಿಸಿದರು.

* ಶಿವರಾಜ್ ಸಿಂಗ್ ಚೌಹಾಣ್ ಅವರು ನಾಲ್ಕನೇ ಬಾರಿಗೆ ಮಧ್ಯಪ್ರದೇಶ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.
* ಕಾಂಗ್ರೆಸ್ ನ 22 ಶಾಸಕರು ರಾಜೀನಾಮೆ ನೀಡಿ ಬಿಜೆಪಿಯನ್ನು ಸೇರುವ ಮೂಲಕ ಅವರೆಲ್ಲರೂ ಶಿವರಾಜ್ ಸಿಂಗ್ ಚೌಹಾಣ್ ಅವರು ಮುಖ್ಯಮಂತ್ರಿಯಾಗಲು ಬೆಂಬಲ ಸೂಚಿಸಿದ್ದಾರೆ.

24 03 2020 ಮಾರ್ಚ್ 24 ವಿಶ್ವ ಕ್ಷಯ ರೋಗ ದಿನ




ದಿನಾಂಕ ಮಾರ್ಚ್ 24 ರಂದು ವಿಶ್ವ ಕ್ಷಯ ರೋಗ ದಿನವನ್ನು ಆಚರಿಸಲಾಗುತ್ತಿದ್ದು. ಕಳೆದ ದಿನಗಳಲ್ಲಿ ಇದು ಕೂಡ ಭೀತಿ ಹುಟ್ಟಿಸಿದ್ದ ಸಾಂಕ್ರಾಮಿಕ ಕಾಯಿಲೆಯೇ ಆಗಿತ್ತು. ಸಾಂಕ್ರಾಮಿಕ ರೋಗವಾದ ಕ್ಷಯವು ಒಂದು ಕಾಲದಲ್ಲಿ ಜಗತ್ತನ್ನೇ ನಡುಗಿಸಿತ್ತು. ಕ್ಷಯವು ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಯಾಗಿದ್ದು, ಯಾವುದೇ ವಯಸ್ಸಿನವರಿಗೂ ಕಾಡಬಹುದಾದ ರೋಗವಾಗಿದೆ. ಈ ಕ್ಷಯ ರೋಗದ ಬಗ್ಗೆ ಜಾಗೃತಿಗಾಗಿ ವಿಶ್ವ ಆರೋಗ್ಯ ಸಂಸ್ಥೆಯು ದಿನಾಂಕ ಮಾರ್ಚ್ 24ರಂದು ವಿಶ್ವ ಕ್ಷಯರೋಗ ಜಾಗೃತಿ ದಿನವನ್ನಾಗಿ ಆಚರಿಸುತ್ತದೆ.

* ಕ್ಷಯರೋಗ ಅಥವಾ ಟ್ಯುಬರ್‌ಕ್ಯುಲೋಸಿಸ್ (ಟಿ.ಬಿ.) ಎಂದೇ ಕರೆಯಿಸಿಕೊಳ್ಳುವ ಈ ಕಾಯಿಲೆಯು ಮನುಷ್ಯರು ಮತ್ತು ಪ್ರಾಣಿಗಳಲ್ಲಿಯೂ ಕಾಣಿಸಿಕೊಳ್ಳುತ್ತದೆ.

# Current affairs of March 2020 from KPSC Vaani

24 03 2020 ರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಮಿಷನ್: ಇನ್ನೂ ಮೂರು ಸೂಪರ್ ಕಂಪ್ಯೂಟರ್‌ಗಳ ಸ್ಥಾಪನೆ




ಭಾರತ ಸರ್ಕಾರವು 2015ರಲ್ಲಿ ನ್ಯಾಷನಲ್ ಸೂಪರ್ ಕಂಪ್ಯೂಟರ್ ಮಿಷನ್ ಅನ್ನು ಪ್ರಾರಂಭಿಸಿತು. ಇಲ್ಲಿಗೆ ಭಾರತ ಸರ್ಕಾರವು 5 ಸೂಪರ್ ಕಂಪ್ಯೂಟರ್‌ಗಳನ್ನು ಹೊಂದಿದ್ದು, ಇವು ವಿಶ್ವದ ಟಾಪ್ 500 ಸೂಪರ್ ಕಂಪ್ಯೂಟರ್‌ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಸಧ್ಯ 3 ಸೂಪರ್ ಕಂಪ್ಯೂಟರ್‌ಗಳನ್ನು ಐಐಟಿ ಕಾನ್ಪುರ್, ಐಐಟಿ ಹೈದರಾಬಾದ್ ಮತ್ತು ಜೆಎನ್ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್‌ನಲ್ಲಿ 2020 ರ ಏಪ್ರಿಲ್‌ನಲ್ಲಿ ಸ್ಥಾಪಿಸಲಾಗುವುದು. 2020 ರ ಈ ವರ್ಷ ರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಮಿಷನ್ ಗೆ ಹೆಚ್ಚು ಮುಖ್ಯವಾಗಿದೆ. ಕಾರಣ, ಡಿಸೆಂಬರ್ 2020 ರ ವೇಳೆಯೊಳಗಾಗಿ NIT, IIT ಮತ್ತು IISER ಗಳಲ್ಲಿ 11 ಹೊಸ ಸೂಪರ್ ಕಂಪ್ಯೂಟರ್ ವ್ಯವಸ್ಥೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

* ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೆಟಿಯಾಲಜಿ ಇಂಡಿಯಾದಲ್ಲಿನ ಸೂಪರ್ ಕಂಪ್ಯೂಟರ್ (ಪ್ರತ್ಯುಷ್) 39 ನೇ ಸ್ಥಾನ ಪಡೆದಿದೆ.

* ಮಧ್ಯಮ ಹವಾಮಾನ ಮುನ್ಸೂಚನೆಗಾಗಿ ರಾಷ್ಟ್ರೀಯ ಕೇಂದ್ರದಲ್ಲಿರುವ ಸೂಪರ್ ಕಂಪ್ಯೂಟರ್ 66 ನೇ ಸ್ಥಾನದಲ್ಲಿದೆ.

* ಮೊದಲ ಶ್ರೇಯಾಂಕದ ಸೂಪರ್ ಕಂಪ್ಯೂಟರ್ ಅಮೆರಿಕಾದ ರಿಡ್ಜ್ ನ್ಯಾಷನಲ್ ಲ್ಯಾಬೊರೇಟರಿಯಲ್ಲಿ ಇದೆ.

24 03 2020 ಹಣಕಾಸು ಮಸೂದೆ 2020 : ಲೋಕಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು




ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2020 ರ ಹಣಕಾಸು ಮಸೂದೆಯನ್ನು ಮಂಡಿಸಿದರು. ಈ ಮಸೂದೆಯನ್ನು ಲೋಕಸಭೆಯಲ್ಲಿ ದಿನಾಂಕ 23 ಮಾರ್ಚ್ 2020 ರಂದು ಯಾವುದೇ ಚರ್ಚೆಯಿಲ್ಲದೆ ಅಂಗೀಕರಿಸಲಾಯಿತು.

* ಈ ಮಸೂದೆ 2020 21 ರ ಆರ್ಥಿಕ ವರ್ಷದ ಹಣಕಾಸು ಪ್ರಸ್ತಾಪಗಳ ವಿವರ ನೀಡುತ್ತದೆ.

# Current affairs of March 2020 from KPSC Vaani

24 03 2020 ಡೆಬಿಟ್ ಕಾರ್ಡ್ ಬಳಸಿ ಯಾವುದೇ ಬ್ಯಾಂಕ್ ATM ನಿಂದ ಹಣಪಡೆದರು ವಿಧಿಸುತ್ತಿದ್ದ ಶುಲ್ಕ ರದ್ದು



ನವದೆಹಲಿ: ಕರೊನಾ ವೈರಸ್ ತೀವ್ರವಾಗಿ ಹರಡುವಿಕೆಯಿಂದ ಗಾಬರಿಯಾಗಿರುವ ಜನತೆಗೆ ಕೇಂದ್ರ ಸರ್ಕಾರದಿಂದ ವಿವಿಧ ನಿಯಮಗಳ ಸಡಿಲಿಕೆ ನೀಡಿದ್ದು, ಇನ್ನು ಮುಂದೆ ಯಾವುದೇ ಎಟಿಎಂ ಕೇಂದ್ರಗಳಲ್ಲಿ ಡೆಬಿಟ್ ಕಾರ್ಡ್ ಬಳಸಿ ಹಣ ಡ್ರಾ ಮಾಡುವುದಕ್ಕೆ ವಿಧಿಸುತ್ತಿದ್ದ ಶುಲ್ಕವನ್ನು ವಿಧಿಸದಂತೆ ಕೇಂದ್ರ ಸರ್ಕಾರ ಬ್ಯಾಂಕುಗಳಿಗೆ ತಿಳಿಸಿದೆ.

24 03 2020 ಇಂದು ಹುತಾತ್ಮರ ದಿನ : ಭಗತ್ ಸಿಂಗ್, ರಾಜ್‌ಗುರು ಮತ್ತು ಸುಖದೇವ್ ನೆನಪಿಸಿಕೊಂಡ ಪ್ರಧಾನಿ



ನವದೆಹಲಿ: ಬ್ರಿಟಿಷರ ವಿರುದ್ಧ ಹೋರಾಡಿ ಭಾರತಕ್ಕೆ ಸ್ವತಂತ್ರ ಕೊಡಿಸುವಲ್ಲಿ ಹೋರಾಡಿ ತಮ್ಮದೇ ಆದ ದೇಶ ಸೇವೆ ನೀಡಿ ಕೊನೆಗೆ ಬ್ರಿಟಿಷರಿಂದ ಗಲ್ಲು ಶಿಕ್ಷೆಗೊಳಗಾದ ಭಗತ್ ಸಿಂಗ್, ರಾಜ್‌ಗುರು ಮತ್ತು ಸುಖದೇವ್ ಈ ವೀರಯೋಧರನ್ನು ಗಲ್ಲಿಗೇರಿಸಿದ ದಿನವಿದು. 1931ರಲ್ಲಿ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಈ ಮೂರು ವೀರ ಯೋಧರ ಸ್ಮರಣಾರ್ಥ ಪ್ರತಿ ವರ್ಷ ಈ ದಿನವನ್ನು ಹುತಾತ್ಮರ ದಿನವಾಗಿ ಆಚರಿಸಿಕೊಂಡು ಬಂದಿದ್ದಾರೆ, ಇಂದು ಪ್ರಧಾನಿ ಮೋದಿ ಸೇರಿದಂತೆ ಕೆಲವು ರಾಜಕೀಯ ಮುಖಂಡರು ಈ ವೀರರ ಸ್ಮರಣೆ ಮಾಡಿದ್ದಾರೆ.

# Current affairs of March 2020 from KPSC Vaani



# Current affairs of March 2020 from KPSC Vaani

25 03 2020 ಆಯುಷ್ಮಾನ್ ಭಾರತ್ ಯೋಜನೆಯಡಿ ಕೊರೊನಾಗೆ ಚಿಕಿತ್ಸೆ : ಕೇಂದ್ರ ಸರ್ಕಾರ




ನವದೆಹಲಿ : ಭಾರತದಲ್ಲಿ ದಿನೇ ದಿನೇ ವ್ಯಾಪಕವಾಗಿ ಹರಡುತ್ತಿರುವ ಕೊರೊನಾ ವೈರಸ್ ನಿಯಂತ್ರಣಕ್ಕೆ ಭಾರತ ಸರ್ಕಾರವು ಈಗಾಗಲೇ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಈಗ ಆಯುಷ್ಮಾನ್ ಭಾರತ್ ಯೋಜನೆಗೆ ಕೊರೊನಾ ವೈರಸ್ ಪ್ಯಾಕೇಜ್ ಸೇರಿಸಲು ಸರ್ಕಾರ ಮುಂದಾಗಿದೆ ಎಂದು ತಿಳಿದುಬಂದಿದೆ. ದೇಶದಲ್ಲಿ ಪ್ರಸ್ತುತ ಸರ್ಕಾರೀ ಮತ್ತು ಖಾಸಗಿ ಸೇರಿ 111 ಲ್ಯಾಬ್ ಗಳಲ್ಲಿ ಕರೋನ ವೈರಸ್ ಪರೀಕ್ಷಿಸಲಾಗುತ್ತಿದ್ದು, ಆದರೆ, ಖಾಸಗಿ ಲ್ಯಾಬ್ ನಲ್ಲಿನ ಕೊರೊನಾ ಪರೀಕ್ಷೆಯು ತುಂಬಾ ದುಬಾರಿಯಾಗಿದ್ದು, ಹೀಗಾಗಿ ಕೇಂದ್ರ ಸರ್ಕಾರದ ಆಯುಷ್ಮಾನ್ ಯೋಜನೆ ಫಲಾನುಭವಿಗಳೂ ಉಚಿತವಾಗಿ ಕೊರೊನಾ ವೈರಸ್ ಪರೀಕ್ಷೆ ಮಾಡಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ.

25 03 2020 ಭಾರತಕ್ಕೆ ಕೊರೋನ ಎದುರಿಸುವ ಸಾಮರ್ಥ್ಯವಿದೆ: ವಿಶ್ವ ಆರೋಗ್ಯ ಸಂಸ್ಥೆ




ಜಿನೀವಾ : ಈ ಹಿಂದೆ ಕಾಣಿಸಿಕೊಂಡಿದ್ದ ಸಿಡುಬು ಹಾಗೂ ಪೋಲಿಯೋಗಳಂತಹ ರೋಗಗಳನ್ನು ನಿರ್ಮೂಲನೆ ಮಾಡಿರುವ ಭಾರತಕ್ಕೆ ಕೊರೋನ ವೈರಸ್ ಸೋಂಕನ್ನು ಕೂಡ ನಿಯಂತ್ರಿಸುವ ಸಾಮರ್ಥ್ಯವಿದೆ, ಎಂದು ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ "ಮೈಕೇಲ್ ಜೆ ರ್ಯಾನ್" ಅಭಿಪ್ರಾಯ ಪಟ್ಟಿದ್ದಾರೆ. ಭಾರತದಂತಹ ದೇಶಗಳು ಹಿಂದೆ ಮಾಡಿದಂತೆ ಈಗ ಕೂಡ ಜಗತ್ತಿಗೆ ದಾರಿ ತೋರಿಸಬೇಕಿದೆ" ಎಂದು ಅವರು ತಿಳಿಸಿದರು.

# Current affairs of March 2020 from KPSC Vaani

25 03 2020 ರಾಜ್ಯದ "ಬಡವರ ಬಂಧು ಯೋಜನೆ"ಯ ಸಾಲ ಮನ್ನಾ




ಬೆಂಗಳೂರು: ಕರ್ನಾಟಕದ ಬೀದಿ ಬದಿ ವ್ಯಾಪಾರ ಮಾಡುವವರಿಗೆ ನೀಡುವ ಕಿರುಸಾಲದ ಯೋಜನೆಯಾದ "ಬಡವರ ಬಂಧು ಯೋಜನೆ"ಯ ಸಾಲವನ್ನು ಮನ್ನಾ ಮಾಡಲಾಗುವುದೆಂದು ಮುಖ್ಯಮಂತ್ರಿ B S ಯಡಿಯೂರಪ್ಪ ವಿಧಾನ ಪರಿಷತ್ತಿನಲ್ಲಿ ಘೋಷಿಸಿದರು. ಈ ಯೋಜನೆಯ ಒಟ್ಟು 13.20 ಕೋಟಿ ರೂಪಾಯಿ ಸಾಲ ಮನ್ನಾ ಮಾಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

* ಇದೇ ವೇಳೆ ಎರಡು ವಿಧೇಯಕಗಳ ಅಂಗೀಕಾರ ಮಾಡಲಾಯಿತು. ಫೈನಾನ್ಸ್ ಬಿಲ್ ಹಾಗೂ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ವಿಧೇಯಕಗಳಿಗೆ ಅಂಗೀಕಾರ ನೀಡಲಾಯಿತು.

25 03 2020 ಕೊರೊನಾವೈರಸ್‌ಭೀತಿ:21ದಿನಸಂಪೂರ್ಣಲಾಕ್‌ಡೌನ್‌ಆದ ಭಾರತ




ನವದೆಹಲಿ: ಭಾರತದಾದ್ಯಂತ ಹೆಚ್ಚುತ್ತಿರುವ ಕೊರೊನಾವೈರಸ್ ಪೀಡಿತರ ಸಂಖ್ಯೆಯನ್ನು ನಿಯಂತ್ರಿಸಲು ಪ್ರಧಾನಿ ಮೋದಿಯವರು 24 ಮಾರ್ಚ್ ಮಧ್ಯರಾತ್ರಿಯಿಂದಲೇ ದೇಶಾದ್ಯಂತ ಸಂಪೂರ್ಣ ಲಾಕ್‌ಡೌನ್ ಮಾಡುವುದಾಗಿ ಘೋಷಿಸಿದ್ದಾರೆ. ದೇಶವನ್ನುದ್ದೇಶಿಸಿ ಮಾತನಾಡಿದ ಅವರು, ಎಲ್ಲರು ಮನೆಮುಂದೆ ಲಕ್ಷ್ಮಣ ರೇಖೆಯನ್ನು ಹಾಕಿಕೊಂಡು ಇರಬೇಕು. ಅದನ್ನು ಯಾವುದೇ ಕಾರಣಕ್ಕೂ ದಾಟಬಾರದು ಎಂದು ಜನರಿಗೆ ಮನವಿ ಮಾಡಿದ್ದಾರೆ. ಇದೆ ಸಮಯದಲ್ಲಿ ತುರ್ತು ಸೇವೆಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲ ಸೇವೆಗಳನ್ನು ಸಂಪೂರ್ಣವಾಗಿ 21 ದಿನಗಳವರೆಗೆ ಲಾಕ್ ಡೌನ್ ಮಾಡಲಾಗಿದೆ.

# Current affairs of March 2020 from KPSC Vaani

25 03 2020 ಕೊರೊನಾ ವೈರಸ್ : ₹15 ಸಾವಿರ ಕೋಟಿ ಘೋಷಿಸಿದ ಪ್ರಧಾನಿ ಮೋದಿ




ನವದೆಹಲಿ : ಕೊರೊನಾ ವೈರಸ್ ವಿರುದ್ಧದ ಹೋರಾಟಕ್ಕೆ ಬರುವ 21 ದಿನಗಳ ಕಾಲ ದೇಶದಾದ್ಯಂತ ಸಂಪೂರ್ಣ ಲಾಕ್‌ಡೌನ್ ಮಾಡಲು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ ಬೆನ್ನಲ್ಲೆ, ಕೊರೊನಾ ವೈರಸ್ ವಿರುದ್ಧದ ಹೋರಾಟಕ್ಕೆ ₹15,000 ಕೋಟಿಗಳನ್ನು ಮೀಸಲಿಡಲಾಗಿದೆ ಎಂದು ಅವರು ಘೋಷಿಸಿದ್ದಾರೆ. ಈ ಮೀಸಲು ಹಣವನ್ನು ಕೊರೊನಾವೈರಸ್ ಪರೀಕ್ಷಾ ಕೇಂದ್ರಗಳು, ಪ್ರತ್ಯೇಕ ವಾರ್ಡ್ಸ್, ಹಾಸಿಗೆಗಳ ಸೌಲಭ್ಯ, ಐಸಿಯುಗಳು, ವೆಂಟಿಲೇಟರ್‌ಗಳು ಮತ್ತು ತರಬೇತಿ ನೀಡುವ ವೈದ್ಯಕೀಯ ಕಾರ್ಯಕರ್ತರು ಸೇರಿದಂತೆ ಇತರೆ ಸೌಲಭ್ಯಗಳಿಗಾಗಿ ಮೀಸಲಿಡಲಾಗಿಡಲಾಗಿದೆ ಎಂದು ಮೋದಿ ತಿಳಿಸಿದ್ದಾರೆ.

26 03 2020 ಪ್ರಾದೇಶಿಕಗ್ರಾಮೀಣಬ್ಯಾಂಕುಗಳಮರು ಬಂಡವಾಳೀಕರಣ: ಕೇಂದ್ರ ಸಚಿವಸಂಪುಟಅನುಮೋದನೆ




ದಿನಾಂಕ 2020 ರ ಮಾರ್ಚ್ 25 ರಂದು ಪಿಎಂ ಮೋದಿಯವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ (RRB) ಮರು ಬಂಡವಾಳೀಕರಣಕ್ಕೆ ಅನುಮೋದನೆ ನೀಡಲಾಯಿತು.

# Current affairs of March 2020 from KPSC Vaani

## 26 03 2020 ಪಡಿತರಅಂಗಡಿಗಳಿಗೆಹೆಚ್ಚುವರಿಆಹಾರಧಾನ್ಯಗಳಸರಬರಾಜಿಗೆ : ಕೇಂದ್ರ ಸಚಿವ ಸಂಪುಟ ಅನುಮೋದನೆ



ದಿನಾಂಕ ಮಾರ್ಚ್ 25, 2020 ರಂದು ಪ್ರಧಾನಿ ನರೇಂದ್ರ ಮೋದಿಯವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಪಡಿತರ ಅಂಗಡಿಗಳ ಮೂಲಕ ಆಹಾರ ಧಾನ್ಯಗಳನ್ನು ಹೆಚ್ಚುವರಿ ಸರಬರಾಜು ಮಾಡಲು ಅಂಗೀಕರಿಸಲಾಯಿತು. ಕರೋನ ವೈರಸ್ ಭೀತಿಯಿಂದ ಇಡೀ ಭಾರತವೇ ಲಾಕ್ ಡೌನ್ ಆಗಿರುವದರಿಂದ ಸಾರ್ವಜನಿಕರಿಗೆ ತೊಂದರೆಯಾಗಬಾರದೆಂದು ಸಬ್ಸಿಡಿ ಮೂಲಕ ವಿತರಿಸುವ ಆಹಾರ ಧಾನ್ಯಗಳ ಪ್ರತಿ ತಿಂಗಳ ಕೋಟಾವನ್ನು 2 ಕೆಜಿ ಯಿಂದ 7 ಕೆಜಿವರೆಗೆ ಹೆಚ್ಚಿಸಲು ಕ್ರಮವನ್ನು ತೆಗೆದುಕೊಳ್ಳಲಾಗಿದೆ.
* ಲಾಕ್ ಡೌನ್ ಸಮಯದಲ್ಲಿ ಪ್ರತಿ ವ್ಯಕ್ತಿಗೆ 7 ಕೆಜಿ ಆಹಾರ ಧಾನ್ಯಗಳನ್ನು ನೀಡಲು ಸರ್ಕಾರ ನಿರ್ಧರಿಸಿದೆ.
* ದೇಶದ 80 ಕೋಟಿಗೂ ಹೆಚ್ಚು ಜನರಿಗೆ ಇದರ ಪ್ರಯೋಜನವಾಗಲಿದೆ. * ಭಾರತ ಸರ್ಕಾರದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಸಬ್ಸಿಡಿ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುತ್ತಿದೆ.

## 26 03 2020 ಸಿಕ್ಕಿಂನಲ್ಲಿರುವ ಹಿಮನದಿಗಳು ಹಿಮಾಲಯದ ಇತರ ಭಾಗಗಳಿಗಿಂತ ವೇಗವಾಗಿ ಕರಗುತ್ತಿವೆ : ವರದಿ



ಡೆಹ್ರಾಡೂನ್‌ನ ವಾಡಿಯಾ ಇನ್‌ಸ್ಟಿಟ್ಯೂಟ್ ಆಫ್ ಹಿಮಾಲಯನ್ ನ ಜಿಯಾಲಜಿಯ ವಿಜ್ಞಾನಿಗಳು ಇತ್ತೀಚಿಗೆ ನಡೆಸಿದ ಅಧ್ಯಯನದ ವರದಿಯನುಸಾರ ಸಿಕ್ಕಿಂ ಪ್ರದೇಶದ ಹಿಮನದಿಗಳು ಇತರ ಹಿಮಾಲಯನ್ ಪ್ರದೇಶಗಳ ನದಿಗಳಿಗೆ ಹೋಲಿಸಿದರೆ ಅತಿ ವೇಗದ ದರದಲ್ಲಿ ಕರಗುತ್ತಿವೆ ಎಂದು ತಿಳಿಸಿದೆ.

* 1991 ರಿಂದ 2015 ರವಗಿನ ಸುಮಾರು 23 ಹಿಮನದಿಗಳು ಮತ್ತು ಅವುಗಳ ಹರಡುವಿಕೆಯನ್ನು ಅಧ್ಯಯನ ನಡೆಸಿ ವರದಿ ಸಿದ್ಧಪಡಿಸಲಾಗಿದೆ.
* ದೊಡ್ಡ ಹಿಮನದಿಗಳು ಗಾತ್ರವನ್ನು ಕಳೆದುಕೊಳ್ಳುತ್ತಿದ್ದು, ಸಣ್ಣ ಹಿಮನದಿಗಳು ತಮ್ಮ ಅಸ್ತಿತ್ವವನ್ನು ಕಳೆದು ಕೊಳ್ಳುತ್ತಿವೆ.

# Current affairs of March 2020 from KPSC Vaani

## 26 03 2020 'ಕೊರೊನಾ' ವಿರುದ್ಧ ಭಾರತ ರಷ್ಯಾ ಜಂಟಿ ಹೋರಾಟ




ನವದೆಹಲಿ : ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷರೊಂದಿಗೆ ಮಹಾಮಾರಿ ಕೊರೊನಾ ವೈರಸ್ ವಿರುದ್ಧ ಹೋರಾಡಲು ಜಂಟಿ ಮಾತುಕತೆ ನಡೆಸಿದರು. ಇಬ್ಬರು ಪ್ರಧಾನಿಗಳು ಬುಧವಾರ (25 ಮಾರ್ಚ್) ರಾತ್ರಿ ದೂರವಾಣಿ ಮೂಲಕ ಕೊರೊನಾ ವೈರಸ್ ನಿಯಂತ್ರಣ ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಚರ್ಚಿಸಿದರು. ಜಗತ್ತಿನಾದ್ಯಂತ ವ್ಯಾಪಕವಾಗಿ ಹರಡುತ್ತಿರುವ ಕೊರೊನಾ ವೈರಸ್ ತಡೆಯಲು ಉಭಯ ರಾಷ್ಟ್ರಗಳು ಜಂಟಿಯಾಗಿ ಕೆಲಸ ನಿರ್ವಹಿಸಲು ಈ ಮೂಲಕ ಕೊರೊನಾಗೆ ಔಷಧ ಕಂಡುಕೊಳ್ಳಲು, ವೈಜ್ಞಾನಿಕ ಸಂಶೋಧನೆ ಹಾಗೂ ಮಾನವೀಯ ಕಾರ್ಯಗಳಿಗೆ ಒತ್ತು ನೀಡಲು ನಿರ್ಧರಿಸಿದರು.

## 26 03 2020 ರಾಷ್ಟ್ರೀಯ ಹೆದ್ದಾರಿ ಟೋಲ್ ಸಂಗ್ರಹ ತಾತ್ಕಾಲಿಕವಾಗಿ ರದ್ದುಗೊಳಿಸಿ ಆದೇಶ




ನವದೆಹಲಿ: ಕರೋನ ವೈರಸ್ ಬೀತಿಯಿಂದ ದೇಶಾದ್ಯಂತ ಹೇರಲಾಗಿರುವ ಲಾಕ್ ಡೌನ್ ದಿಂದಾಗಿ ಕೇಂದ್ರ ಸರ್ಕಾರವು ತಾತ್ಕಾಲಿಕವಾಗಿ ದೇಶದ ಎಲ್ಲ ರಾಷ್ಟ್ರೀಯ ಹೆದ್ದಾರಿಗಳ ಟೋಲ್ ಸಂಗ್ರಹ ರದ್ದು ಮಾಡಿ ಆದೇಶ ಹೊರಡಿಸಿದೆ. ಈ ಕುರಿತು ಕೇಂದ್ರ ಸಾರಿಗೆ ಸಚಿವರಾದ ನಿತಿನ್ ಗಡ್ಕರಿ ಟ್ವೀಟರ್ ಮೂಲಕ ಮಾಹಿತಿ ನೀಡಿದ್ದಾರೆ. ದೇಶಾದ್ಯಂತ ಲಾಕ್ ಡೌನ್ ಇರುವದರಿಂದ ದೇಶಗಳಲ್ಲಿ ಅಗತ್ಯ ಸೇವೆಗಳಿಗೆ ಮಾತ್ರ ಅವಕಾಶ ನೀಡಲಾಗಿದ್ದು ಈ ಸೇವೆಗಳು ಯಾವುದೇ ತೊಂದರೆಯಿಲ್ಲದೆ ಸಾರ್ವಜನಿಕರಿಗೆ ಶೀಘ್ರವಾಗಿ ತಲುಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

# Current affairs of March 2020 from KPSC Vaani

## 26 03 2020 ಇಂದಿನಿಂದ G 20 ಶೃಂಗಸಭೆ ಆರಂಭ




ನವದೆಹಲಿ: ಪ್ರಪಂಚದಾದ್ಯಂತ ಕೊರೋನಾ ವೈರಸ್ ವ್ಯಾಪಕವಾಗಿ ಹರಡುತ್ತಿದ್ದು, ಈ ಹಿನ್ನೆಲೆಯಲ್ಲಿ ಇಂದು ನಡೆಯಲಿರುವ ಜಿ 20 ರದ್ದುಪಡಿಸಿ ಕೇವಲ ವಿಡಿಯೋ ಕಾನ್ಫರೆನ್ಸ್ ಮೂಲಕ ಎಲ್ಲ ರಾಷ್ಟ್ರಗಳ ನಾಯಕರು ಚರ್ಚಿಸಲಿದ್ದಾರೆ. ಇದೆ ವೇಳೆ ಭಾರತದ ಪ್ರಧಾನಿ ಮೋದಿಯವರು ಶೃಂಗಸಭೆಯಲ್ಲಿ ಕೊರೊನಾ ವೈರಸ್ ರೋಗದ ಬಗ್ಗೆ ಚರ್ಚಿಸಲು ತಯಾರಾಗಿದ್ದೇನೆ ಎಂದು ತಿಳಿಸಿದ್ದಾರೆ. ಈ ಕುರಿತು ಟ್ವೀಟ್ ಮಾಹಿತಿ ನೀಡಿರುವ ಪ್ರಧಾನಿ ಮೋದಿ ಅವರು ಕೋವಿಡ್ 19 ವೈರಸ್ ನಿಯಂತ್ರಿಸುವಲ್ಲಿ ಜಿ 20 ಶೃಂಗಸಭೆ ಪ್ರಮುಖ ಪಾತ್ರ ವಹಿಸಲಿದೆ ಎಂದು ತಿಳಿಸಿದ್ದಾರೆ.
* ಸೌದಿ ಅರೇಬಿಯಾದ ರಾಜ ಸಲ್ಮಾನ್ ಅಧ್ಯಕ್ಷತೆಯಲ್ಲಿ G20 ಶೃಂಗಸಭೆ ನಡೆಯಲಿದೆ, ಈ ಶೃಂಗಸಭೆಯನ್ನು ವಿಶ್ವಸಂಸ್ಥೆ, ವಿಶ್ವ ಬ್ಯಾಂಕ್, ವಿಶ್ವ ಆರೋಗ್ಯ ಸಂಸ್ಥೆ, ವಿಶ್ವ ವ್ಯಾಪಾರ ಸಂಘಟನೆಯ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

## 27 03 2020 ಭಾರತೀಯ ಫುಟ್ಬಾಲ್ ತಂಡದ ಕ್ಯಾಪ್ಟನ್ ಸುನಿಲ್ ಚೆಟ್ರಿ ಫಿಫಾದ COVID 19 ಅಭಿಯಾನಕ್ಕೆ ಆಯ್ಕೆ



ವಿಶ್ವ ಫಿಫಾ ಆಡಳಿತ ಮಂಡಳಿ (ಫೆಡರೇಶನ್ ಇಂಟರ್ನ್ಯಾಷನಲ್ ಫುಟ್ಬಾಲ್ ಅಸೋಸಿಯೇಷನ್ ಅಥವಾ ಇಂಟರ್ನ್ಯಾಷನಲ್ ಫೆಡರೇಶನ್ ಆಫ್ ಅಸೋಸಿಯೇಷನ್ ಫುಟ್ಬಾಲ್) COVID 19 ಮಾರಕ ವೈರಾಣುವನ್ನು ಎದುರಿಸಲು ಅಭಿಯಾನ ಆರಂಭಿಸಿದ್ದು ಈ ಅಭಿಯಾನಕ್ಕಾಗಿ ಒಟ್ಟು 28 ಫುಟ್ಬಾಲ್ ತಾರೆಯರನ್ನು ಆಯ್ಕೆ ಮಾಡಿದ್ದು ಇದರಲ್ಲಿ, ಭಾರತೀಯ ಫುಟ್ಬಾಲ್ ತಂಡದ ನಾಯಕರಾದ ಸುನಿಲ್ ಚೆಟ್ರಿ ಅವರು ಕೂಡ ಸ್ಥಾನ ಪಡೆದಿದ್ದಾರೆ.

* ಕರೋನಾ ವೈರಸ್ ವಿರುದ್ಧ ಹೋರಾಡಲು ಮತ್ತು ಜನರಲ್ಲಿ ಜಾಗೃತಿ ಮೂಡಿಸಲು FIFA ವಿಶ್ವ ಆರೋಗ್ಯ ಸಂಸ್ಥೆಯೊಂದಿಗೆ ಕೈಜೋಡಿಸಿ ಅಭಿಯಾನವನ್ನು ಪ್ರಾರಂಭಿಸಿದೆ.

# Current affairs of March 2020 from KPSC Vaani

## 27 03 2020 COVID 19 : ಪ್ರಧಾನ ಮಂತ್ರಿಗಳಿಂದ ಗರಿಬ್ ಕಲ್ಯಾಣ ಅನ್ನ ಯೋಜನೆ ಆರಂಭ




ದಿನಾಂಕ ಮಾರ್ಚ್ 26, 2020 ರಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ ಅವರು ಪ್ರಧಾನ್ ಮಂತ್ರಿ ಗರಿಬ್ ಕಲ್ಯಾಣ ಅನ್ನ ಯೋಜನೆಗೆ ಚಾಲನೆ ನೀಡಿದರು. ದೇಶದಲ್ಲಿ ವ್ಯಾಪಿಸುತ್ತಿರುವ COVID 19 ನಿಯಂತ್ರಿಸಲು ಮತ್ತು ಅದರ ಪರಿಣಾಮಗಳ ವಿರುದ್ಧ ಹೋರಾಡಲು ಆರ್ಥಿಕ ಸಹಾಯ ನೀಡುವ ಯೋಜನೆಯಾಗಿದೆ. ಈ ಯೋಜನೆಯಡಿಯಲ್ಲಿ ಸುಮಾರು 1.7 ಲಕ್ಷ ಕೋಟಿ ರೂ ಬಿಡುಗಡೆಗೊಳಿಸಿದೆ.

* ಈ ಯೋಜನೆಯಡಿ ಸುಮಾರು 80 ಕೋಟಿ ಜನರಿಗೆ ಮುಂದಿನ ಮೂರು ತಿಂಗಳವರೆಗೆ ಹೆಚ್ಚುವರಿ 5 ಕೆಜಿ ಉಚಿತ ಅಕ್ಕಿ ಮತ್ತು ಗೋಧಿ ಸಿಗಲಿದೆ. ಜೊತೆಗೆ ಪ್ರತಿ ಮನೆಗೆ 1 ಕೆಜಿ ಉಚಿತ ದ್ವಿದಳ ಧಾನ್ಯಗಳನ್ನು ನೀಡಲಾಗುವದು.
* ಈ ಯೋಜನೆಯಡಿ ವೈರಸ್ ವಿರುದ್ಧದ ಹೋರಾಟದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು, ನೈರ್ಮಲ್ಯ ಕಾರ್ಮಿಕರು, ದಾದಿಯರು, ಅರೆವೈದ್ಯರು ಮತ್ತು ಇತರ ಸಿಬ್ಬಂದಿಗೆ ವಿಮಾ ಯೋಜನಾ ರಕ್ಷಣೆ ನೀಡುತ್ತದೆ.
* ಸುಮಾರು 3 ಕೋಟಿ ಜನ ವೃದ್ಧಾಪ್ಯ, ವಿಕಲಚೇತನ ಮತ್ತು ಪಿಂಚಣಿದಾರರಿಗೆ ನೇರ 1000 ರೂಪಾಯಿ ಹಣ ವರ್ಗಾವಣೆಮಾಡಲಾಗುವದು. ಇದರಿಂದ 3 ಕೋಟಿ ಜನರಿಗೆ ಅನುಕೂಲವಾಗಲಿದೆ.


## 27 03 2020 ಕೇಂದ್ರ ಸರ್ಕಾರದಿಂದ "ಸ್ಟೇ ಹೋಮ್ ಇಂಡಿಯಾ ವಿತ್ ಬುಕ್ಸ್" ಆರಂಭ



ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಪುಸ್ತಕ ಟ್ರಸ್ಟ್ COVID 19 ನಿಂದಾಗಿ ವಿಧಿಸಿರುವ ಲಾಕ್ ಡೌನ್ ನಿಂದಾಗಿ ಮನೆಯಲ್ಲಿರುವ ಭಾರತೀಯರಿಗಾಗಿ "ಸ್ಟೇ ಹೋಮ್ ಇಂಡಿಯಾ ವಿತ್ ಬುಕ್ಸ್" ಅಭಿಯಾನವನ್ನು ಆರಂಭಿಸಿದೆ, ಇದರಿಂದಾಗಿ NBT (ರಾಷ್ಟ್ರೀಯ ಪುಸ್ತಕ ಟ್ರಸ್ಟ್) ನ ಅಧಿಕೃತ ಜಾಲತಾಣದಿಂದ ಸುಮಾರು 100 ಕ್ಕೂ ಹೆಚ್ಚು ಪುಸ್ತಕಗಳನ್ನು ಸಾರ್ವಜನಿಕರು ಡೌನ್‌ಲೋಡ್ ಮಾಡಿಕೊಂಡು ಓದಬಹುದಾಗಿದೆ. ಈ ಪುಸ್ತಕಗಳು ಭಾರತೀಯ ಭಾಷೆಗಳಾದ ಇಂಗ್ಲಿಷ್, ಹಿಂದಿ, ಮರಾಠಿ, ಗುಜರಾತಿ, ತೆಲುಗು, ಕೊಕ್ಬೊರೊಕ್, ಬೋಡೋ, ಮಿಜೊ, ತಮಿಳು, ನೇಪಾಳಿ, ಕನ್ನಡ, ಉರುಡು, ಮಲಯಾಳಂ, ತೆಲುಗು ಇತ್ಯಾದಿಗಳಲ್ಲಿ ಲಭ್ಯವಿವೆ. ರಾಷ್ಟ್ರೀಯ ಪುಸ್ತಕ ಟ್ರಸ್ಟ್: ನ್ಯಾಷನಲ್ ಬುಕ್ ಟ್ರಸ್ಟ್ ಅನ್ನು 1957 ರಲ್ಲಿ ಸ್ಥಾಪಿಸಲಾಯಿತು. ಈ ಟ್ರಸ್ಟ್ ಪ್ರಕಾಶನ, ಭಾರತೀಯ ಪುಸ್ತಕಗಳ ಪ್ರಚಾರ, ಮಕ್ಕಳ ಸಾಹಿತ್ಯ ಸೇರಿ ವಿವಿಧ ಚಟುವಟಿಕೆಗಳಲ್ಲಿ ನಿರತವಾಗಿರುತ್ತದೆ.

# Current affairs of March 2020 from KPSC Vaani

## 27 03 2020 COVID 19ವೈರಸ್ : 2021ರಜನಗಣತಿಮತ್ತುNPR ನವೀಕರಣಮುಂದೂಡಲಾಗಿದೆ



ಬರುವ ದಿನಗಳಲ್ಲಿ ಜನಗಣತಿ 2021 ಅನ್ನು ಎರಡು ಹಂತಗಳಲ್ಲಿ ನಡೆಸಲು ಕೇಂದ್ರ ಸರ್ಕಾರ ಯೋಜಿಸಿತ್ತು, ಮೊದಲ ಹಂತವನ್ನು 2020 ಏಪ್ರಿಲ್ ಸೆಪ್ಟೆಂಬರ್ ನಡುವೆ ಮತ್ತು ಎರಡನೇ ಹಂತವನ್ನು ಫೆಬ್ರುವರಿ 2021 ರಲ್ಲಿ ನಡೆಸಲು ಸಿದ್ಧತೆ ಆರಂಭಿಸಲಾಗಿತ್ತಾದರೂ ಕರೋನ ವೈರಸ್ ಭೀತಿಯಿಂದ ಪ್ರಕ್ರಿಯೆಯನ್ನು ಮುಂದೂಡಲಾಗಿದೆ. ಇದರ ಜೊತೆಗೆ ಎನ್‌ಪಿಆರ್ ನವೀಕರಣವನ್ನು ಪ್ರಕ್ರಿಯೆಯನ್ನು ಸಹ ಮುಂದೂಡಲಾಗಿದೆ.

## 27 03 2020 G 20 ರಾಷ್ಟ್ರಗಳಿಂದ ಕೊರೋನಾ ವಿರುದ್ಧದ ಹೋರಾಟಕ್ಕೆ 5 ಟ್ರಿಲಿಯನ್ ಡಾಲರ್



ನವದೆಹಲಿ: ಕೊರೋನಾವೈರಸ್ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು G20 ರಾಷ್ಟ್ರಗಳು ಜಾಗತಿಕ ಆರ್ಥಿಕತೆಗೆ 05 ಟ್ರಿಲಿಯನ್ ಡಾಲರ್ ಮೊತ್ತವನ್ನು ತೊಡಗಿಸಲು ಒಪ್ಪಿಗೆ ಸೂಚಿಸಿವೆ. G 20 ಎಲ್ಲ ಸದಸ್ಯ ರಾಷ್ಟ್ರಗಳು ವಿಶ್ವ ಆರೋಗ್ಯ ಸಂಸ್ಥೆ (WHO) ನೇತೃತ್ವದ 'ಕೋವಿಡ್ 19 ಒಗ್ಗಟ್ಟು ಪ್ರತಿಸ್ಪಂದನಾ ನಿಧಿ'ಗೆ ಈ ಮೊತ್ತವನ್ನು ಕೊಡುಗೆ ನೀಡಲು ಆಸಕ್ತಿ ತೋರಿವೆ.

* ಈ ವರ್ಷಜಿ 20ಒಕ್ಕೂಟದಅಧ್ಯಕ್ಷಸ್ಥಾನವನ್ನುಸೌದಿಅರೇಬಿಯಾರಾಷ್ಟ್ರಹೊಂದಿದೆ.

# Current affairs of March 2020 from KPSC Vaani

27 03 2020 ಅಂತಾರಾಷ್ಟ್ರೀಯ ವಿಮಾನಗಳ ಮೇಲಿನ ನಿರ್ಬಂಧ ಎಪ್ರಿಲ್ 14 ರವರೆಗೆ ಮುಂದೂಡಿಕೆ




ಹೊಸದಿಲ್ಲಿ: ದೇಶದಲ್ಲಿ ವ್ಯಾಪಿಸುತ್ತಿರುವ ಕೊರೋನವೈರಸ್ ಭೀತಿ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ವಿಮಾನಗಳ ಮೇಲಿನ ನಿರ್ಬಂಧ ಎಪ್ರಿಲ್ 14ರವರೆಗೆ ಮುಂದುವರೆಸುವದಾಗಿ ಕೇಂದ್ರ ಸರಕಾರ ಘೋಷಿಸಿದೆ. ಈ ಮುಂಚೆ ಒಂದು ವಾರದ ಅವಧಿಗೆ ವಿಧಿಸಿದ್ದ ನಿಷೇಧವನ್ನು ಈಗ ಮತ್ತೆ ಮುಂದೂಡಿ ಏಪ್ರಿಲ್ 14 ವರೆಗೂ ವಿಸ್ತರಿಸಲಾಗಿದೆ. ಇನ್ನುಳಿದಂತೆ ದೇಶಿಯ ವಿಮಾನಗಳ ಮೇಲೆ ದಿನಾಂಕ ಮಾರ್ಚ್ 31ರವರೆಗೆ ನಿಷೇಧ ಹೇರಲಾಗಿದೆ.

27 03 2020 ಭಾರತದ ಅತಿದೊಡ್ಡ 'ಕೊರೋನಾ' ಆಸ್ಪತ್ರೆ ನಿರ್ಮಾಣಕ್ಕೆ ಒಪ್ಪಂದ



ಭುವನೇಶ್ವರ್ : ಮಾರಕ ಕರೋನ ವೈರಸ್ ದೇಶದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆ ಕೋರೋನಾ ವೈರಸ್ ಚಿಕಿತ್ಸೆಗೆ ದೇಶದ ಅತಿ ದೊಡ್ಡ ಆಸ್ಪತ್ರೆ ನಿರ್ಮಿಸಲು ಒಡಿಶಾ ಸರ್ಕಾರ ತೀರ್ಮಾನಿಸಿದೆ. 1000 ಹಾಸಿಗೆಗಳ ಸೌಲಭ್ಯ ಹೊಂದಿರಲಿರುವ ಈ ಆಸ್ಪತ್ರೆ ನಿರ್ಮಾಣಕ್ಕೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಒಪ್ಪಂದವು ಒಡಿಶಾ ರಾಜ್ಯ ಸರ್ಕಾರ, ಕಾರ್ಪೊರೇಟ್ ಕಂಪನಿಗಳು ಮತ್ತು ಎರಡು ಮೆಡಿಕಲ್ ಕಾಲೇಜುಗಳ ಮಧ್ಯೆ ಏರ್ಪಟ್ಟಿದೆ. ಈ ಆಸ್ಪತ್ರೆಯನ್ನು ಒಡಿಶಾದ ರಾಜಧಾನಿ ಭುವನೇಶ್ವರದಲ್ಲಿ ನಿರ್ಮಾಣ ಮಾಡಲಾಗುವುದು.

# Current affairs of March 2020 from KPSC Vaani

28 03 2020 ಕೋರೋಣ ವೈರಸ್ ವಿರುದ್ಧ ಹೋರಾಡಲು ಭಾರತಕ್ಕೆ ನೆರವು ನೀಡಿದ ಅಮೆರಿಕ



ವಾಷಿಂಗ್ಟನ್: ಜಗತ್ತಿನಾದ್ಯಂತ ವ್ಯಾಪಿಸಿರುವ ಕೊರೊನಾ ವೈರಸ್ ವಿರುದ್ಧ ಹೋರಾಡಲು ಭಾರತಕ್ಕೆ 29ಲಕ್ಷಡಾಲರ್ (ಸುಮಾರು₹21.71ಕೋಟಿ)ರೂಪಾಯಿಸೇರಿದಂತೆವಿವಿಧ64ದೇಶಗಳಿಗೆಒಟ್ಟು 17.40 ಕೋಟಿ ಡಾಲರ್ (₹1,300 ಕೋಟಿ) ಮೊತ್ತದ ಆರ್ಥಿಕ ಸಹಾಯವನ್ನು ಅಮೆರಿಕ ಘೋಷಿಸಿದೆ.

* ಈಗಾಗಲೇ ಫೆಬ್ರುವರಿಯಲ್ಲಿ ಅಮೆರಿಕ 100 ದಶಲಕ್ಷ ಡಾಲರ್ ಮೊತ್ತದ ಹಣವನ್ನು ಘೋಷಿಸಿದ್ದು ಪ್ರಸ್ತುತ ಹೆಚ್ಚುವರಿಯಾಗಿ ಈ ಸಹಾಯಧನವನ್ನು ಘೋಷಿಸಿದೆ.

28 03 2020 ಮಾರ್ಚ್ 28: ಅರ್ಥ್ ಅವರ್ 2020




ನವದೆಹಲಿ : ಇದೆ ಮಾರ್ಚ್ 28 ರಂದು ಜಗತ್ತಿನಾದ್ಯಂತ ಅರ್ಥ್ ಅವರ್ ಆಚರಿಸಲಾಗುತ್ತದೆ. ಇದೇ ಶನಿವಾರ ಮಾರ್ಚ್ 28 ರಂದು ರಾತ್ರಿ 8.30 ರಿಂದ 9.30 ರವರೆಗೆ ಎಲ್ಲ ಮನೆಯ/ಕಚೇರಿ/ಕಾರ್ಖಾನೆ ವಿದ್ಯುತ್ ದೀಪಗಳು ಬಂದ್ ಆಗಲಿವೆ. ಈ ಆಚರಣೆಯ ಹಿಂದಿರುವ ಮುಖ್ಯ ಉದ್ದೇಶ ಜಾಗತಿಕ ತಾಪಮಾನ ನಿಯಂತ್ರಣ ಮತ್ತು ಏರುತ್ತಿರುವ ಪರಿಸರ ಮಾಲಿನ್ಯವನ್ನು ತಡೆಯುವುದಾಗಿದೆ. ಒಟ್ಟು 170 ದೇಶಗಳ ವಿವಿಧ ನಗರಗಳಲ್ಲಿ ವಿದ್ಯುತ್ ದೀಪಗಳನ್ನು ಸುಮಾರು 8:30 ರಿಂದ 9:30 ರ ಸಮಯದಲ್ಲಿ ಒಂದು ಗಂಟೆ ಕಾಲಬಂದ್ಮಾಡುವಮೂಲಕಅರ್ಥ್ಅವರ್ಆಚರಣೆಯನ್ನುಆಚರಿಸಲಾಗುತ್ತದೆ.

ಅರ್ಥ್ಅವರ್ಎಂದರೇನು?
2007ರಲ್ಲಿ ಸಿಡ್ನಿಯಲ್ಲಿ ಆಸ್ಟ್ರೇಲಿಯಾದಲ್ಲಿರುವ ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್(world wide fund for nature) ಸ್ವಯಂ ಸೇವಾ ಸಂಸ್ಥೆ ಈ ಆಂದೋಲನದ ಹುಟ್ಟುಹಾಕಿತು. ಸಾಮಾನ್ಯವಾಗಿ ಮಾರ್ಚ್ 28 ಅಥವಾ 29 ಇದನ್ನು ಆಚರಿಸಲಾಗುತ್ತದೆ.

# Current affairs of March 2020 from KPSC Vaani

28 03 2020 ಕರ್ನಾಟಕ ಆರೋಗ್ಯ ಇಲಾಖೆಯಿಂದ ಕೊರೋನಾ ವಾಚ್ App ಬಿಡುಗಡೆ




ಬೆಂಗಳೂರು : ಕೊರೋನಾ ವೈರಸ್ ಸೋಂಕಿನ ಕುರಿತ ಮಾಹಿತಿಗಳಾದ ಸೋಂಕಿತ ರೋಗಿಗಳ ಮಾರ್ಗ ನಕ್ಷೆಗಳು, ಕೊರೋನಾ ಚಿಕಿತ್ಸೆ ನೀಡುವ ಆಸ್ಪತ್ರೆಗಳು, ಸಹಾಯವಾಣಿ ಸಂಖ್ಯೆಗಳು ಸೇರಿದಂತೆ ವಿವಿಧ ರೀತಿಯ ಮಾಹಿತಿಯನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರದ ಆರೋಗ್ಯ ಇಲಾಖೆಯು ಕರೋನ ವಾಚ್ App ಬಿಡುಗಡೆ ಮಾಡಿದೆ.

* ಕರ್ನಾಟಕ ಆರೋಗ್ಯ ಇಲಾಖೆ ಬಿಡುಗಡೆ ಮಾಡಿರುವ Corona ಆಯಪ್ ಆಂಡ್ರಾಯ್ಡ್ ಅವತರಣಿಕೆಯಲ್ಲಿ ಲಭ್ಯವಿದ್ದು, ಈ ಆಯಪ್ ಅನ್ನು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ.

*KSRSACKGICಈ ಆಯಪ್ ಅಭಿವೃದ್ಧಿ ಪಡಿಸಿದೆ.

28 03 2020 RBIಯಿಂದ ರೆಪೋ ದರ 5.15ರಿಂದ 4.4ಕ್ಕೆ ಇಳಿಕೆ




ಕೊರೊನಾವೈರಸ್‌ನಿಂದಾಗಿ ಭಾರತವವು 21 ದಿನಗಳವರೆಗೆ ಲಾಕ್‌ಡೌನ್ ಮಾಡಲಾಗಿದ್ದು, ಈ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ರೆಪೋ ಬಡ್ಡಿ ದರಗಳನ್ನು 5.1 ರಿಂದ 4.4ಕ್ಕೆ ಇಳಿಕೆ ಮಾಡಿದೆ. ಈ ಕುರಿತು ಸುದ್ದಿಗೋಷ್ಠಿ ನಡೆಸಿ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಮಾಹಿತಿ ನೀಡಿದ್ದಾರೆ.

# Current affairs of March 2020 from KPSC Vaani

28 03 2020 ಕರೋನ ವೈರಸ್: ಸಾರ್ಕ್ ರಾಷ್ಟ್ರಗಳ ಸಮಾನ ಎಲೆಕ್ಟ್ರಾನಿಕ್ ವೇದಿಕೆ ಸೃಷ್ಟಿಗೆ ಭಾರತ ಸಲಹೆ




ನವದೆಹಲಿ: ಕೊರೋನಾ ವೈರಸ್ ವಿರುದ್ಧ ಹೋರಾಡಲು ಏಕ ಎಲೆಕ್ಟ್ರಾನಿಕ್ ವೇದಿಕೆ ಆರಂಭಿಸಬೇಕೆಂದು ಭಾರತದ ಪ್ರಧಾನಿ ಸಾರ್ಕ್ ರಾಷ್ಟ್ರಗಳಿಗೆ ಸಲಹೆ ನೀಡಿದೆ. ಈ ಏಕ ಎಲೆಕ್ಟ್ರಾನಿಕ್ ವೇದಿಕೆಯ ಮೂಲಕ ಸೋಂಕಿನ ವಿರುದ್ಧ ಹೋರಾಡುವ ಮಾಹಿತಿ, ಜ್ಞಾನ ಮತ್ತು ಅತ್ಯುತ್ತಮ ಕಾರ್ಯಾಚರಣೆಗಳನ್ನು ಪರಸ್ಪರ ಹಂಚಿಕೊಳ್ಳಲು ನೆರವಾಗುತ್ತದೆ ಎಂದು ಗುರುವಾರ ನಡೆದ ಸಾರ್ಕ್ ರಾಷ್ಟ್ರಗಳ ಸಭೆಯಲ್ಲಿ ಭಾರತ ತನ್ನ ಈ ಸಲಹೆ ತಿಳಿಸಿದೆ.

29 03 2020 ಬೆಲ್ಜಿಯಂ ರಾಜಧಾನಿ ಬ್ರುಸ್ಸೆಲ್ಸ್‌ನಲ್ಲಿ ಬೆಕ್ಕಿಗೂ ಬಂತೂ ಕಿಲ್ಲರ್ ಕರೊನಾ !



ಬ್ರುಸ್ಸೆಲ್ಸ್ : ಬೆಲ್ಜಿಯಂ ರಾಜಧಾನಿ ಬ್ರುಸ್ಸೆಲ್ಸ್‌ನಲ್ಲಿರುವ ಮನೆಯಲ್ಲಿ ಸಾಕಿರುವ ಸಾಕು ಬೆಕ್ಕಿನಲ್ಲಿ ಕರೊನಾ ಸೋಂಕಿತರ ರೋಗ ಲಕ್ಷಣಗಳು ಕಂಡುಬಂದಿವೆ ಎಂದು ವರದಿಯಾಗಿದೆ. ಈ ಬೆಕ್ಕಿಗೆ ಮನೆಯ ಮಾಲೀಕನ ಮೂಲಕ ಸೋಂಕು ತಗುಲಿರಬಹುದೆಂಬ ಶಂಕೆ ವ್ಯಕ್ತವಾಗಿದೆ. ಈ ಬೆಕ್ಕಿನ ಮಾಲೀಕನಿಗೆ ಒಂದು ವಾರದ ಮುಂಚೆಯೇ ಕರೊನಾ ಲಕ್ಷಣಗಳು ಕಂಡುಬಂದಿದ್ದು ಇದೀಗ ಅದು ಮನೆ ಸಾಕು ಬೆಕ್ಕಿಗೂ ವ್ಯಾಪಿಸಿದೆ ಎಂದು ನಂಬಲಾಗಿದೆ. ಈ ಬೆಕ್ಕಿಗೆ ಕರೋನ ರೋಗ ಲಕ್ಷಣಗಳು ಇರುವುದಾಗಿ ಬ್ರುಸ್ಸೆಲ್ಸ್‌ನ ಘೆಂಟ್ ವಿಶ್ವವಿದ್ಯಾಲಯದ ಪಶುವೈದ್ಯಕೀಯ ಔಷಧ ವಿಭಾಗದ ಡಾಕ್ಟರಲ್ ಸಂಶೋಧಕ ಪ್ರೊಫೆಸರ್ ಸ್ಟೀವನ್ ವ್ಯಾನ್ ಗುಚ್ಟ್ ತಿಳಿಸಿದ್ದಾರೆ.

# Current affairs of March 2020 from KPSC Vaani

## 29 03 2020 ಕೋವಿಡ್ 19 ವೈರಸ್ ಬಗ್ಗೆ ಜಾಗೃತಿಗಾಗಿ ಕೇಂದ್ರದಿಂದ ಹೊಸ ಆಯಪ್




ಕೋವಿಡ್ 19 ವೈರಸ್ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು 'ಕೊರೊನಾ ಕವಚ್' ಎಂಬ ಹೊಸ ಮೊಬೈಲ್ ಅಪ್ಲಿಕೇಷನ್ ಅನ್ನು ರೂಪಿಸಿದೆ. ಈ ಆಯಪ್ ಅನ್ನು ಶೀಘ್ರದಲ್ಲೇ ಕೇಂದ್ರವು ಬಿಡುಗಡೆಗೊಳಿಸಲಿದೆ. ಕೇಂದ್ರ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ಇಲಾಖೆ ವತಿಯಿಂದ ಸಿದ್ಧಪಡಿಸಿರುವ ಈ ಅಯಪ್ ಆಯಂಡ್ರಾಯ್ಡ್ ಹಾಗೂ ಐಫೋನ್ ಗಳಲ್ಲಿ ಲಭ್ಯವಾಗಲಿದೆ.

ಆಯಪ್ ನ ವಿಶೇಷತೆ:
ಲೊಕೇಷನ್ ಸೇವೆಯನ್ನಾಧರಿಸಿ ಕೆಲಸ ಮಾಡುವ 'ಕೊರೊನಾ ಕವಚ್ ಆಯಪ್' ಮೊಬೈಲ್ ಬಳಕೆದಾರನ ಚಲನವಲನಗಳನ್ನು ಗಮನಿಸಿ, ಆ ವ್ಯಕ್ತಿಯು ಕರೋನ ಸೋಂಕಿತರನ್ನು ಭೇಟಿಯಾಗಿದ್ದಾರೆ ಈ ಕುರಿತು ಮಾಹಿತಿ ನೀಡುತ್ತದೆ. ಆರಂಭದಲ್ಲಿ ಈ ಆಯಪ್ ಇಂಗ್ಲೀಷ್ ಮತ್ತು ಹಿಂದಿ ಭಾಷೆಯಲ್ಲಿ ಲಭ್ಯವಿರಲಿದೆ.

## 29 03 2020 ಕೊರೊನಾ ವಿರುದ್ಧದ ಹೋರಾಟಕ್ಕೆ 1500 ಕೋಟಿ ರುಪಾಯಿ ದೇಣಿಗೆ ನೀಡಿದ ಟಾಟಾ ಟ್ರಸ್ಟ್



ಭಾರತಧ್ಯಂತ ವ್ಯಾಪಿಸುತ್ತಿರುವ ಮಹಾಮಾರಿ ಕರೋನ ವೈರಸ್ ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಟಾಟಾ ಟ್ರಸ್ಟ್ ವತಿಯಿಂದ ಕೇಂದ್ರ ಸರ್ಕಾರಕ್ಕೆ 1500 ಕೋಟಿ ರೂಪಾಯಿ ದೇಣಿಗೆ ನೀಡುವುದಾಗಿ ಘೋಷಿಸಿದೆ. ಈ ಮೂಲಕ ಕೊರೊನಾ ವಿರುದ್ಧದ ಹೋರಾಟಕ್ಕೆ ಅತಿ ದೊಡ್ಡ ಕೊಡುಗೆ ನೀಡಿದ ಖಾಸಗಿ ವಲಯವಾಗಿದೆ. ಈ ಕೊಡುಗೆಯು ವೈದ್ಯಕೀಯ ಸಿಬ್ಬಂದಿಗೆ ವೈಯಕ್ತಿಕ ರಕ್ಷಣಾ ಸಾಧನಗಳ ಪೂರೈಕೆಗೆ, ಉಸಿರಾಟದ ವ್ಯವಸ್ಥೆಗಳು, ಪರೀಕ್ಷೆ ಕಿಟ್ ಖರೀದಿಸಲು, ಮಾಡ್ಯುಲರ್ ಚಿಕಿತ್ಸಾ ಸೌಲಭ್ಯ ಸೇರಿ ವಿವಿಧ ಕೊಡುಗೆಗಳಿಗಾಗಿ ಈ ಹಣವನ್ನು ನೀಡಲಿದೆ.

# Current affairs of March 2020 from KPSC Vaani

30 03 2020 ಮತ್ತೆ ಕ್ಷಿಪಣಿ ಉಡಾವಣೆ ಮಾಡಿದ ಉತ್ತರ ಕೊರಿಯಾ



ಸಿಯೋಲ್: ಉತ್ತರ ಕೊರಿಯಾ ಭಾನುವಾರ(ಮಾರ್ಚ್ 29) ಎರಡು ಖಂಡಾಂತರ ಕ್ಷಿಪಣಿಗಳ ಪ್ರಯೋಗ ನಡೆಸಿದ್ದು, ಈ ಬಗ್ಗೆ ದಕ್ಷಿಣ ಕೊರಿಯಾ ಮಾಹಿತಿ ಖಚಿತಪಡಿಸಿದೆ. ಈ ಕ್ಷಿಪಣಿಯ ಸ್ಫೋಟಕಗಳು ಗರಿಷ್ಠ 30 ಕಿಲೋಮೀಟರ್ ಎತ್ತರದಲ್ಲಿ ಸುಮಾರು 230 ಕಿಲೋಮೀಟರ್ ಹಾರಿರುವ ಬಗ್ಗೆ ದಕ್ಷಿಣ ಕೊರಿಯಾ ಮತ್ತು ಅಮೆರಿಕದ ಗುಪ್ತಚರ ಅಧಿಕಾರಿಗಳು ವಿವರಗಳನ್ನು ವಿಶ್ಲೇಷಿಸುತ್ತಿದ್ದಾರೆ.

30 03 2020 ಪಿಂಚಣಿದಾರರಿಗೆಕೇಂದ್ರದಿಂದ`PF'ವಿತ್‌ಡ್ರಾನಿಯಮ ಸಡಿಲಿಕೆ




ನವದೆಹಲಿ : ಕೊರೊನಾ ವೈರಸ್ ಭೀತಿ ಹಿನ್ನೆಲೆ ಭವಿಷ್ಯ ನಿಧಿ **(PF)** ಪಿಂಚಣಿದಾರರಿಗೆ ಪಿಎಫ್ ಹಣವನ್ನು ವಾಪಸ್ ಪಡೆಯುವ ನೌಕರರ ಭವಿಷ್ಯ ನಿಧಿ ಸಂಸ್ಥೆಯ (EPFO) ನಿಯಮ ಸಡಿಲಿಸಿದ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ. ನೌಕರರ ತಮ್ಮ ಮೂರು ತಿಂಗಳ ಮೂಲ ವೇತನ ಮತ್ತು ತುಟ್ಟಿಭತ್ಯೆ ಅಥವಾ ನೌಕರರ ಖಾತೆಯಲ್ಲಿರುವ ಒಟ್ಟು ಹಣದ ಶೇ. 75 ರಷ್ಟು ಈ ಎರಡರ ಪೈಕಿ ಯಾವುದು ಕಡಿಮೆ ಮೊತ್ತವೋ ಅದನ್ನು ವಾಪಸ್ ಪಡೆಯಬಹುದಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಪ್ರಕಟಣೆ ತಿಳಿಸಲಾಗಿದೆ.

# Current affairs of March 2020 from KPSC Vaani

30 03 2020 ಏರ್ ವೈಸ್ ಮಾರ್ಷಲ್ ಚಂದನ್ ಸಿಂಗ್ ರಾಥೋಡ್ ನಿಧನ



ದಿನಾಂಕ ಮಾರ್ಚ್ 29 ರ ಭಾನುವಾರದಂದು ಮಹಾವೀರ್ ಚಕ್ರ ಸ್ವೀಕರಿಸುವವರ ಏರ್ ವೈಸ್ ಮಾರ್ಷಲ್ ಚಂದನ್ ಸಿಂಗ್ ರಾಥೋಡ್ ಅವರು ಜೋಧ್ಪುರದ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು. ಇವರು 1962 ರ ಯುದ್ಧ ಮತ್ತು 1971 ರ ಯುದ್ಧದ ಸಮಯದಲ್ಲಿ ದೇಶಕ್ಕೆ ನೀಡಿದ ಸೇವೆ ಅನನ್ಯವಾಗಿದೆ. * ಮಹಾ ವೀರ ಚಕ್ರ : ಪರಮ್ ವೀರ್ ಚಕ್ರದ ನಂತರ ಮಹಾ ವೀರ್ ಚಕ್ರ ಎರಡನೇ ಅತ್ಯುನ್ನತ ಸೈನ್ಯ ಪ್ರಶಸ್ತಿಯಾಗಿದೆ. ಈ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಲಾಗುವುದು.

30 03 2020 ಮುಂಬೈನಲ್ಲಿ ಜನಸಂದಣಿಯನ್ನು ತಡೆಗಟ್ಟಲು APMC ಯಿಂದ ಮಾರ್ಗಸೂಚಿ ಬಿಡುಗಡೆ



ದೇಶಾದ್ಯಂತ ಕರೋನ ವೈರಸ್ ಭೀತಿಯಿಂದ ಹೇರಲಾಗಿರುವ ಲಾಕ್ ಡೌನ್'ನಿಂದಾಗಿ ಮುಂಬೈನ ಮಾರುಕಟ್ಟೆಗಳಲ್ಲಿ ಉಂಟಾಗಬಹುದಾದ ಜನಸಂದಣಿಯನ್ನು ತಡೆಗಟ್ಟಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದೆ. APMCಯಲ್ಲಿನ ತರಕಾರಿ ವ್ಯಾಪಾರಿಗಳು ಕರೋನ ವೈರಸ್‌ನಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸಲುವಾಗಿ ತಮ್ಮ ದೈನಂದಿನ ವಹಿವಾಟು ನಿಲ್ಲಿಸಿರುವುದರಿಂದ APMC ಸಮಿತಿಯು ಈ ಕ್ರಮಕ್ಕೆ ಮುಂದಾಗಿದೆ ಎಂದು ತಿಳಿದುಬಂದಿದೆ.

# Current affairs of March 2020 from KPSC Vaani

## 30 03 2020 COVID 19ವಿರುದ್ಧ ಹೋರಾಡಲು ಮತ್ತು 21ದಿನಗಳ ಲಾಕ್ ಡೌನ್ ನಂತರ ದೇಶವನ್ನು ಸಹಜ ಸ್ಥಿತಿಯತ್ತ ತರಲು PM ಕಚೇರಿಯಿಂದ ಸಮಿತಿ ರಚನೆ



ಕರೋನ ವೈರಸ್ ನಿಯಂತ್ರಣಕ್ಕಾಗಿ ಭಾರತದಲ್ಲಿ ವಿಧಿಸಲಾಗಿರುವ 21 ದಿನಗಳ ಲಾಕ್ ಡೌನ್ ನಂತರ ದಿನಗಳಲ್ಲಿ ಸಾಮಾನ್ಯ ಸ್ಥಿತಿಯನ್ನು ದೇಶದಲ್ಲಿ ಪುನ [illegible]ಪಿಸಲು ಪ್ರಧಾನ ಮಂತ್ರಿ ಕಚೇರಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ಆರೋಗ್ಯ ರಕ್ಷಣೆಯನ್ನು ಸುಧಾರಿಸಲು, ದೇಶದ ಆರ್ಥಿಕತೆಯನ್ನು ಮತ್ತೆ ಜಾರಿಗೆ ತರಲು ಉತ್ತಮ ಯೋಜನೆಗಳನ್ನು ರೂಪಿಸುವದು ಈ ಉನ್ನತ ಮಟ್ಟದ ಸಮಿತಿಯ ರಚನೆಯ ಮುಖ್ಯ ಉದ್ದೇಶವಾಗಿದೆ.

* ಈ ಸಮಿತಿಯ ಅಧ್ಯಕ್ಷತೆಯನ್ನು ಪ್ರಧಾನಮಂತ್ರಿಯ ಪ್ರಧಾನ ಕಾರ್ಯದರ್ಶಿ ಪಿ ಕೆ ಮಿಶ್ರಾ ಅವರು ವಹಿಸಲಿದ್ದಾರೆ.

## 30 03 2020 ಭಾರತಕ್ಕೆ ಸೌದಿ ಅರೇಬಿಯಾದಿಂದ ನಿರಂತರ LPG ಪೂರೈಕೆ




ಇಡೀ ಜಗತ್ತು COVID 19 ಮಾರಕ ವೈರಸ್ ವಿರುದ್ದ ಹೋರಾಡುತ್ತಿರುವ ಬೆನ್ನಲ್ಲೇ ಸೌದಿ ಅರೇಬಿಯಾ ನಿರಂತರವಾಗಿ ಭಾರತಕ್ಕೆ ಎಲ್‌ಪಿಜಿ ಅನಿಲವನ್ನು ಪೂರೈಸುವದಾಗಿ ಭಾರತಕ್ಕೆ ಭರವಸೆ ನೀಡಿದೆ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಿಳಿಸಿದ್ದಾರೆ.

* LPG ಆಮದು ಮಾಡಿಕೊಳ್ಳುವಲ್ಲಿ ಭಾರತವು ಇಡೀ ಜಗತ್ತಿನಲ್ಲಿಯೇ ಎರಡನೇ ಸ್ಥಾನದಲ್ಲಿದೆ. ಭಾರತದ ಅರ್ಧದಷ್ಟು LPG ಬೇಡಿಕೆಯನ್ನು ಮಧ್ಯಪ್ರಾಚ್ಯ ದೇಶಗಳಾದ ಕತಾರ್, ಸೌದಿ ಅರೇಬಿಯಾ, ಓಮನ್, ಕುವೈತ್‌ನಿಂದ ಪಡೆದಿತ್ತು.

# Current affairs of March 2020 from KPSC Vaani



# Current affairs of March 2020 from KPSC Vaani

30 03 2020 ಮೆಗಾ ಬ್ಯಾಂಕ್ ಬಲವರ್ಧನೆ ಯೋಜನೆಗೆ RBI ಅನುಮೋದನೆ ನೀಡಿದೆ




ದಿನಾಂಕ ಏಪ್ರಿಲ್ 1, 2020 ರಿಂದ 10 ರಾಜ್ಯ ಬ್ಯಾಂಕುಗಳ ವಿಲೀನಗೊಳಿಸಿ 4 ದೊಡ್ಡ ಬ್ಯಾಂಕುಗಳಾಗಿ ಜಾರಿಗೊಳಿಸಲು ಯೋಜನೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮುಂದಾಗಿದೆ. ವಿಲೀನ ಯೋಜನೆ

* ಈ ಯೋಜನೆಯ ಪ್ರಕಾರ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಅನ್ನು ಪಂಜಾಬ್ ನ್ಯಾಷನಲ್ ಬ್ಯಾಂಕ್ ಜೊತೆ ವಿಲೀನಗೊಳಿಸಲಾಗುವುದು.
* ಸಿಂಡಿಕೇಟ್ ಬ್ಯಾಂಕ್ ಅನ್ನು ಕೆನರಾ ಬ್ಯಾಂಕ್‌ನೊಂದಿಗೆ ವಿಲೀನಗೊಳಿಸಲಾಗುವದು.
* ಅಲಹಾಬಾದ್ ಬ್ಯಾಂಕ್ ಅನ್ನು ಇಂಡಿಯನ್ ಬ್ಯಾಂಕ್‌ನೊಂದಿಗೆ ವಿಲೀನ.
* ಆಂಧ್ರ ಬ್ಯಾಂಕ್ ಮತ್ತು ಕಾರ್ಪೊರೇಷನ್ ಬ್ಯಾಂಕ್ ಅನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ವಿಲೀನಗೊಳಿಸಬೇಕಾಗಿದೆ.

31 03 2020 ಲಾಕ್‌ಡೌನ್‌ನಿಂದ`ಹಣಕಾಸುವರ್ಷ'ವಿಸ್ತರಣೆಇಲ್ಲ:ಕೇಂದ್ರ ಸರ್ಕಾರ




ನವದೆಹಲಿ : ದೇಶಾದ್ಯಂತ ಕೊರೊನಾ ವೈರಸ್ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ ಲಾಕ್ ಡೌನ್ ಜಾರಿಯಲ್ಲಿದ್ದು, ಇದರಿಂದ 2019 20 ನೇ ಸಾಲಿನ ಹಣಕಾಸು ವರ್ಷದ ಅವಧಿಯನ್ನು ಹೆಚ್ಚಿಸಬಹುದೆಂದು ಜನರ ಮಧ್ಯೆ ಗಾಳಿ ಸುದ್ದಿ ಹರಿದಾಡುತ್ತಿದ್ದು ಈ ಬಗ್ಗೆ ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಿದ್ದು "ಹಣಕಾಸು ವರ್ಷವನ್ನು ವಿಸ್ತರಿಸುವುದಿಲ್ಲ" ಎಂದು ತಿಳಿಸಿದೆ. 2019 20 ನೇ ಸಾಲಿನ ಹಣಕಾಸು ವರ್ಷದ ಅವಧಿಯು ಮಾರ್ಚ್ 31 ರಂದು ಯಥಾಪ್ರಕಾರ ಪ್ರತಿವರ್ಷದಂತೆ ಮುಕ್ತಾಯವಾಗುತ್ತದೆ ಎಂದು ಕೇಂದ್ರ ಸಚಿವಾಲಯ ಸ್ಪಷ್ಟನೆ ನೀಡಿದೆ.

# Current affairs of March 2020 from KPSC Vaani

31 03 2020 ಕೊರೋನಾವೈರಸ್‌ನಿಂದಾಗಿವಿಶ್ವದಲ್ಲಿಸುಮಾರು11ದಶಲಕ್ಷ ಜನರು ಬಡತನಕ್ಕೊಳಗಾಗಬಹುದು: ವಿಶ್ವಬ್ಯಾಂಕ್ ವರದಿ




ವಾಷಿಂಗ್ಟನ್: ಚೀನಾದಲ್ಲಿ ಕಾಣಿಸಿಕೊಂಡು ಇದೀಗ ಇಡೀ ಜಗತ್ತನ್ನೇ ಕಾಡುತ್ತಿರುವ ಕೊರೋನಾ ವೈರಸ್ ಸೋಂಕುನಿಂದ ವಿಶ್ವದ ಬಹುತೇಕ ರಾಷ್ಟ್ರಗಳು ತತ್ತರಿಸಿವೆ. ಇದರ ಫಲವಾಗಿ ಪೂರ್ವ ಏಷ್ಯಾದಲ್ಲಿ ಸುಮಾರು11ದಶಲಕ್ಷಕ್ಕೂ ಅಧಿಕ ಜನರುಬಡತನಕ್ಕೊಳಗಾಗಲಿದ್ದಾರೆಎಂದುವಿಶ್ವಬ್ಯಾಂಕ್‌ವರದಿನೀಡಿ ಎಚ್ಚರಿಸಿದೆ.

31 03 2020 ಪ್ರಮುಖ ಸಾಮಾಜಿಕ ಮಾಧ್ಯಮ ವಾಟ್ಸ್ ಅಪ್ ನಿಂದ ವಿಡಿಯೋ ಸ್ಟೇಟಸ್ ಮಿತಿ 15 ಸೆಕೆಂಡ್




ನವದೆಹಲಿ : ಪ್ರಮುಖ ಸಾಮಾಜಿಕ ಮಾಧ್ಯಮವಾದ ವಾಟ್ಸ್ ಅಪ್ ಜಗತ್ತಿನಾದ್ಯಂತ ಕೋಟಿ ಕೋಟಿ ಜನರ ಮೆಚ್ಚಿನ ಮೆಸೆಂಜರ್ ಆಯಪ್ ಆಗಿದ್ದು. ಇದೀಗ, ಈ ಸಾಮಾಜಿಕ ಮಾಧ್ಯಮ ವಾಟ್ಸ್ ಅಪ್ ತನ್ನ ಸ್ಟೇಟಸ್ ಫೀಚರ್ ಅನ್ನು ಕೊಂಚ ಬದಲಾವಣೆ ಮಾಡಿದ್ದು, ಈ ಹಿಂದೆ 30 ಸೆಕೆಂಡ್ ಕಾಲವಧಿಯನ್ನು ಕಡಿತಗೊಳಿಸಿ ಅದನ್ನು 15 ಸೆಕೆಂಡ್‌ಗಳ ಮಿತಿಗೆ ಇಳಿಕೆ ಮಾಡಿದೆ.

# Current affairs of March 2020 from KPSC Vaani

31 03 2020 ವಿಶ್ವಸಂಸ್ಥೆ: ಭಾರತದ ಹಿರಿಯ ಅಧಿಕಾರಿ ಸುಧೀರ್ ರಾಜ್‌ಕುಮಾರ್ ರಾಜೀನಾಮೆ




ವಿಶ್ವಸಂಸ್ಥೆ: ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಂಟೋನಿಯೊ ಗುಟೆರೆಸ್ ಅವರಿಂದ 2017ರಲ್ಲಿ ನೇಮಕವಾದ ಭಾರತದ ಸುಧೀರ್ ರಾಜ್‌ಕುಮಾರ್ ಅವರು ವಿಶ್ವಸಂಸ್ಥೆಯಲ್ಲಿನ ತಾವು ಹೊಂದಿದ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಭಾರತದ ಸುಧೀರ್ ರಾಜ್‌ಕುಮಾರ್ ಅವರು ವಿಶ್ವಸಂಸ್ಥೆಯ ಜಂಟಿ ಸಿಬ್ಬಂದಿ ಪಿಂಚಣಿ ನಿಧಿಗೆ ಸಂಬಂಧಿಸಿದ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಗಳ ಪ್ರತಿನಿಧಿ ಸಮಿತಿಯ ಅಧಿಕಾರಿಯಾಗಿದ್ದರು.

31 03 2020 "ExtraordinaryG 20ವ್ಯಾಪಾರಮತ್ತುಹೂಡಿಕೆ ಸಮಾವೇಶ"




ದಿನಾಂಕ ಮಾರ್ಚ್ 31, 2020 ರಂದು, ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ “Extraordinary G 20 ವ್ಯಾಪಾರ ಮತ್ತು ಹೂಡಿಕೆ ಸಮಾವೇಶ" ನಡೆಯಿತು. ಈ ಸಭೆಯಲ್ಲಿ ಭಾರತದಿಂದ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಭಾಗವಹಿಸಿದ್ದರು.

# Current affairs of March 2020 from KPSC Vaani

## 31 03 2020 ಭಾರತೀಯ ರೈಲ್ವೆಯಿಂದ 3.2 ಲಕ್ಷ ಪ್ರತ್ಯೇಕ ಹಾಸಿಗೆ(Bed)ತಯಾರಿ



ಭಾರತೀಯ ರೈಲ್ವೆ ಇಲಾಖೆಯು 2020ರ ಮಾರ್ಚ್ 31 ರವರೆಗೆ 20,000 ಬೋಗಿಗಳನ್ನು ಮಾರ್ಪಡಿಸಿ ಸುಮಾರು 3.2 ಲಕ್ಷ ಜನರಿಗೆ ಅನುಕೂಲವಾಗುವಂತೆ ಪ್ರತ್ಯೇಕ ಹಾಸಿಗೆಳನ್ನು ತಯಾರಿಸಿದೆ. ಇಲಾಖೆಯು ಇನ್ನೂ 80,000 ಹಾಸಿಗೆಗಳನ್ನು ಸೇರಿಸಲು 5,000 ಬೋಗಿಗಳನ್ನೂ ಮಾರ್ಪಾಡು ಮಾಡಲು ತಯಾರಿನಡೆಸಿದೆ.

* COVID 19 ರೋಗಿಗಳಿಗೆ ಚಿಕಿತ್ಸೆ ಭಾರತೀಯ ರೈಲ್ವೆ ಇಲಾಖೆಯು ಬೋಗಿಗಳನ್ನು ಪ್ರತ್ಯೇಕ ವಾರ್ಡ್‌ಗಳಾಗಿ ಪರಿವರ್ತನೆ ಮಾಡುವ ಕಾರ್ಯವನ್ನು ಆರಂಭಿಸಿದೆ.

## 31 03 2020 ಕೊರೋನಾ ವಿರುದ್ಧ ಹೋರಾಡಲು ಭಾರತ ಫ್ರಾನ್ಸ್ ನಡುವೆ ಒಪ್ಪಂದ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ದಿನಾಂಕ ಮಾರ್ಚ್ 31 ರಂದು ಫ್ರಾನ್ಸ್ ಅಧ್ಯಕ್ಷರಾದ ಎಮ್ಯಾನುಯೆಲ್ ಮ್ಯಾಕ್ರನ್ ಅವರೊಂದಿಗೆ ಕರೋನ ವೈರಸ್ ಹರಡುವುದನ್ನು ತಡೆಗಟ್ಟುವ ಕ್ರಮ, ಚಿಕಿತ್ಸೆ ಮತ್ತು ಲಸಿಕೆಗಳ ಬಗ್ಗೆ ಸಂಶೋಧನೆ ಕುರಿತು ಎರಡೂ ದೇಶಗಳ ತಜ್ಞ ತಂಡಗಳು ಸಕ್ರಿಯವಾಗಿ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲು ಉಭಯ ದೇಶಗಳ ನಾಯಕರು ದೂರವಾಣಿ ಮೂಲಕ ಸಂಭಾಷಣೆ ನಡೆಸಿದರು. ಅಲ್ಲದೆ, ಇಬ್ಬರೂ ನಾಯಕರು ಬಿಕ್ಕಟ್ಟಿನ ದೇಶೀಯ ಮತ್ತು ಅಂತರರಾಷ್ಟ್ರೀಯ ಅಂಶಗಳನ್ನು ಚರ್ಚಿಸಿದರು ಎಂದು ಪ್ರಧಾನಿ ಕಚೇರಿಯ ಹೇಳಿಕೆ ತಿಳಿಸಿದೆ.

# Current affairs of March 2020 from KPSC Vaani

